ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ ಮಾಲಿಕೆ

# ಹರಿಹರ-ರಾಘವಾಂಕ ಮತ್ತು ಜಾನಪದ

ಪ್ರೊ. ಶಿವರಾಮಯ್ಯ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ
ಅಕಾಡೆಮಿ ಬೆಂಗಳೂರು ೫೬೦ ೦೦೨

ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ-೪

# ಹರಿಹರ - ರಾಘವಾಂಕ ಮತ್ತು ಜಾನಪದ

ಶಿವರಾಮಯ್ಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು - ೫೬೦ ೦೦೨

*HARIHARA-RAGHAVANKA MATTU JANAPADA* (Classic Literature & Folklore Series-4) : *Written By. Shivaramayya Pub. M.S. Siddegowda Registrar, Janapada and Yakshagana Academy, Nrupatunga Road, Bangalore - 560 002.*

Pages XIII + 53 Price : Rs. 25/

© Publisher

*ಪ್ರಧಾನ ಸಂಪಾದಕರು :*

ಪ್ರೊ. ಎಚ್. ಜೆ. ಲಕ್ಕಪ್ಪಗೌಡ

*ಸಂಪಾದಕರು :*

ಪ್ರೊ. ಹಂಪ. ನಾಗರಾಜಯ್ಯ

ಮೊದಲ ಮುದ್ರಣ : ೧೯೯೭

ಬೆಲೆ : ರೂ. ೨೫/-

**ಛಾಯಾಕ್ಷರ ಜೋಡಣೆ:**

ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು - ೪೦ ✆ : 3402575

**ಮುದ್ರಕರು :**

ಸ್ನೇಹಾ ಪ್ರಿಂಟರ್ಸ್

೨೨, ೨ನೇ ಮೈನ್, ಅತ್ತಿಗುಪ್ಪೆ

ವಿಜಯನಗರ ೨ನೇ ಹಂತ

ಬೆಂಗಳೂರು - ೪೦ ✆ : 3302417

## ಪ್ರಧಾನ ಸಂಪಾದಕರ ಮಾತು

೧

ಲೋಕದ ಜ್ಞಾನ - ವಿಜ್ಞಾನಗಳ ತಾಯಿಬೇರು ಜಾನಪದ ಎಂಬುದು ಈಗಾಗಲೇ ಎಲ್ಲರಿಗೂ ಗೊತ್ತಿರುವ ಸಂಗತಿ. ಎಲ್ಲಾ ಸಾಹಿತ್ಯ, ಕಲೆ, ಸಮಾಜ ವಿಜ್ಞಾನಗಳು ಹಾಗೂ ಕೆಲಮಟ್ಟಿಗೆ ಎಲ್ಲಾ ಜೀವ ವಿಜ್ಞಾನಗಳು ಜಾನಪದದ ಪ್ರೇರಣೆಯಿಂದ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿವೆ, ಮುಖ್ಯ ಉದ್ದೇಶವನ್ನು ಎತ್ತರಿಸಿಕೊಂಡಿವೆ, ಸತ್ವವನ್ನು ಸಮೃದ್ಧಿಸಿಕೊಂಡಿವೆ ಎಂಬುದನ್ನು ಮರೆಯುವಂತಿಲ್ಲ. ಹಾಗೆಯೇ ಇದು ನಮ್ಮ ಸಾಹಿತ್ಯದ ಎಲ್ಲಾ ಸ್ತರಗಳಲ್ಲಿಯೂ ಒಂದಲ್ಲಾ ಒಂದು ರೀತಿಯಲ್ಲಿ ತನ್ನ ಉಸಿರನ್ನು ಬೆರೆಸಿದೆ ಎಂಬುದು ಆಳವಾದ ಸಂಶೋಧನೆಯ ಮೂಲಕ ವಿದಿತವಾಗಿದೆ.

೨

ಶಿಷ್ಟ ಸಾಹಿತ್ಯ ಅಕ್ಷರಸ್ಥರ ಸೃಷ್ಟಿಯಾದರೆ ಜನಪದ ಸಾಹಿತ್ಯ ಅನಕ್ಷರಸ್ಥರ ಸೃಜನಶೀಲ ಪ್ರತಿಭೆಯ ಅತಿ ಸಹಜವಾದ ಶಕ್ತ ಅಭಿವ್ಯಕ್ತಿ. ಆದ್ದರಿಂದ ಶಿಷ್ಟ ಸಾಹಿತ್ಯ ಹುಟ್ಟುವ ಮೊದಲೇ ಆದಿ ಮಾನವರು ತಮ್ಮ ದೈನಂದಿನ ನೋವು - ನಲಿವುಗಳನ್ನು, ಅನಿಸಿಕೆ-ಅನುಭವಗಳನ್ನು, ಕನಸು- ಕಲ್ಪನೆಗಳನ್ನು, ಕ್ರಿಯೆ-ಪ್ರತಿಕ್ರಿಯೆಗಳನ್ನು ಮೌಖಿಕವಾಗಿ ಹಾಡಿನ ಮೂಲಕ, ಕಥೆಯ ಮೂಲಕ, ಗಾದೆ ಒಗಟು ಒಡಪುಗಳ ಮೂಲಕ ತೋಡಿಕೊಂಡರು. ಇದು ಆಡು ಮಾತಿಗಿಂತ ವಿಶೇಷವಾದ ಧ್ವನಿಯನ್ನು, ಬನಿಯನ್ನು, ಶಕ್ತಿಯನ್ನು, ಪರಿಣಾಮವನ್ನು, ಹೊಸ ಹೊಳಹುಗಳನ್ನು ಒಳಗೊಂಡ ಕಾರಣದಿಂದ ಅವುಗಳನ್ನು ಮರೆಯುವುದು

ಸುಲಭವಾಗಲಿಲ್ಲ. ಹೀಗಾಗಿ ಅವುಗಳನ್ನು ಮೊದಲು ಕೇಳಿದ ಜನ ಮತ್ತೊಬ್ಬರಿಗೆ, ಮಗದೊಬ್ಬರಿಗೆ, ಇಡೀ ಸಮುದಾಯಕ್ಕೆ ತಮ್ಮ ಕಂಠ ಮತ್ತು ನಾಲಿಗೆಗಳ ಮೂಲಕ ದಾಟಿಸುತ್ತಾ ಬಂದರು. ಹೀಗಾಗಿ ಅದು ಅಂಬುತೀರ್ಥದಲ್ಲಿ ಹುಟ್ಟುವ ಶರಾವತಿಯಂತೆ ಚಿಕ್ಕದಾಗಿ, ಅಪ್ರಸಿದ್ಧವಾಗಿ ಹುಟ್ಟಿ, ಬರುಬರುತ್ತಾ ತೊರೆಯಾಗಿ ನೆರೆಯಾಗಿ ಮಹಾಪ್ರವಾಹವಾಗಿ ಹರಿಯಿತು. ಈ ಪ್ರವಾಹದಲ್ಲಿ ಜನತೆಯ ಜೀವನದ ಎಲ್ಲಾ ಮಗ್ಗುಲುಗಳು ಬಹುಮಟ್ಟಿಗೆ ಮೈ ತೆರೆದುಕೊಂಡವು. ಲಿಪಿಯ ಉಗಮದೊಡನೆ, ಅಕ್ಷರ ಕಲಿಕೆಯೊಡನೆ, ಶಿಕ್ಷಣ ಸಿಕ್ಕಿದಂತೆಲ್ಲಾ ಈ ಮೌಖಿಕ ಪರಂಪರೆಯ ಅನುಭವಗಳು ಪ್ರತಿಭಾವಂತ ಕವಿಗಳ ಮನಸ್ಸಿನ ಭೂಮಿಯಲ್ಲಿ ನೆಟ್ಟು ಅವರ ಕೃತಿಗಳಿಗೆ ಜೀವಧಾತುವನ್ನು ಒದಗಿಸಿದವು. ಈ ಸಂಗತಿ ಜಗತ್ತಿನ ಎಲ್ಲಾ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಏಕೆಂದರೆ ಸಾಹಿತ್ಯ ಎನ್ನುವುದು ಜನಜೀವನದಿಂದ ಹೊರತಾದುದಲ್ಲ. ಜನರಿಂದಲೇ ಹುಟ್ಟಿ, ಜನರಿಗಾಗಿ ಹುಟ್ಟಿ, ಜನರಿಗೆ ಪ್ರೇರಣೆಯನ್ನು ಕೊಡುವುದು ಈ ಸಾಹಿತ್ಯ. ಆದ್ದರಿಂದ ಒಂದು ಸಾಹಿತ್ಯ ಶಕ್ತವೂ ಉಪಯುಕ್ತವೂ ಪರಿಣಾಮಕಾರಿಯೂ ಪ್ರಾಮಾಣಿಕವೂ ಜೀವನಬದ್ಧವೂ ಮತ್ತು ಚಿರಂತನವೂ ಆಗಬೇಕಾದರೆ ಅದರಲ್ಲಿ ಜಾನಪದ ಜೀವನದ ಮುಖ್ಯಾಂಶಗಳು ಕಣ್ಣಡೆಯಬೇಕು. ಈ ದೃಷ್ಟಿಯಿಂದ ನೋಡಿದಾಗ ಜಾನಪದವನ್ನು ಹೊರತುಪಡಿಸಿದ ಯಾವ ಮಹಾಕೃತಿಯೂ ಸಾಹಿತ್ಯ ಲೋಕದಲ್ಲಿ ಆವಿರ್ಭವಿಸಿಲ್ಲ ಎಂಬ ಸತ್ಯ ಮನದಟ್ಟಾಗುತ್ತದೆ.

ಭಾರತದ ರಾಮಾಯಣ, ಮಹಾಭಾರತಗಳನ್ನೇ ಉದಾಹರಣೆಗೆ ತೆಗೆದುಕೊಂಡರೆ ಈ ಸಂಗತಿ ಸ್ಪಷ್ಟವಾಗುತ್ತದೆ. ರಾಮಾಯಣದ ವಸ್ತು ಮತ್ತು ಅದರ ಪಾತ್ರಗಳು ಇಂದಿಗೂ ಭಾರತೀಯರಿಗೆ ಆದರ್ಶದ ಸೆಲೆಗಳಾಗಿವೆ. ಈ ರಾಮಾಯಣದ ಕತೆ ಕೂಡ ಮೂಲತಃ ಜನಪದ ಗಾಯಕರಿಂದಲೇ ಸೃಷ್ಟಿಗೊಂಡಿದ್ದು ಮತ್ತು ಪ್ರಸಾರಗೊಂಡಿದ್ದು. ರಾಮಾಯಣದ ಬಾಲಕಾಂಡದಲ್ಲಿ ಕ್ರೌಂಚವಧೆಯ ಕಾರಣದಿಂದ ವ್ಯಾಧನಿಗೆ ಶಾಪಕೊಟ್ಟ ವಾಲ್ಮೀಕಿ ತನ್ನ ಎಲೆಮನೆಗೆ ಹೋದಮೇಲೆ ತಾನು ಕೊಟ್ಟ ಶಾಪ ಹೇಗೆ ತಂತ್ರೀಲಯ ಸಮನ್ವಿತವಾಗಿ, ಶ್ಲೋಕವಾಗಿ ಪರಿಣಮಿಸಿದೆ ಎಂಬುದನ್ನು ಕಂಡುಕೊಳ್ಳುತ್ತಾನೆ. ಅದೇ ವೇಳೆಗೆ ನಾರದ ಮಹರ್ಷಿ ಬಂದು ಶ್ರೀರಾಮನ ಕತೆಯನ್ನು ಹೇಳಿ ರಾಮಾಯಣ ಕೃತಿಯನ್ನು ರಚಿಸುವಂತೆ ಆಶೀರ್ವದಿಸುತ್ತಾನೆ. ಅಂದರೆ ಈಗಾಗಲೇ ರಾಮನೆಂಬ ಆದರ್ಶ ನಾಯಕನ,



ಸೀತೆ ಎಂಬ ಆದರ್ಶ ಸತಿಯ, ಲಕ್ಷ್ಮಣ-ಭರತರೆಂಬ ಆದರ್ಶ ಸಹೋದರರ, ಹನುಮಂತನೆಂಬ ಆದರ್ಶ ಸೇವಕನ ಕತೆ ತಲೆಮಾರಿನಿಂದ ತಲೆಮಾರಿಗೆ ಹಬ್ಬಿ ಜನಮನದಲ್ಲಿ ಹರಡಿ ಅತ್ಯಂತ ಪರಿಪಕ್ವ ಸ್ಥಿತಿಗೆ ಬೆಳೆದು ಬಂದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ವಾಸ್ತವವಾಗಿ ವಾಲ್ಮೀಕಿ ನಾರದ ಹೇಳಿದಂಥ ಕತೆಯಿಂದ ಪ್ರಭಾವಿತಗೊಂಡು ನಾಡಿನ ಉದ್ದಗಲಕ್ಕೂ ಕಾಡು, ಹಳ್ಳಿ, ನಗರಗಳೆನ್ನದೆ ಸಂಚರಿಸಿ ಜನಮನದಲ್ಲಿ ಸ್ಥಾಯಿಯಾಗಿದ್ದ ರಾಮ ಕತೆಯ ವಿವಿಧ ರೂಪಗಳನ್ನು ಸಂಗ್ರಹಿಸಿರಬೇಕು. ಹೀಗೆ ತಾನು ಸಂಗ್ರಹಿಸಿದ ರಾಮ ಕತೆಗೆ ಸಂಬಂಧಪಟ್ಟ ವೈವಿಧ್ಯಮಯ ಘಟನೆಗಳಿಗೆ ಒಂದು ಸುಸಾಂಗತ್ಯವನ್ನು ಕಲ್ಪಿಸಿ ಮಹಾಕಾವ್ಯವಾಗಿ ಹೆಣೆದಿರಬೇಕು. ರಾಮಾಯಣದಲ್ಲಿ ಬರುವ ಅಯೋಧ್ಯೆಯ, ಕಿಷ್ಕಿಂಧೆಯ ಮತ್ತು ಲಂಕೆಯ ಜನಜೀವನದ ಚಿತ್ರಗಳು ಆ ಕಾಲದ ಜನರ ಚಿತ್ರಗಳೇ ಆಗಿವೆ. ತಮ್ಮ ವಿವೇಚನೆಗೆ ಮೀರಿದ ಸಂಗತಿಗಳಿಗೆ, ತಮ್ಮ ಅಳತೆಗೆ ದಕ್ಕಲಾರದ ವ್ಯಕ್ತಿಗಳ ಜೀವನಕ್ಕೆ ಅತಿಮಾನುಷತೆಯನ್ನು ಆರೋಪಿಸುವುದು ಜನಪದರ ವಿಶಿಷ್ಟ ಗುಣ. ಅದರಂತೆ ಮಾನವನಾಗಿದ್ದ ರಾಮನನ್ನು ದೈವ ಸಮಾನನನ್ನಾಗಿ, ಅನಂತರ ದೇವತಾ ಅವತಾರವನ್ನಾಗಿ ನಮ್ಮ ಜನ ಕಲ್ಪಿಸಿದರು. ಹಾಗೆಯೇ ಸ್ವಭಾವದಲ್ಲಿ ಪಕ್ವವಾಗಿಲ್ಲದ ಮತ್ತು ಆಚರಣೆಯಲ್ಲಿ ಸ್ವಲ್ಪ ಅನಾಗರಿಕತೆಯನ್ನು ಮೈಗೂಡಿಸಿಕೊಂಡಿದ್ದ ಜನರನ್ನು ವಾನರರೆಂದೂ; ದೈಹಿಕ ಶಕ್ತಿಯಲ್ಲಿ, ಭಾವೋನ್ಮಾದದಲ್ಲಿ ಮತ್ತು ರೂಕ್ಷತನದಲ್ಲಿ ತಮ್ಮ ಜೀವನವನ್ನು ನಡೆಸುತ್ತಿದ್ದ ಜನರನ್ನು ರಾಕ್ಷಸರೆಂದೂ ಮತ್ತು ಇತರರೆಲ್ಲರಿಗಿಂತ ಮೇಲಟ್ಟದ ಹಾಗೂ ನಿಗ್ರಹಾನುಗ್ರಹ ಸಮರ್ಥರಾಗಿದ್ದ ಜನಾಂಗವನ್ನು ದೇವರೆಂದೂ ನಮ್ಮವರು ಪರಿಭಾವಿಸಿರಬೇಕು. ಈ ಕಲ್ಪನೆಗಳೇ ಮುಂದೆ ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಭಾಪೂರ್ಣವಾಗಿ ಬೆಳೆದಿರುವುದನ್ನು ಕಾಣಬಹುದು. ಇದಲ್ಲದೆ ಉತ್ತರಕಾಂಡದಲ್ಲಿ ವಾಲ್ಮೀಕಿ ಲವಕುಶರಿಗೆ ರಾಮಾಯಣವನ್ನು ಬಾಯಿಪಾಠ ಮಾಡಿಸಿದನೆಂದೂ, ಅವರಿಬ್ಬರೂ ಮಧುರ ಕಂಠದಿಂದ ಆ ಕಾವ್ಯವನ್ನು ಹಾಡಿದರೆಂದೂ ಉಲ್ಲೇಖವಿದೆ. ವಾಸ್ತವವಾಗಿ ಈ ಉಲ್ಲೇಖ ಭಾರತದ ಮೊತ್ತಮೊದಲ ಜನಪದ ಗಾಯಕರನ್ನು ಕುರಿತದ್ದು ಎಂದು ಊಹಿಸಬಹುದು. ಅಕ್ಷರ ನಾಗರಿಕತೆ ಇಲ್ಲದಿದ್ದ ಅಥವಾ ಕಡಿಮೆ ಇದ್ದ ಕಾಲದಲ್ಲಿ ತನ್ನ ರಾಮಾಯಣವನ್ನು ಜನಪ್ರಿಯಗೊಳಿಸಲು ಈ ಕುಶಲವರೆಂಬ ಗಾಯಕದ್ವಯರನ್ನು ಮಾಧ್ಯಮವನ್ನಾಗಿ ಉಪಯೋಗಿಸಿಕೊಂಡಿರಬಹುದು. ಇವರೇ ಮುಂದೆ ರಾಮನ

ಮಕ್ಕಳೆಂಬ ಕಲ್ಪನೆಯ ಪರಿವೇಷದಲ್ಲಿ ಸಿಕ್ಕಿಹಾಕಿಕೊಂಡರು. ಇಷ್ಟೇ ಅಲ್ಲ, ವಾಲ್ಮೀಕಿ ರಾಮಾಯಣದಲ್ಲಿ ಬರುವ ವಿವಿಧ ಜನರ ಸ್ವಭಾವಗಳು, ನಡವಳಿಕೆಗಳು, ಆಚರಣೆಗಳು ಆ ಕಾಲದ ಜನಜೀವನವನ್ನು ಸಾಕಷ್ಟು ಶಕ್ತಿಯುತವಾಗಿ ಪ್ರತಿಬಿಂಬಿಸಿವೆ. ನೇಗಿಲ ತೆರೆಯಲ್ಲಿ ಸೀತೆ ಹುಟ್ಟಿದಳು ಎಂಬ ಕಲ್ಪನೆ, ಅವಳು ಜನಕನಿಗೆ ಯಜ್ಞಭೂಮಿಯಲ್ಲಿ ದೊರೆತಳೆಂಬ ಕಲ್ಪನೆ ಕೂಡ ಯಾವುದೋ ಕಾರಣಕ್ಕಾಗಿ ಭೂಮಿಗೆ ಬಿಸಾಡಲ್ಪಟ್ಟ ಅನಾಥ ಹೆಣ್ಣೊಂದರ ಕತೆಯ ಅತಿಮಾನುಷ ಸ್ವರೂಪ ಮಾತ್ರ ಎಂದು ಊಹಿಸಲಿಕ್ಕೆ ಆಸ್ಪದವಿದೆ. ಬೇಡನಾಗಿ, ದಲಿತನಾಗಿ ಹುಟ್ಟಿ ವಾಲ್ಮೀಕಿಯಾದ ಕವಿ ಈ ಮೂಲಕ ಪರಿತ್ಯಜಿತ ಹೆಣ್ಣು ಮಗುವೊಂದನ್ನು ನಾಯಕಿಯನ್ನಾಗಿ ಮಾಡಿ ಆಕೆ ಸಕಲ ಸ್ತ್ರೀಯರ ಆದರ್ಶ ಮಾತೆಯಾಗಿ ಹೇಗೆ ಬೆಳೆದಳು ಎಂಬ ರೋಚಕ ಚಿತ್ರವನ್ನು ನೀಡಿ ಮತ್ತೊಂದು ರೀತಿಯಲ್ಲಿ ದಲಿತ ಯಶೋಗಾಥೆಯನ್ನು ಹಾಡಿದ್ದಾನೆಂದು ಊಹಿಸಲು ಅವಕಾಶವಿದೆ. ಈ ಕೃತಿಯಲ್ಲಿರುವ ಅತಿಮಾನುಷ ಮುಖವಾಡವನ್ನು ಸರಿಸಿ ಯಾವುದೇ ಸಂಪ್ರದಾಯಶೀಲ ಕನ್ನಡಕವನ್ನು ಹಾಕದೆ ಪರಿಶೀಲಿಸಿದಾಗ ಇಂತಹ ಜಾನಪದೀಯ ತಥ್ಯಗಳು ಹೊಮ್ಮುತ್ತವೆ. ಹಾಗೆಯೇ ಅಣ್ಣನ ಹೆಂಡತಿಯನ್ನು ತಮ್ಮನೂ, ತಮ್ಮನ ಹೆಂಡತಿಯನ್ನು ಅಣ್ಣನೂ ಇಟ್ಟುಕೊಳ್ಳುವ ಅಥವಾ ಮದುವೆ ಮಾಡಿಕೊಳ್ಳುವ ಗುಡ್ಡುಗಾಡು ಜನರ ಸಂಪ್ರದಾಯವನ್ನು ಯಾವುದೇ ಅಶ್ಲೀಲತೆಯ ಅಥವಾ ಜಿಗುಪ್ಸೆಯ ಸೋಂಕಿಲ್ಲದೆ ಅತ್ಯಂತ ಸಹಜವಾಗಿ ವರ್ಣಿಸಿದ್ದಾನೆ. ತಮ್ಮ ರಾಕ್ಷಸ ಬಲದಿಂದ ಮನ ಬಂದವರನ್ನು ಅಪಹರಿಸುವ ಮತ್ತು ಭೋಗಿಸುವ ರಾಕ್ಷಸ ಸಂಸ್ಕೃತಿ ಕೂಡ ಆದಿಮಾನವ ಜನಾಂಗದ್ದೇ ಆಗಿದೆ. ಮಹಾಭಾರತದ ಕತೆ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. ಸ್ವಲ್ಪಮಟ್ಟಿಗೆ ಪ್ರಸಿದ್ಧವಾಗಿದ್ದ ಒಂದು ಗುಂಪಿನಲ್ಲಿ ನಡೆದ ದಾಯಾದಿಗಳ ಕಲಹದ ದುರಂತ ಕತೆ ಕರ್ಣಾಕರ್ಣಿಯಾಗಿ ತಲೆಮಾರಿನಿಂದ ತಲೆಮಾರಿಗೆ ಹಾದು ಬಂದು ವ್ಯಾಸ ಎನ್ನುವ ಪ್ರತಿಭಾಶೀಲ ಸಂಯೋಜಕ ಕವಿಯ ಕೈಗೆ ಸಿಕ್ಕಿ ಈಗಿನ ರೂಪವನ್ನು ತಳೆದಿದೆ. ವ್ಯಾಸ ಎಂಬ ಹೆಸರು ಕೂಡ ಜಿಜ್ಞಾಸೆಗೆ ಅರ್ಹವಾಗಿದೆ. ವ್ಯಾಸ ಎಂದರೆ ಸುದೀರ್ಘವಾದುದು ಎಂದು ಅರ್ಥ. ಆದ್ದರಿಂದ ಜನಪದ ಕವಿಗಳ ಒಂದು ಸುದೀರ್ಘ ಸರಣಿಯೇ ಇಷ್ಟು ಬೃಹತ್ ಕತೆಯ ನಿರ್ಮಾಣಕ್ಕೆ ಕಾರಣವಾಗಿದೆ ಎಂದು ಊಹಿಸುವುದು ತಪ್ಪಲ್ಲ. ಮಹಾಭಾರತ ಕಾಲದ ವಿವಿಧ ಜನಗಳ ಸಂಪ್ರದಾಯಗಳು ಇಲ್ಲಿ ವೈಭವೀಕೃತವಾಗಿದ್ದರೂ ಅವುಗಳ



ಮೂಲ ಏನು ಎಂಬುದನ್ನು ಅರಿಯುವುದು ಕಷ್ಟವಲ್ಲ. ಬೆಸ್ತರ ಹೆಣ್ಣಿಗೆ ಋಷಿ ಮರುಳಾಗುವುದು, ಆ ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳೆಂದು ಭಾವಿಸಿದ್ದರ ಸಂಕೇತ. ಪರಾಶರ ಅವಳನ್ನು ಯೋಜನಗಂಧಿಯನ್ನಾಗಿ ಮಾಡಿದ ಎಂಬುದು ಕೇವಲ ಕಲ್ಪನೆ ಅಥವಾ ಅವಳು ಬೆಸ್ತ ಜೀವನವನ್ನು ತೊರೆದು ಸ್ವಲ್ಪ ಮಟ್ಟಿಗೆ ನಾಗರಿಕ ಜೀವನಕ್ಕೆ ಕಾಲಿಟ್ಟಳು ಎಂಬುದರ ಸಂಕೇತ. ಹಾಗೆಯೇ ಗಂಡಂದಿರಲ್ಲಿ ಮಕ್ಕಳಾಗದಿದ್ದಾಗ ಹಿರಿಯರ ಅನುಮತಿ ಪಡೆದು ಬೇರೊಬ್ಬ ಗಂಡಸಿನಲ್ಲಿ ಮಕ್ಕಳನ್ನು ಪಡೆಯುವ ನಿಯೋಗ ಪದ್ಧತಿ ಆಗಿನ ಕಾಲದ ಜನಜೀವನದಲ್ಲಿದ್ದ ಜಾನಪದ ಪದ್ಧತಿಯೇ ಆಗಿದೆ. ಕುಂತಿಗೆ ದೂರ್ವಾಸರು ಕೊಟ್ಟ ವರಗಳ ಪ್ರಸಂಗವನ್ನು ಹೀಗೆಯೇ ಅರ್ಥೈಸಬೇಕಾಗುತ್ತದೆ. ಪಾಂಡುರಾಜ ಶಾಪಗ್ರಸ್ತನಾದ ಮೇಲೆ ಯಮಧರ್ಮ, ಇಂದ್ರ, ವಾಯು, ಅಶ್ವಿನಿ ದೇವತೆಗಳಿಂದ ಪಾಂಡವರು ಹುಟ್ಟುವ ಕ್ರಿಯೆ ಕೂಡ ಗಂಡನ ಅನುಮತಿಯನ್ನು ಪಡೆದು ಪರಪುರುಷರಲ್ಲಿ ಮಕ್ಕಳನ್ನು ಪಡೆಯುವ ಸಂಪ್ರದಾಯದ ವೈಭವೀಕರಣ. ಹಾಗೆಯೇ ಅಲ್ಲಿ ಬರುವ ಹಿಡಿಂಬೆ, ಘಟೋದ್ಗಜ ಮುಂತಾದ ರಾಕ್ಷಸರು ಎನ್ನಲಾದ ಜನಾಂಗ ಕೂಡ ಕಾಡಿನ ನಾಡಿನ ಅನಾಗರಿಕ ಜನಾಂಗದ ಕಾಲ್ಪನಿಕ ರೂಪ. ಮಹಾಭಾರತದಲ್ಲಿ ಮೊದಲಿನಿಂದ ಕೊನೆಯವರೆಗೂ ಬೇರೆ ಬೇರೆ ಜನಾಂಗಗಳು, ಭಿನ್ನ ಭಿನ್ನವಾದ ಸಂಸ್ಕೃತಿಯ ವಿಧಾನಗಳ ಚಿತ್ರ ಸಾಮಾಜಿಕ ಮಾನವಶಾಸ್ತ್ರದ ದೃಷ್ಟಿಯಿಂದ ಪರಿಶೀಲನಾರ್ಹವಾಗಿದೆ. ಅಲ್ಲಿ ಬರುವ ಬೇಡ ಏಕಲವ್ಯ ಸಮಸಪ್ತಕರೆಂಬ ರಾಕ್ಷಸರು, ಅರಸು ಮನೆತನದ ಕಟ್ಟು ಕಟ್ಟಳೆಗಳು ಮುಂತಾದುವೆಲ್ಲಾ ಜಾನಪದೀಯವೇ. ಸಮಾಜದ ಶ್ರೇಣಿಯಲ್ಲಿ ಅತ್ಯಂತ ಮೇಲ್ದರ್ಜೆಯಲ್ಲಿದ್ದ ಜನರನ್ನು ದೇವತೆಗಳೆಂದು ಕಲ್ಪಿಸಿ, ಸಾಮಾನ್ಯ ಮಾನವರ ಜೀವನದಲ್ಲಿ ಅವರು ನಿರ್ಣಾಯಕ ಪಾತ್ರವನ್ನು ವಹಿಸಿದಂಥ ಚಿತ್ರಣ ಕೂಡ ಜಾನಪದೀಯ ಕಲ್ಪನೆಯೇ. ದ್ರೌಪದಿ ಪಂಚ ಪಾಂಡವರ ಪತ್ನಿಯಾದರೂ ಅವಳಿಗೆ ಪತಿವ್ರತೆ ಎಂಬ ಪಟ್ಟವನ್ನು ಕಟ್ಟಿದ ಬಗೆ ಆ ಕಾಲದಲ್ಲಿದ್ದ ವಿವಾಹ ಪದ್ಧತಿಯನ್ನು ಸಂಕೇತಿಸುತ್ತದೆ. ಕೆಲವು ಗುಡ್ಡಗಾಡು ಜನಾಂಗಗಳಲ್ಲಿ ಅಣ್ಣತಮ್ಮಂದಿರೆಲ್ಲರೂ ಒಬ್ಬಳೇ ಹೆಣ್ಣನ್ನು ಮದುವೆಯಾಗುವ ಸಂಪ್ರದಾಯವಿದೆ. ಅದೇ ಸಂಪ್ರದಾಯದಂತೆ ಪಾಂಡವರು ಬಹುಶಃ ದುರ್ಯೋಧನನನ್ನು ಗೆಲ್ಲಲು ಅವರಿಗೆ ಅನಿವಾರ್ಯವಾಗಿದ್ದ ಐಕ್ಯಮತ್ಯ ದೃಷ್ಟಿಯಿಂದ ಕೂಡ ದ್ರೌಪದಿಯನ್ನು ಎಲ್ಲರೂ ಮದುವೆಯಾದರು. ಮಹಾಭಾರತದಲ್ಲಿ ಬರುವ

ಇಂತಹ ಹಲವಾರು ಪ್ರಸಂಗಗಳು ಸಾಹಿತ್ಯದ ಮೂಲವಾಹಿನಿಯಾಗಿ ಜಾನಪದ ಹೇಗೆ ಹರಿದಿದೆ-ಸಾಹಿತ್ಯ ರೂಪದಲ್ಲಿ ಮಾತ್ರವಲ್ಲ ಜೀವನ ರೂಪದಲ್ಲೂ ಎಂಬುದನ್ನು ತೋರ್ಪಡಿಸುತ್ತದೆ.

ಗ್ರೀಸಿನ ಮಹಾಕಾವ್ಯಗಳಾದ ಇಲಿಯಡ್ ಮತ್ತು ಒಡಿಸ್ಸಿ ಕಾವ್ಯಗಳು ಸಹ ಮೂಲತಃ ಜನಪದ ಕಾವ್ಯಗಳೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವುಗಳ ಕರ್ತೃ ಹೋಮರನೆಂದು ಹೇಳಲಾಗಿದ್ದರೂ ಹೋಮರ್ ಎಂಬ ಪದ ಹೋಮರಾಯ್ಡ್ ಪದದಿಂದ ನಿಷ್ಪತ್ತಿಯಾಗಿದೆಯೆಂದೂ, ಹೋಮರಾಯ್ಡ್ ಎಂದರೆ ಅಂಧ ಗಾಯಕರ ಗುಂಪು ಎಂದೂ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹೀಗಾಗಿ ಗ್ರೀಸ್‌ನಲ್ಲಿ ಪ್ರಚಲಿತವಾಗಿದ್ದ ವೀರರ ಕತೆಗಳನ್ನು ಹಾಡುಗಳನ್ನಾಗಿ ಕಟ್ಟಿ ಅಲ್ಲಿನ ಜನಪದ ಗಾಯಕರು ಹಾಡಿ ರಾಷ್ಟ್ರದ ತುಂಬಾ ಪ್ರಚಾರ ಮಾಡಿದರು. ಆ ಸತ್ಯ ಕತೆಗಳಿಗೆ ಶುದ್ಧ ಜನಪದ ಕಲ್ಪನೆಗಳು ಹೆಣೆದುಕೊಂಡು ಅವರಿಗೆಲ್ಲಾ ಅತಿಮಾನುಷ ಪರಿವೇಷ ಸೃಷ್ಟಿಯಾಯಿತು. ಇವೆರಡೂ ಕಾವ್ಯಗಳನ್ನು ಈಗಲೂ ಓದಿದಾಗ ಇಲ್ಲಿನ ಮಾನವರು, ದೇವತೆಗಳೆಲ್ಲರೂ ಮೂಲತಃ ಜಾನಪದೀಯವಾಗಿ ದೈಹಿಕ ಶಕ್ತಿ ಮತ್ತು ಭಾವ ತೀವ್ರತೆಗಳನ್ನು ಒಳಗೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಲ್ಲಿ ಬರುವ ಎಷ್ಟೋ ಪ್ರಸಂಗಗಳು ಜನಪದ ಕಥೆಗಳು ನೇರವಾಗಿ ಸಾಹಿತ್ಯ ಗರ್ಭವನ್ನು ಪ್ರವೇಶ ಮಾಡಿದುದರ ಕುರುಹಾಗಿದೆ. ವರ್ಜಿಲನ 'ಈನಿಯಡ್' ಕೂಡ ಇಂತಹ ಜನಪದ ಕತೆಯ ಮರು ಸೃಷ್ಟಿಯಾಗಿದೆ. ಮಿಲ್ಟನ್‌ನ 'ಪ್ಯಾರಡೈಸ್ ಲಾಸ್ಟ್' ಬೈಬಲಿನ ಕತೆಗೆ ಕ್ರಿಸ್ತನ ಸುತ್ತ ಹೆಣೆದ ಜನಪದ ಕಲ್ಪನೆಯ ಸೃಷ್ಟಿಯಾಗಿದೆ. ಇಂತಹ ಉದಾಹರಣೆಗಳನ್ನು ನೂರಾರು ಸಂಖ್ಯೆಯಲ್ಲಿ ಕೊಡುತ್ತಾ ಹೋಗಬಹುದು. ಹೀಗೆ ಜಾನಪದ ನಮ್ಮ ಪ್ರಾಚೀನ ಸಾಹಿತ್ಯದ ಒಂದು ಅವಿಭಾಜ್ಯವೂ ಅನನ್ಯವೂ ಮತ್ತು ಅರ್ಥಪೂರ್ಣವೂ ಆದ ಅಂಗವಾಗಿದೆ.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ, ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

೩

ಪ್ರಾಚೀನ ಕನ್ನಡ ಸಾಹಿತ್ಯವೆಲ್ಲ ಬಹುಮಟ್ಟಿಗೆ ಪಂಡಿತ ಸಮ್ಮುಖವಾಗಿದ್ದ ಕಾರಣ ಮತ್ತು ಅದರ ವಸ್ತುವಿನ್ಯಾಸ, ಪಾತ್ರ ಚಿತ್ರಣ, ನಿರೂಪಣಾ ವಿಧಾನ, ಭಾಷಾ ಪ್ರಯೋಗ ಮುಂತಾದವುಗಳೆಲ್ಲಾ ಸಂಸ್ಕೃತದ ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು ನಡೆದ ಕಾರಣ ಅನಕ್ಷರಸ್ಥ ಗ್ರಾಮೀಣರ ದೈನಂದಿನ ಜೀವನವನ್ನು ಅವರನ್ನಾಳುವ ನಂಬಿಕೆಗಳನ್ನು, ಅವರು ಅನುಸರಿಸುವ ಸಂಪ್ರದಾಯಗಳನ್ನು, ಅವರ ಮನೋಲಹರಿಗಳನ್ನು ಅವುಗಳ ಮೂಲ ಸ್ವರೂಪದಲ್ಲಿ ಹಿಡಿದಿಡುವ ಅಸಲು ಕಸುಬನ್ನು ಈ ಕವಿಗಳು ಮಾಡಲಿಲ್ಲ. ಈ ಕವಿಗಳ ಒಂದು ಕಣ್ಣು ತಮ್ಮ ಆಶ್ರಯದಾತನಾದ ರಾಜನ ಮೇಲೆ, ಮತ್ತೊಂದು ಕಣ್ಣು ಅವರನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸುವ ಕವಿ - ವಿದ್ವಾಂಸರ ಮೇಲೆ ಇದ್ದ ಕಾರಣ ಅವರು ಜನರಿಗಾಗಿ ಜನರದ್ದೇ ಆದ ಜೀವನ ರೇಖೆಗಳನ್ನು ಹೆಚ್ಚಾಗಿ ಕಾವ್ಯ ಗರ್ಭದಲ್ಲಿ ಅಳವಡಿಸಿಕೊಳ್ಳಲಿಲ್ಲ. ಆದರೆ ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡುಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ಹಳಗನ್ನಡ ಮತ್ತು ನಡುಗನ್ನಡ ಸಾಹಿತ್ಯ ಮಾತ್ರವಲ್ಲದೆ ಆಧುನಿಕ ಸಾಹಿತ್ಯವೂ ಸಹ ಜಾನಪದದ ಪ್ರೇರಣೆಯಿಂದ ದೂರವಾಗಿಲ್ಲ. ಅಷ್ಟೇ ಅಲ್ಲ, ಹಿಂದಿನ ಸಾಹಿತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲೇ ಜಾನಪದ ಸಂವೇದನೆಯನ್ನು ಇದು ಗರ್ಭೀಕರಿಸಿಕೊಂಡಿದೆ. ಆಧುನಿಕ ಯುಗ ಎಲ್ಲ ವರ್ಗದ ಮತ್ತು ಸ್ತರದ ಜನರಿಗೆ ವಿದ್ಯಾಭ್ಯಾಸದ ಬೆಳಕು ಮುಕ್ತವಾಗಿ ದೊರೆಯಲು ಅನುವು ಮಾಡಿಕೊಟ್ಟ ಕಾರಣ ಮೇಲ್ವರ್ಗದ ಜನ ಮಾತ್ರವಲ್ಲದೆ ಅಕ್ಷರ ವಂಚಿತರಾಗಿದ್ದ ಈ ವರ್ಗದ ಜನ ಸಹ ಸುಪ್ತವಾಗಿದ್ದ ತಮ್ಮ ಜೀವನದ ಅನುಭವಗಳನ್ನು ಮುಕ್ತವಾಗಿ ತೋಡಿಕೊಳ್ಳಲು ಇದು ಅವಕಾಶ ಮಾಡಿಕೊಟ್ಟಿದೆ. ಇದರಿಂದಾಗಿ ಗ್ರಾಮೀಣ ಅನುಭವಗಳಿಂದ ಪುಷ್ಟರಾಗಿರುವ ಲೇಖಕರು ಹೊರಹೊಮ್ಮಿ ಜಾನಪದ ಜೀವನವನ್ನೇ ಬೃಹತ್ ಪ್ರಮಾಣದಲ್ಲಿ ಅಳವಡಿಸಿಕೊಂಡಿರುವ ಸಾಹಿತ್ಯವನ್ನು ರಚಿಸಲು ತೊಡಗಿದರು. ನವೋದಯ, ಪ್ರಗತಿಶೀಲ, ದಲಿತ ಮತ್ತು ಬಂಡಾಯ ಸಾಹಿತ್ಯ ಪಂಥಗಳು ಮುಖ್ಯವಾಗಿ ಈ ನೆಲೆಯಿಂದಲೇ ಅವಿರ್ಭವಿಸಿವೆ. ತುಂಬಾ ವ್ಯಾಪಕವಾಗಿ ಬೆಳೆದಿರುವ ಆಧುನಿಕ ಸಾಹಿತ್ಯ ಈ ಕಾರಣದಿಂದಲೇ ಜಾನಪದದ ಸಂವೇದನೆಯನ್ನು ಅತ್ಯಂತ ದಟ್ಟವಾಗಿ ಅಭಿವ್ಯಕ್ತಿಸುವ ಮೂಲಕ ಪ್ರಾಚೀನ ಸಾಹಿತ್ಯಕ್ಕಿಂತ ವಿಭಿನ್ನವಾದ ವಿಶಿಷ್ಟ ಅನುಭವಲೋಕಗಳನ್ನು ನಮ್ಮ ಮುಂದೆ ತೆರೆದಿಟ್ಟು, ಸತ್ವಶಾಲಿಯಾಗಿ ಕಂಗೊಳಿಸುತ್ತಿದೆ.

ಹೀಗಾಗಿ ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು. ಸಾಹಿತ್ಯ ಕ್ಷೇತ್ರದಲ್ಲಿ ಈಗಾಗಲೇ ಹೆಸರು ಮಾಡಿರುವ ಹಿರಿ ಕಿರಿಯ ಲೇಖಕರು ಈ ಮಾಲಿಕೆಯ ಗ್ರಂಥಗಳನ್ನು ತುಂಬಾ ಪರಿಶ್ರಮದಿಂದ ರಚಿಸಿಕೊಟ್ಟಿದ್ದಾರೆ. ಇವುಗಳಲ್ಲಿ



ಅವರ ಆಳವಾದ ಅಧ್ಯಯನ, ಸೂಕ್ಷ್ಮವಾದ ವಿಶ್ಲೇಷಣಾ ಶಕ್ತಿ, ಜಾನಪದದ ಬಗೆಗಿನ ದಟ್ಟವಾದ ಪ್ರಜ್ಞೆ ಹಾಗೂ ನಿರೂಪಣೆಯ ಸೊಗಸುಗಳು ಮೇಳಗೊಂಡಿವೆ. ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇವು ತೋರುಗಂಬಗಳಾಗುತ್ತವೆ ಎಂದು ನಾನು ಭಾವಿಸಿದ್ದೇನೆ. ಅಕಾಡೆಮಿಯ ಕೋರಿಕೆ ಮೇರೆಗೆ ಈ ಕೃತಿಗಳನ್ನು ರಚಿಸಿಕೊಟ್ಟ ಲೇಖಕ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ಕನ್ನಡದ ಪ್ರಸಿದ್ಧ ಪ್ರಾಧ್ಯಾಪಕರೂ ವಿದ್ವಾಂಸರೂ ಆದ ಮಾನ್ಯ ಮಿತ್ರರಾದ ಪ್ರೊ. ಹಂಪ. ನಾಗರಾಜಯ್ಯನವರು ಈ ಮಾಲೆಯ ಸಂಪಾದಕರಾಗಿ ತಮ್ಮ ಬಿಡುವಿರದ ಕಾರ್ಯಕ್ರಮಗಳ ನಡುವೆಯೂ ಲೇಖಕರೊಡನೆ ಪತ್ರ ವ್ಯವಹಾರ ಮಾಡಿ ಲೇಖನಗಳನ್ನು ತರಿಸಿಕೊಂಡು ಅವುಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಸಂಪಾದಿಸಿಕೊಟ್ಟಿದ್ದಾರೆ. ಅವರು ಅಕಾಡೆಮಿಯ ಮೇಲೆ ಹೊರಿಸಿರುವ ಋಣಭಾರ ಕೃತಜ್ಞತೆಗೆ ಮೀರಿದ್ದು. ಅವರನ್ನು ನಾನು ಹೃತ್ಪೂರ್ವಕವಾಗಿ ಇಲ್ಲಿ ನೆನೆಯುತ್ತೇನೆ. ಹಾಗೆಯೇ ಈ ಕೃತಿಗಳನ್ನು ಸುಂದರವಾಗಿ ಅಚ್ಚಿಸಿಕೊಟ್ಟ ಸ್ನೇಹಾ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

೫-೧೨-೯೭ ಡಾ. ಎಚ್. ಜೆ. ಲಕ್ಕಪ್ಪಗೌಡ

## ಸಂಪಾದಕರ ಮಾತು

ಕನ್ನಡ ಸಾಹಿತ್ಯ ಭಾರತೀಯ ಭಾಷೆಗಳಲ್ಲಿ ಪ್ರಾಚೀನವಾದದ್ದು, ಪ್ರೌಢವಾದದ್ದು. ಒಂದೂವರೆ ಸಾವಿರ ವರ್ಷಗಳ ಅಖಂಡತೆ ಹಾಗೂ ಸಾತತ್ಯ ಇರುವ ಈ ಶಿಷ್ಟಪದ ಕನ್ನಡ ಸಾಹಿತ್ಯದಲ್ಲಿ ಸೇರಿಕೊಂಡಿರುವ ಜಾನಪದ ಅಂಶಗಳು ಗಮನಾರ್ಹ ಪ್ರಮಾಣದಲ್ಲಿವೆ. ಶಿಷ್ಟಪದ ಸಾಹಿತ್ಯಾಂತರ್ಗತವಾಗಿರುವ ಜಾನಪದೀಯ ಸತ್ವ-ಸ್ವರೂಪವನ್ನು ಪೃಥಕ್ಕರಿಸಿ ತೋರಿಸುವ ದಿಕ್ಕಿನ ಕೆಲಸ, ಅಲ್ಲೊಂದು ಇಲ್ಲೊಂದು ಪ್ರಾಸಂಗಿಕ ಬಿಡಿ ಬರೆಹದ ಹೊರತು, ವ್ಯವಸ್ಥಿತವಾಗಿಯೂ ವ್ಯಾಪಕವಾಗಿಯೂ ನಡೆದಿರಲಿಲ್ಲ. ಅಂಥ ಅಧ್ಯಯನದ ಅಗತ್ಯವಿತ್ತು. ಬಹುಕಾಲದ ಈ ಕೊರತೆಯನ್ನು ಮನಗಂಡು ಕಾರ್ಯೋನ್ಮುಖರಾದ ಆದ್ಯ ಪುರುಷರು ಕರ್ನಾಟಕ ಜಾನಪದ-ಯಕ್ಷಗಾನ ಅಕಾಡೆಮಿಯ ಈಗಿನ ಹಾಲಿ ಅಧ್ಯಕ್ಷರಾದ ಡಾ.ಎಚ್.ಜೆ. ಲಕ್ಕಪ್ಪಗೌಡರು. ಅವರಿಗೆ ಏಕಕಾಲದಲ್ಲಿ ಅತ್ತ ಜಾನಪದ ಪರಂಪರೆಯ ಹಾಗೂ ಇತ್ತ ಕನ್ನಡ ಸಾಹಿತ್ಯ ಪರಂಪರೆಯ ತಲಸ್ಪರ್ಶಿ ಪಾಂಡಿತ್ಯ ಭಾಗ್ಯವಿದ್ದುದರಿಂದ ಈ ಹೊಸ ಯೋಜನೆಯ ಅಗತ್ಯ ಮತ್ತು ಮಹತ್ವವನ್ನು ಅನಾಯಾಸವಾಗಿ ಅವಲೀಲೆಯಿಂದ ಗ್ರಹಿಸಿದರು. ಶಿಷ್ಟ ಸಾಹಿತ್ಯ ಪ್ರಕಾರದ ತವನಿಧಿಯೊಳಗೆ ಕುಳಿತ ಜಾನಪದ ನಿಧಿಯನ್ನು ತನಿಯಾಗಿ ತೆಗೆದು ತೋರಿಸುವ ಕೆಲವು ಪುಸ್ತಕಗಳನ್ನು ಪ್ರಕಟಿಸಲು ಒಂದು ಪ್ರತ್ಯೇಕ ಮಾಲೆಯನ್ನು ಹಮ್ಮಿಕೊಂಡು ವಿಳಂಬವಿಲ್ಲದೆ ಕಾರ್ಯತತ್ಪರರಾದರು. 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ಈ ಪುಸ್ತಕ ಮಾಲೆ ಅವರ ಕನಸು.

ಈ ಯೋಜನೆಯ ಸಂಪಾದಕನಾಗಿ ಕಾರ್ಯ ನಿರ್ವಹಿಸುವ ಹೊಣೆಗಾರಿಕೆಯನ್ನು ಡಾ.ಎಚ್.ಜೆ. ಲಕ್ಕಪ್ಪಗೌಡರು ನನಗೆ ವಹಿಸಿದಾಗ ನಾನು ಒಪ್ಪಿಕೊಳ್ಳಲು ಎರಡು ಪ್ರಬಲ ಕಾರಣಗಳಿದ್ದುವು: ೧. ಈ ಕೆಲಸದ ಅಗತ್ಯ ಎಷ್ಟು ಜರೂರಿನದೆಂಬ ಅರಿವು ನನಗೂ ಇದ್ದುದು. ೨. ಡಾ.ಎಚ್.ಜೆ. ಲಕ್ಕಪ್ಪಗೌಡರು ಹಮ್ಮಿಕೊಂಡಿರುವ ಈ ಸಕಾಲಿಕವಾದ, ಯೋಗ್ಯವಾದ ಯೋಜನೆಯ ಯಶಸ್ಸಿಗೆ ಸಹಕರಿಸುವುದು ನನ್ನ ಕರ್ತವ್ಯವೆಂಬ ಭಾವನೆ. ಈ ಅವಕಾಶಕ್ಕಾಗಿ ಅಕಾಡೆಮಿಯ ಅಧ್ಯಕ್ಷರಿಗೂ ಇತರ ಕಾರ್ಯ ಸಮಿತಿ ಸದಸ್ಯರಿಗೂ ನಾನು ಕೃತಜ್ಞನಾಗಿದ್ದೇನೆ.

'ಶಿಷ್ಟಸಾಹಿತ್ಯ ಮತ್ತು ಜಾನಪದ ಸಂವೇದನೆ' ಮಾಲೆಯಲ್ಲಿ ಪ್ರಕಟಿಸಲು ನಮ್ಮ ಕೋರಿಕೆಯ ಮೇರೆಗೆ ಶಿವರಾಮಯ್ಯ ಅವರು ***'ಹರಿಹರ-ರಾಘವಾಂಕ ಮತ್ತು ಜಾನಪದ'*** ಎಂಬ ಗ್ರಂಥವನ್ನು ಬರೆದುಕೊಟ್ಟಿರುತ್ತಾರೆ. ಅವರಿಗೆ ಅಕಾಡೆಮಿ ಹಾಗೂ ನನ್ನ ವತಿಯಿಂದ ಕೃತಜ್ಞತೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಿಸಿದ ಸ್ನೇಹಾ ಪ್ರಿಂಟರ್ಸ್ ಅವರ ಸಹಾಯವನ್ನು ಸ್ಮರಿಸುತ್ತೇನೆ.

ಈ ಮಾಲೆಯಲ್ಲಿ ಸುಮಾರು ನೂರು ಪುಸ್ತಕಗಳನ್ನು ಹೊರತರುವದು ಮೊದಲ ಯೋಜನೆಯಾಗಿತ್ತು. ಈಗ ಅದರ ಪ್ರಾರಂಭದ ಹಂತವೆಂದು ಪ್ರಾತಿನಿಧಿಕವಾದ ಕನ್ನಡ ಕವಿ-ಕಾವ್ಯಗಳನ್ನು ಆರಿಸಿಕೊಂಡು ಹನ್ನೆರಡು ಪುಸ್ತಕಗಳ ಒಂದು ಕಂತು ಬಿಡುಗಡೆ ಆಗುತ್ತಿದೆ. ಹಣದ ಅನುಕೂಲ ಮತ್ತು ಲೇಖಕರ ಸಕಾಲಿಕ ಬೆಂಬಲದಿಂದ ಯಥಾವಕಾಶ ಉಳಿದ ಪುಸ್ತಕಗಳನ್ನು ಪ್ರಕಟಿಸುವ ಉದ್ದೇಶವಿದೆ.

**ಹಂಪ. ನಾಗರಾಜಯ್ಯ**

## ಪರಿವಿಡಿ

೧. ಹರಿಹರ / ೧

೨. ರಾಘವಾಂಕ / ೨೫

# ಹರಿಹರ-ರಾಘವಾಂಕ ಮತ್ತು ಜಾನಪದ

## ಹರಿಹರ

## ಹರಿಹರನ ಇತಿವೃತ್ತ

ಕನ್ನಡ ಸಾಹಿತ್ಯದಲ್ಲಿ ರಗಳೆಯ ಕವಿ ಹರಿಹರನಿಗೆ ವಿಶಿಷ್ಟ ಸ್ಥಾನವಿದೆ. ಕಾವ್ಯದ ವಸ್ತು ಮತ್ತು ರೂಪ ಎರಡರಲ್ಲೂ ಈಗ ನೂತನ ಯುಗ ಪ್ರವರ್ತಕನೆಂದು ಕೀರ್ತಿತನಾಗಿದ್ದಾನೆ. ಚಂಪೂ ಕಾವ್ಯಗಳಲ್ಲಿ ಇಣಿಕಿ ನೋಡುತ್ತಿದ್ದ ರಗಳೆ ಎಂಬ ಛಂದೋ ಪ್ರಕಾರವನ್ನು ಜೀವಂತಗೊಳಿಸಿದ ಸುಪ್ರಸಿದ್ಧ ಕವಿ. ಹರಿಹರನ ವಿದ್ಯಾಗುರು ಮಾಯಿದೇವ. ದೋರಸಮುದ್ರದ ಹೊಯ್ಸಳ ದೊರೆ ಎರಡನೆಯ ನರಸಿಂಹ ಬಲ್ಲಾಳನಲ್ಲಿ ಈತ ಕೆಲವು ದಿನ  ಕರಣಿಕನಾಗಿದ್ದನೆಂದು ತಿಳಿದು ಬರುತ್ತದೆ. ಹಂಪೆಯ ವಿರೂಪಾಕ್ಷನ ಪರಮ ಭಕ್ತನಾದ ಹರಿಹರ ತನ್ನ ವೃತ್ತಿಗೆ ಶರಣು ಹೊಡೆದು ಹಂಪೆಗೆ ಮರಳಿ ಬಂದು ಅಲ್ಲೇ ನೆಲಸಿದನು.

ಹರಿಹರನಿಗೆ ಶಿವನೆ ಪರಮ ದೈವ; ಶರಣ ಸಂಕುಳವೇ ಅವನ ಬಳಗ; ಪುರಾತನ ನೂತನ ಶರಣರು ಪರಮಾರಾಧ್ಯರೆಂದು ನಂಬಿ ನೆಚ್ಚಿ ಪಂಪಾ ವಿರೂಪಾಕ್ಷನ ಸಾನ್ನಿಧ್ಯದಲ್ಲಿ ತನ್ನ ಜೀವನವನ್ನು ಸಾಗಿಸಿದನು. ಹರಿಹರನು ಗಿರಿಜಾಕಲ್ಯಾಣವೆಂಬ ಪ್ರೌಢ ಚಂಪೂ ಕೃತಿಯನ್ನೂ ಹಾಗೂ ಪಂಪಾಶತಕ, ರಕ್ಷಾಶತಕ ಮತ್ತು ಮುಡಿಗೆಯ ಅಷ್ಟಕ ಎಂಬ ಕೃತಿಗಳನ್ನು ರಚಿಸಿದ್ದಾನೆ. ಇವುಗಳೆಲ್ಲಕ್ಕಿಂತ ಮಿಗಿಲಾಗಿ ಅವನ ಹೆಸರು ಕನ್ನಡ ಸಾಹಿತ್ಯದಲ್ಲಿ ನೆಲೆ ನಿಂತಿರುವುದು ಅವನ ರಗಳೆಗಳಿಂದ. ಚಂಪೂ ಪರಂಪರೆಯು ಇವನ ನಂತರ ಹಿಂದೆ ಸರಿಯಿತು. ಈತ ಒಟ್ಟು ೧೦೬/೧೨೦ ರಗಳೆಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ. ರಗಳೆಗಳ ಮೂಲಕ ವೀರಶೈವ ಶರಣರ ಕಥೆಯನ್ನು ಲೋಕಾಂತರಕ್ಕೆ ಪ್ರಚುರಪಡಿಸಿ ವೀರಶೈವ ಧರ್ಮ ಪ್ರಚಾರಕ್ಕೆ ಮಿಗಿಲಾದ ನೆರವು ನೀಡಿದ. ಬಸವಣ್ಣ, ಪ್ರಭುದೇವ, ಮಹಾದೇವಿ, ಸಿದ್ಧರಾಮ

ಮೊದಲಾದ ಶರಣರ ಕಥೆಗಳನ್ನು ಹರಿಹರ ರಚಿಸಿದ್ದಾನೆ. ತಮಿಳಿನ ಪೆರಿಯ ಪುರಾಣದಲ್ಲಿ ಉಕ್ತವಾಗಿರುವ ಪ್ರಾಚೀನ ಶಿವಭಕ್ತರ ಕಥೆಗಳನ್ನೂ ಹೇಳಿದ್ದಾನೆ. ತಿರುನೀಲಕಂಠ, ನಂಬಿಯಣ್ಣ, ಮಲುಹಣ, ಕಾರಿಕಾಲಮ್ಮೆ ಮೊದಲಾದ ಪ್ರಸಿದ್ಧ ರಗಳೆಗಳಿವೆ. 'ಚಂಪೂ'ವಿಗಿಂತ 'ರಗಳೆ' ಛಂದಸ್ಸು ಇವನಿಗೆ ಚೆನ್ನಾಗಿ ಒಗ್ಗಿ ಹೋಗಿದೆಯಾದ್ದರಿಂದ ಈತನನ್ನು ರಗಳೆಯ ಕವಿಯೆಂದೇ ಗುರ್ತಿಸಲಾಗಿದೆ. ಪ್ರತಿಷ್ಠಿತರಲ್ಲದ ಶ್ರೀ ಸಾಮಾನ್ಯನಲ್ಲಿಗೂ ಶಿವ ಬಂದೇ ತೀರುತ್ತಾನೆಂಬ ಹರಿಹರನ ನಿಲುವು ವಸ್ತುವಿನ ದೃಷ್ಟಿಯಿಂದ ಮಹತ್ವದ್ದು. ಭಕ್ತಿರಸಕ್ಕೆ ಹೊಂದುವ ದೇಸಿ ಛಂದೋರೂಪ ರಗಳೆಯನ್ನು ಬಳಸಿ ವಿಕಾಸಪಡಿಸಿದ. ರಳಕುಳಗಳನ್ನು ವರ್ಜಿಸಿ ವಸ್ತುವಿಗೆ ತಕ್ಕ ಭಾಷಾಶೈಲಿ ತಂತ್ರಗಳನ್ನು ರೂಢಿಸಿಕೊಂಡ ಈತ ನಿಜಕ್ಕೂ ಕ್ರಾಂತಿಕಾರಿಯೆ ಸರಿ. ಚಂಪೂವಿನ ಚಕ್ರಬಂಧನದಲ್ಲಿ ಸಿಲುಕಿದ್ದ ಕನ್ನಡ ಕಾವ್ಯತ್ವವನ್ನು ಬಿಡಿಸಿ ಅದು ಸಾಮಾನ್ಯರಿಗೆ ನಿಲುಕುವಂತೆ ಮಾಡಿದ. ಹೀಗೆ ಹೊಸ ಕಾವ್ಯ ಸಂಪ್ರದಾಯವನ್ನು ನಿರ್ಮಿಸಿ, ರಗಳೆಯಲ್ಲಿ ಸಮೃದ್ಧ ಸಾಹಿತ್ಯವನ್ನು ರಚಿಸಿ, ನಾಸ್ತಿಕರಲ್ಲೂ ಭಕ್ತಿಯ ಉತ್ಸಾಹ ಮೂಡವಂತೆ ಮಾಡಿರುವ ಹರಿಹರ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದಾನೆ.

ಶಿವಕಥೆ, ಶಿವಭಕ್ತರ ಕಥೆಗಳನ್ನಲ್ಲದೆ ಉಳಿದವರ ಕಥೆ ಹೇಳುವುದಿಲ್ಲವೆಂಬುದು ಹರಿಹರನ ಪ್ರತಿಜ್ಞೆ. ತನ್ನ ಪ್ರತಿಜ್ಞೆಯನ್ನು ಸಾಧಿಸಿ ಧನ್ಯನಾಗಿದ್ದಾನೆ. ಇವನ ಸಮಕಾಲೀನರೂ ಆಮೇಲಿನವರೂ ಆದ ಅನೇಕ ಕವಿಗಳು ಈತನಿಂದ ಸ್ಫೂರ್ತಿ ಪಡೆದು ಇವನನ್ನು ಆದರ್ಶವಾಗಿಟ್ಟುಕೊಂಡು ಕೃತಿ ರಚನೆ ಮಾಡಿ ಇವನನ್ನು ಕೊಂಡಾಡಿದ್ದಾರೆ.

ಸಮಕಾಲೀನ ದೊರೆಗಳೊಂದಿಗೆ ಸಮೀಕರಿಸಿ ಪಂಪಾದಿಗಳು ಕಾವ್ಯರಚನೆ ಮಾಡಿದರೆ, ಹರಿಹರ ಸಾಮಾನ್ಯ ಮನುಷ್ಯರನ್ನು ಪೌರಾಣಿಕ ಪುರುಷರನ್ನಾಗಿ ಎತ್ತರಿಸಿ ಕಾವ್ಯರಚನೆ ಮಾಡಿದ. ಹೀಗೆ ಹರಿಹರ ವಸ್ತುವಿನ ಆಯ್ಕೆಯಲ್ಲಿಯೇ ಜನಪದಕ್ಕೆ ಇಳಿದುಬಂದ ಮತ್ತು ಅವರ ಕಥೆ ಹೇಳಲು ಕನ್ನಡ ಭಾಷೆಯ ಛಂದೋಲಯಗಳನ್ನು ಜನಪದ ತಂತ್ರಗಾರಿಕೆಯನ್ನು ಬಳಸಿಕೊಂಡ. ಜನಪದ ಐತಿಹ್ಯಗಳು, ಪುರಾಣಗಳು, ಪವಾಡಗಳು ಮುಂತಾಗಿ ಎಲ್ಲವನ್ನೂ ಶೋಧಿಸಿ ಪುನರ್ರಚಿಸಿದ. ಅವನ ಜನಪದ ಆಶಯಕ್ಕೆ ಸಂಬಂಧಿಸಿದಂತೆ ಆ ಕಾವ್ಯಗಳಿಂದ ಅನೇಕ ನಿದರ್ಶನಗಳನ್ನು ಎತ್ತಿಕೊಡಬಹುದು.



## ಹರಿಹರನ ರಗಳೆಗಳ ಆಶಯ

ಹರಿಹರನ ಭಕ್ತಿಪ್ರಪಂಚ ವಿಸ್ತಾರವೂ ವೈವಿಧ್ಯಮಯವೂ ಆಗಿದೆ. ಅವನ ರಗಳೆಗಳಲ್ಲಿ ದನಗಾಹಿಯಾದ ಆನಾಯನಾರ್, ಒಕ್ಕಲು ಮಗ ಇಳೆಯಾಂಡ ಗುಡಿಮಾರ, ಬೇಟೆಯಾಡುವ ಕಣ್ಣಪ್ಪ, ಕೂಲಿ ಮಾಡುವ ಅರಿವಾಳ್ತಾಂಡ, ತಿರುನೀಲಕಂಠನೆಂಬ ಕುಶವ, ರಾಜ ಅಯ್ಯಡಿ, ತಿರುಕುಂಪೆ ತೊಂಡನೆಂಬ ಅಗಸ, ಬೆಸ್ತರ ಅತಿಭಕ್ತ, ಕುಂಬಾರ ಗುಂಡಯ್ಯ, ಗೃಹಿಣಿ ಕಾರಿಕಾಲಮ್ಮೆ, ಗಂಧ ತೇಯುವ ಒಲಘಾಂಡ ಮೂರ್ತಿ, ಕ್ರಮವಾಗಿ ಶರೀರ ಸಮೇತ, ಊರು ಸಮೇತ, ನವಗ್ರಾಮ ಸಮೇತ ಕೈಲಾಸಕ್ಕೆ ಹೋದ ಓಹಿಲಯ್ಯಾ, ಉದ್ಭಟದೇವ, ಹಲಾಯುಧ, ಕುಂಬಾರಗುಂಡಯ್ಯ, ಮಾದಾರ ಚೆನ್ನಯ್ಯ, ಪವಾಡ ಪುರುಷ ರೇವಣ ಸಿದ್ಧೇಶ್ವರ, ಅಮರ ಪ್ರೇಮಿಗಳಾದ ಮಲುಹಣ, ನಂಬಿಯಣ್ಣ ಮುಂತಾದ ಪುರಾತನ ಶಿವಭಕ್ತರಿದ್ದಾರೆ. ನೂತನ ಶರಣರಲ್ಲಿ ಪ್ರಭುದೇವ, ಬಸವಣ್ಣ, ಮಹಾದೇವಿಯಕ್ಕ, ಸಿದ್ಧರಾಮ ಮುಂತಾದವರಿದ್ದಾರೆ. ಇವರಲ್ಲಿ ಪ್ರತಿಯೊಬ್ಬ ಭಕ್ತನೂ ತನ್ನದೇ ಆದ ರೀತಿಯಲ್ಲಿ ಶಿವನನ್ನು ಒಲಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾನೆ. ಅವರು ಸತಿಪತಿಭಾವದಿಂದ, ಒಡೆಯಆಳುಭಾವದಿಂದ, ಸಖ್ಯಭಾವದಿಂದ, ವಾತ್ಸಲ್ಯಭಾವದಿಂದ ಭಕ್ತಿಸಾಧನೆಯನ್ನು ಮಾಡುವರು. ಭಗವಂತನ ಕರುಣೆಗೆ ಪಾತ್ರರಾಗಲು ಇವರು ನಾನಾ ಬಗೆಯ ಅರ್ಚನ, ನೃತ್ಯ, ಗಾಯನ, ಅಭಿನಯ, ಜಾಗರಣೆ, ದೇವಾಲಯ ಹಾಗೂ ಕೆರೆಕಟ್ಟೆ ಭಾವಿ ನಿರ್ಮಾಣ ಮುಂತಾದ ಅನೇಕ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಇವುಗಳಲ್ಲಿ ಯಾವುದಾದರೂ ಒಂದನ್ನು ಎಷ್ಟೇ ಕಷ್ಟ ನಷ್ಟ ಬರಲಿ ಕೈಬಿಡದೆ ನಿಷ್ಠೆಯಿಂದ ಆಚರಿಸಿ ಶಿವನನ್ನು ಮೆಚ್ಚಿಸಿ ಕೈಲಾಸಕ್ಕೆ ಕೊಂಡುಯ್ಯುವಂತೆ ನಡೆದುಕೊಳ್ಳುತ್ತಾರೆ.

ಇಟ್ಟ ಆಣೆ ಭಾಷೆಗಳಿಗೆ ಬಾಳಿನ ಕಟ್ಟಕಡೆಯತನಕ ನಿಷ್ಠೆಯಿಂದಿದ್ದು ನಡೆಸಿಕೊಂಡು ಹೋಗುವ ತಿರುನೀಲಕಂಠ, ಮಾದಾರ ಚೆನ್ನಯ್ಯ, ಕಾರಿಕಾಲಮ್ಮೆ ಮುಂತಾದ ಗುಪ್ತಭಕ್ತರಿದ್ದಾರೆ. ಯಾರೂ ಅರಿಯದ ಇಂಥ ಗುಪ್ತಭಕ್ತರನ್ನು ಕುರಿತು ಹರಿಹರ ರಗಳೆಗಳನ್ನು ರಚಿಸಿದ್ದಾನೆ. ಮಹಾಕಾವ್ಯಗಳಲ್ಲಿ ಕಾಣಸಿಗದ ಜನತಾ ಸಾಮಾನ್ಯರನ್ನು ಕುರಿತು ಹರಿಹರ ಹಾಡಿದ. ಸಾಮಾನ್ಯರ ಕಥೆಯನ್ನು ಸಾಮಾನ್ಯರಿಗಾಗಿ ಕಟ್ಟಿ ಬರೆದ. ಹರಭಕ್ತರು ಯಾರೇ ಇರಲಿ, ಎಲ್ಲೇ ಇರಲಿ,ಎಂತಾದರೂ ಇರಲಿ ಅವರನ್ನು ಉತ್ಸಾಹಿಸಿ ಹೊಗಳಿದ. ೧೨ನೇ ಶತಮಾನದ ಶಿವ ಸಂಸ್ಕೃತಿಯ

ಸಮಾನತೆಯ ಸಮಾಜವನ್ನು ಹರಿಹರ ಹತ್ತಿರದಿಂದ ಬಲ್ಲವನಾಗಿದ್ದ. ಅಸ್ಪೃಶ್ಯತೆಯ ಆಚರಣೆ ಅಮಾನವೀಯ ಎಂಬುದನ್ನು ಬಲ್ಲವನಾಗಿದ್ದ. ಅಂತ್ಯಜರ ಶಿವಭಕ್ತಿ ಅನುಕರಣಶೀಲ ಎಂದು ಮೆಚ್ಚಿದವನಾಗಿದ್ದ. ಆದ್ದರಿಂದಲೇ ಬಸವರಾಜರಗಳೆಯಲ್ಲಿ ಸಂಬೋಳಿನಾಗಿ ದೇವನ ಪ್ರಸಂಗವನ್ನು ಬೆಳಸಿದ್ದಾನೆ. ಮಾದಾರ ಚೆನ್ನಯ್ಯನನ್ನು ಕೊಂಡಾಡಿದ್ದಾನೆ. ಬಸವಣ್ಣ ಸಂಬೋಳಿ ನಾಗಿದೇವನ ಮನೆಯಲ್ಲಿ ಪ್ರಸಾದ ಸ್ವೀಕರಿಸಿದ್ದು ವೈದಿಕರ ಕಣ್ಣಲ್ಲಿ ಮಹಾಪರಾಧವಾಗುತ್ತದೆ, ಬಿಜ್ಜಳನಲ್ಲಿಗೆ ದೂರು ಒಯ್ಯುತ್ತಾರೆ. ಅರಮನೆಯನ್ನು ಕುಲಗೆಡಿಸಿದೆಯೆಂದು ರಾಜ ದಂಡಿಸುತ್ತಾನೆ. ಬಸವಣ್ಣ ಶಿವಭಕ್ತರಲ್ಲದವರ ಮನೆಯಲ್ಲಿ ಉಂಡುದಿಲ್ಲವೆಂದು ಪ್ರತಿಭಟಿಸುತ್ತಾನೆ. ವಿಪ್ರನೊಬ್ಬ ಎದ್ದುನಿಂತು 'ಹಾಗಾದರೆ ಭಕ್ತರ ಮೈಯಲ್ಲಿ ಹಾಲು ಹರಿವುದೇ' ಎಂದು ಸವಾಲು ಹಾಕುತ್ತಾನೆ. ಅದನ್ನು ಸ್ವೀಕರಿಸಿದ ಬಸವಣ್ಣ ಸಂಬೋಳಿ ನಾಗಿದೇವನ ಮೈಯಲ್ಲಿ ಹಾಲು ಹರಿವುದನ್ನು ಪ್ರತ್ಯಕ್ಷಮಾಡಿ ತೋರಿಸುತ್ತಾನೆ.

ಇದೇ ಪ್ರಕಾರವಾಗಿ ಮಾದಾರ ಚೆನ್ನಯ್ಯನು ಎಂಥ ಗುಪ್ತ ಭಕ್ತನೆಂಬುದನ್ನು ಹರಿಹರ ಸಾದರಪಡಿಸುತ್ತಾನೆ. ಚೆನ್ನನ ಮನೆಯಲ್ಲಿ ಅಂಬಲಿ ಉಂಡ ಶಿವನು ಚೋಳರಾಜನ ಮೃಷ್ಟಾನ್ನವನ್ನು ಮುಟ್ಟದೆ ಇರುತ್ತಾನೆ. ಚೋಳ ರಾಜನಿಗೆ ಇದು ತಿಳಿದು ಚೆನ್ನಯ್ಯನ ಬಳಿಗೆ ಓಡೋಡಿ ಬಂದು ಅರಮನೆಗೆ ಸ್ವಾಗತಿಸುತ್ತಾನೆ. ತನ್ನ ಗುಪ್ತ ಭಕ್ತಿ ಬಯಲಾದುದಕ್ಕೆ ಆತ ಚಡಪಡಿಸುತ್ತಾನೆ. ಕೊನೆಗೆ ಶಿವಸಾನ್ನಿಧ್ಯ ಪದವಿ ದೊರೆಯುತ್ತದೆ. ಇಲ್ಲಿ ರಾಜತ್ವ ಶ್ರೇಷ್ಠ ಎಂಬುದನ್ನು ಭಗ್ನಗೊಳಿಸಿ, ಶಿವಭಕ್ತನ ಹೊಲೆಯತನ ಅವಮಾನಕರವಲ್ಲ ಎಂಬುದನ್ನು ಪ್ರತಿಪಾದಿಸುತ್ತಾನೆ. ಭಕ್ತಿಕಂಪಿತ ಶಿವನು ಎಂಬುದನ್ನು ಪ್ರಕಟಿಸಲಾಗಿದೆ. ಇದೇ ಬಗೆಯಲ್ಲಿ ಬೇಡರ ಕಣ್ಣಪ್ಪ, ಸ್ವಪಚಯ್ಯ ಮುಂತಾದವರ ರಗಳೆಗಳಲ್ಲಿ ಬ್ರಾಹ್ಮಣ್ಯದ ಶ್ರೇಷ್ಠತೆಯನ್ನು ಅಲ್ಲಗಳೆದು ಭಕ್ತಿಯ ಮಹತ್ವವನ್ನು ಸಮರ್ಥಿಸುತ್ತಾನೆ.

ಹರಿಹರ ತನ್ನ ಭಕ್ತರನ್ನು ಮೆರಸುವುದಕ್ಕೆ ತಕ್ಕಂತಹ ಕಥೆಗಳನ್ನು ಕಲ್ಪಿಸುವನು, ಪವಾಡಗಳನ್ನು ಸೃಷ್ಟಿಸುವನು. ತನ್ನ ಕರುವಿನ ಬಳಿಗೆ ಹಸು ಅರಸಿ ಬರುವಂತೆ ಶಿವ ತನ್ನ ಭಕ್ತರ ಬಳಿಗೆ ಧಾವಿಸಿ ಬರುತ್ತಾನೆ. ಬೇಡರ ಕಣ್ಣಪ್ಪ ಶಿವನಿಗೆ ಸುಟ್ಟ ಮಾಂಸವನ್ನು ರುಚಿ ನೋಡಿ ಅರ್ಪಿಸುವ ಬಗೆ, ಹೊಲೆಯರ ಅಡಿಗೆಯ ಪದ್ಧತಿ, ಅವರ ಆಹಾರಾಭ್ಯಾಸಗಳು ಕಾಯಕದಲ್ಲಿ ಅವರು ಮಗ್ನರಾಗಿರುವ ಶಿಸ್ತು - ಇವೇ ಮುಂತಾದುವನ್ನು ಕವಿ ಯಾವ ಮುಜುಗರವೂ ಇಲ್ಲದೆ ವರ್ಣಿಸುತ್ತಾನೆ. ಹೊಲೆಯ



ಮೊದಲುಗೊಂಡು ಸಮಾಜದ ಸಮಸ್ತ ಶಿವಭಕ್ತರನ್ನೂ ಕುರಿತು ಹರಿಹರ ಬರೆಯುವ ಮೂಲಕ ಕನ್ನಡ ನೆಲದ ಪ್ರತಿಸಂಸ್ಕೃತಿಯನ್ನು ದಾಖಲಿಸುತ್ತಾನೆ. ಅವನ ಒಂದೇ ಮಿತಿಯೆಂದರೆ ಭಕ್ತರನ್ನು ಮನಸಾರೆ ಕೊಂಡಾಡುವಾಗ ಭವಿಗಳನ್ನು ಮನಬಂದಂತೆ ಹೀಗಳೆಯುವುದು. ಎಂದರೆ ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನ್ನೊಂದೇ ಎಂಬುದು ಹರಿಹರನ ಆದರ್ಶ. ಕೆಳವರ್ಗದ ವಚನಕಾರರ ವಚನಗಳನ್ನು ಗಮನಿಸಿದರೆ ಶರಣ ಸಮುದಾಯ ಅನುಸರಿಸುತ್ತಿದ್ದ ಆಹಾರಾಭ್ಯಾಸ ಮುಂತಾದುವುಗಳ ಸಂಬಂಧವಾಗಿ ಜಾತಿ ವ್ಯವಸ್ಥೆಯ ವಾಸನೆ ಇನ್ನೂ ಇದ್ದಂತೆ ಭಾಸವಾಗುತ್ತದೆ. ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಇಂಥ ತಾರತಮ್ಯವನ್ನು ಉಗ್ರವಾಗಿ ವಿರೋಧಿಸಿದ್ದಾರೆ. ಹಾವಿನಹಾಳ ಕಲ್ಲಯ್ಯ, ಕಾಳವ್ವೆ ಮೊದಲಾದವರು ಕೆಳವರ್ಗದವರ ಮಾಂಸಾಹಾರ ಪದ್ಧತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಹರಿಹರನ ಬೇಡರಕಣ್ಣಪ್ಪನ ರಗಳೆಯಲ್ಲಿಯೂ ಇಂಥ ಸಮರ್ಥನೆ ಕಂಡುಬರುತ್ತದೆ. ಇನ್ನು ಶರಣರಾದ ಮೇಲೆ ಕೆಳವರ್ಗದ ಶರಣರ ಆಹಾರಾಭ್ಯಾಸ ಪದ್ಧತಿಗಳನ್ನು ಮಾನ್ಯಮಾಡಬೇಕೆಂಬ ಆಶಯವನ್ನು ಬಸವರಾಜ ದೇವರ ರಗಳೆಯು ಕಿನ್ನರಿಬೊಮ್ಮಯ್ಯನ ಈರುಳ್ಳಿ ಪ್ರಸಂಗ ಎತ್ತಿ ಹಿಡಿಯುತ್ತದೆ. ಹರಿಹರನ ಭಕ್ತಿ ಭಾವದಲ್ಲಿ ಕೀಳು ಮೇಲೆಂಬುದಿಲ್ಲ. ಭಕ್ತ ಕುಲವೆಲ್ಲ ಒಂದೇ ಎಂದೂ, ತಮ್ಮ ಮಿತಿಗಳನ್ನು ಮೀರಲು ಭಕ್ತಿಯೊಂದೇ ಸಾಧನವೆಂದೂ ಹರಿಹರ ಪ್ರತಿಪಾದಿಸುತ್ತಾನೆ. ಅವನ ಶಿವಭಕ್ತಿಯಲ್ಲಿ ಸಮಾನತೆ ಇದ್ದು ಸಾಮಾಜಿಕ ಕಳಂಕದಿಂದ ದೂರ ಉಳಿದಿದೆ. ಹರಿಹರನ ಕಥಾನಾಯಕರ ಶಿವಭಕ್ತಿ ಲೋಕರೂಢಿಯ ನೈತಿಕತೆಯಿಂದಲೂ ಮುಕ್ತಿಯನ್ನು ಪಡೆಯುತ್ತದೆ. ನಂಬಿಯಣ್ಣ ಮುಂತಾದವರು ಇದಕ್ಕೆ ಉಜ್ವಲಸಾಕ್ಷಿ. ಕೈಲಾಸಕ್ಕೆ ಗಮಿಸುವ ಹರಿಹರನ ಕಾವ್ಯ ವ್ಯಕ್ತಿಗಳಿಗೆ ಇದ್ದ, ಇರಬೇಕಾದ ಒಂದೇ ಯೋಗ್ಯತೆ ಎಂದರೆ ಶಿವಭಕ್ತಿ. ಭಕ್ತಿ ಸೋಪಾನವೇರಿ ಅವರೆಲ್ಲ ಕೈಲಾಸಗಾಮಿಗಳಾಗುತ್ತಾರೆ.

**ಹರಿಹರನ ರಗಳೆಗಳಲ್ಲಿ ಜಾನಪದೀಯ ಅಂಶಗಳು**

ಹರಿಹರನ ರಗಳೆಗಳಲ್ಲಿ ಕರ್ನಾಟಕದ ಸಂಸ್ಕೃತಿಯ ಅಂಶಗಳು ಅಲ್ಲಲ್ಲಿ ಪ್ರತಿಬಿಂಬಿತವಾಗಿವೆ. ಯಾರಾದರೂ ಇಬ್ಬರು ವ್ಯಕ್ತಿಗಳಲ್ಲಿ ಜಗಳ ಪ್ರಾರಂಭವಾದಾಗ ಅದನ್ನು ಬಗೆಹರಿಸಿ ನಿರ್ಣಯ ಕೊಡುವವರು ಮೂವಾಯಿಲರು (ಪಂಚರು).

ಅವರು ಊರಿನ ಶಿವ ದೇವಾಲಯದಲ್ಲಿ ಸಭೆ ಸೇರಿ ನ್ಯಾಯ ನಿರ್ಣಯ ಮಾಡುವರು. ಅಲ್ಲಿಗೆ ಊರಿನ ಜನರೆಲ್ಲ ಸೇರುತ್ತಿದ್ದರೆಂದು ತಿಳಿದುಬರುತ್ತದೆ. ತಿರುನೀಲಕಂಠ ರಗಳೆಯಲ್ಲಿ ಇಂಥ ಒಂದು ಪ್ರಸಂಗವಿದೆ (ತಿರುನೀಲಕಂಠ ರಗಳೆ). ಅಮರನೀತಿಯು ಈಶ್ವರ ದೇವಾಲಯಕ್ಕೆ ತರಿಸಿದ ವಸ್ತ್ರಾವಳಿಯಲ್ಲಿ ಚೀನಿ, ಲತಾವಳಿ, ಪುಷ್ಪಾವಳಿ, ನೇತ್ರಾವಳಿ, ಗಜಾವಳಿ, ಸಿಂಹಾವಳಿ, ಸುರಾವಳಿ, ಹಂಸಾವಳಿ, ಪಟ್ಟಾವಳಿ ಇತ್ಯಾದಿ ವಸ್ತ್ರಗಳ ಹೆಸರುಗಳಿವೆ (ಅಮರ ನೀತಿ ರಗಳೆ). ಇಷ್ಟು ಕಲಾತ್ಮಕವಾದ ವಸ್ತ್ರಗಳನ್ನು ಕರ್ನಾಟಕದಲ್ಲಿ ತಯಾರಿಸುತ್ತಿದ್ದರೆಂದು ತಿಳಿಯಬಹುದಾಗಿದೆ. ಹೂಗಳ ಹೊದಿಕೆಯಲ್ಲಿ ಉಡುಪುಗಳನ್ನು ಮಡಿಚಿಟ್ಟು ಅವುಗಳಿಗೆ ಸುವಾಸನೆ ಬರುವಂತೆ ಮಾಡುತ್ತಿದ್ದರು. (ಅದೇ)

ಮನೆಗೆ ಯಾರಾದರೂ ಪೂಜ್ಯ ಅತಿಥಿಗಳು ಆಗಮಿಸಿದರೆ ಅವರಿಗಾಗಿ ವೈವಿಧ್ಯಮಯವಾದ ಭಕ್ಷ್ಯ ಭೋಜ್ಯಗಳನ್ನು ತಯಾರಿಸಿ ಅವರಿಗೆ ಬಡಿಸುತ್ತಿದ್ದರು. ಇಹಃಪಗೆಯಾಂಡನು ಶಿವಭಕ್ತರು ಮನೆಗೆ ಬಂದಾಗ ಸವಿಗಳನ್ನು ಸಾಲಿಡುವ ರಸದ ಪಕ್ವಾನ್ನ, ನವಪರಿಮಳ ಕರಗದಂತಿರುವ ತುಪ್ಪ, ಕ್ಷೀರಮಯವಾದ ತವರಾಜ, ನಿರ್ಮಲವಾದ ಅನ್ನ, ಸುವಾಸನೆಯನ್ನು ಸೂಸುವ ಶಾಕ, ತನಿರಸ ಮಡುಗಟ್ಟಿದ ಮಾವು, ಇನಿದು ಕೆನೆಗಟ್ಟಿದ ಪಲಸಿನ ತೊಳೆಗಳು, ಸವಿಯಿಂಡೆಗೊಂಡಿರುವ ಬಾಳೆ, ಬೆಳಂದಿಗಳಿನ ಕೆನೆಯಂತಿರುವ ಮೊಸರು ಇತ್ಯಾದಿಗಳನ್ನಿತ್ತು ಸತ್ಕರಿಸುತ್ತಾನೆ (ಇಹಃಪಗೆಯಾಂಡನ ರಗಳೆ). ಬಸವಣ್ಣನ ಮಹಾಮನೆಗೆ ಆಗಮಿಸಿದ ಜಂಗಮರಿಗೆ ವಿವಿಧಾನ್ನ ರಸದ ಪಕ್ವಾನ್ನ, ಮಂಡಿಗೆ, ಗಾರಿಗೆ, ಹೂರಿಗೆ, ಲಡ್ಡುಗೆ, ಹಾಲುಂಡೆ, ಘೃತಪೂರ, ಹಾಲೋಗರ, ಸಣ್ಣಸೇವಿಗೆ, ಬೀಸುಂಬೂರಿಗೆ, ಪರಡಿಯ ಪಾಯಸ, ಸಣ್ಣ ಸರವಳಿಗೆ, ಮಣಿಸರವಳಿಗೆ, ಹಾಲುತುಪ್ಪ ಮುಂತಾದ ತಿಂಡಿ ತಿನಸುಗಳನ್ನು ಬಡಿಸುತ್ತಿದ್ದರು.

ವೀರಶೈವದಲ್ಲಿ ಹುಟ್ಟಿದ ವೈಜಕವ್ವೆ ಜೈನ ನೇಮಿಸೆಟ್ಟಿಯನ್ನು ಕೈಹಿಡಿಯಬೇಕಾಗಿ ಬರುತ್ತದೆ. ಅವಳು ಗೃಹಿಣಿ ಧರ್ಮದ ಪ್ರಕಾರ ಮನೆಗೆ ಬಂದ "ಸರಣಗುನ್ನಿ"ಗಳಿಗೆ ಮನಸ್ಸಿಲ್ಲದ ಮನಸ್ಸಿನಿಂದ ಹಾಲಿನಲ್ಲಿಯೇ ಉಂಡೆ, ಮಂಡಿಗೆ, ಲಡ್ಡುಗಳನ್ನು ಮಾಡುತ್ತಾಳೆ. ಆದರೆ ಬೀಸುಂಹೂರಿಗೆ, ಇಡ್ಡಲಿಗೆ, ಅಣ್ಣೆವಾಲ ಪಾಯಸ, ಬೆಳದಿಂಗಳ ಬೀಜವೆನಿಸುವ (ನೆಲ್ಲನ್ನ) ಕಳವೆಯೋಗರ, ಸಾಂದ್ರರುಚಿ ಮತ್ತು



ಕಂಜನಾಂತ ಶಾಕಪಾಕ, 'ಮಧುರವಾಮ್ಲ, ಕಟುಕ, ತಿಕ್ತ, ಲವಣ, ಕೈಪೆ ಹೆಸರನ್ನುಳ್ಳ ಮಧುಗೆ, ವಿಧುಗೆ, ಸುಧಗೆ ಮಿಗಿಲೆನಿಸುವ ಷಟ್ ರಸಾಯನಂಗಳನ್ನು ಸಿದ್ಧಪಡಿಸಿ, ಇಂಥ ಅನ್ನ ಪಾನಗಳನ್ನು ಶಿವಭಕ್ತರಿಗೆ ಅರ್ಪಿಸುವ ಸದಾವಕಾಶ ನನಗೆ ಒದಗಲಿಲ್ಲವಲ್ಲಾ ಎಂದು ಪರಿತಪಿಸುತ್ತಾಳೆ. (ವೈಜಕವ್ವೆ ರಗಳೆ)

ಬೇಡರು ಬೇಟೆಯಾಡಿ ತಂದ ಮಿಗವನ್ನು ಕೊಯ್ದು ಕೆಂಪುಳ್ಳ, ನುಂಪುಳ್ಳ, ಸೊಂಪುಳ್ಳ, ಇಂಪುಳ್ಳ, ಕಂಪುಳ್ಳ, ಹೆಂಪುಳ್ಳ ಮಾಂಸದ ಖಂಡಗಳನ್ನು ಬಿಡಿಸಿ ತೆಗೆದು, ಸುಂಟಿಗೆ ಕೋಲಿಗೆ ಸಿಕ್ಕಿಸಿ ಕೆಂಡದಲ್ಲಿ ಸುಟ್ಟು, ಪರಿಪಾಕ ಮಾಡಿ ಮೃದುವಾದ ಹದವಾದ ತೆಲ್ಗಂಡಗಳನ್ನು ರುಚಿ ನೋಡಿ ಮುತ್ತುಗದ ಎಲೆಗಳ ಮೇಲೆ ಇಟ್ಟುಕೊಂಡು ತಿನ್ನುತ್ತಿದ್ದರಂತೆ. (ಬೇಡರ ಕಣ್ಣಪ್ಪನ ರಗಳೆ)

ರಸಿಕ ವಿಟ ಪುರುಷರು ಹೆಣ್ಣು ಮಕ್ಕಳಂತೆ ಮುಡಿಕಟ್ಟಿ ಪರಿಮಳಯುಕ್ತ ಹೂಗಳನ್ನು ಧರಿಸುತ್ತಿದ್ದರು. ಅವರ ಮುಂಗುರುಳು ಸುರುಳಿ ಸುರುಳಿಯಾಗಿ ಸುಳಿದಾಡುತ್ತಿದ್ದವು. ವಿಭೂತಿ ಇಲ್ಲವೆ ಗಂಧದ ಬೊಟ್ಟು ಹಣೆಯಲ್ಲಿ ಪರಿಶೋಭಿಸುತ್ತಿತ್ತು. ಪರಿಮಳ ಭರಿತ ತಾಂಬೂಲವನ್ನು ಮೆಲ್ಲುತ್ತಿದ್ದರು. ಮುತ್ತಿನ ಹಾರಗಳನ್ನು ಧರಿಸುತ್ತಿದ್ದರು. ಹೊಸ ದೇಸಾಳದ ಧೋತ್ರಗಳನ್ನುಟ್ಟು, ಶಲ್ಯಗಳನ್ನು ಹೊದೆಯುತ್ತಿದ್ದರು (ಇಹಃಪಗೆಯಾಂಡರಗಳೆ). ಜುಂಜುದಲೆ, ಕೆಂಗಣ್ಣು, ಗುಂಜಾಭರಣದ ಬೇಡರು ರಂಜಿಸುತ್ತಿದ್ದರು. ಅವರು ಮೈಗೆ ಕುಪ್ಪಸ (ಅಂಗಿ)ವನ್ನು ತೊಡುತ್ತಿದ್ದರು. ತಲೆ, ಉರ, ಕರಗಳಿಗೆ ಕವಡಿಕೆಯ ದಂಡೆಗಳನ್ನು ಧರಿಸುತ್ತಿದ್ದರು. ಮೈಗೆ ತೊವಲಿನ ಉಡುಗೆಯನ್ನು ಬಿಗಿದುಟ್ಟು ಎಲುವುಗಳ ಆಭರಣಗಳನ್ನು ಧರಿಸುತ್ತಿದ್ದರು. ಮೊಗದಲ್ಲಿ ವಿಭೂತಿ, ನೆತ್ತಿಯಲ್ಲಿ ಎತ್ತಿ ಕಟ್ಟಿದ ನವಿಲಗರಿ ಮುಡಿ ಕನ್ನಡಿ, ಬೆನ್ನಿನಲ್ಲಿ ಇಳುಹಿದ ಚಮರಿಯಿಂದ ಅವರು ಒಪ್ಪುತ್ತಿದ್ದರು. ಬಿಲ್ಲು ಕೂರಂಬುಗಳನ್ನು ಹಿಡಿದಿರುತ್ತಿದ್ದರು. ಸಂಜೆ ಬೆಳಗಿನವರೆಗೆ ಚೆಂದ ಚೆಂದದ ಕುಣಿತದಲ್ಲಿ ಮಗ್ನರಾಗಿರುತ್ತಿದ್ದರು. ಕೊಂಬು, ಮಲಾರಿ, ಕಹಳೆ, ಕರಡೆ ಮುಂತಾದ ವಾದ್ಯಗಳನ್ನು ಬಾರಿಸುತ್ತಿದ್ದರು (ಬೇಡರ ಕಣ್ಣಪ್ಪನ ರಗಳೆ).

ಮಕ್ಕಳನ್ನು ಅರಳೆಲೆ, ಮಾಗಾಯಿ, ಉಲಿಯುಗುರು, ಉಡೆವಣೆ, ಪೊಂಗಜ್ಜೆ, ಅಂದುಗೆ ಇತ್ಯಾದಿಗಳಿಂದ ಸಿಂಗರಿಸುತ್ತಿದ್ದರು. (ಮಳೆಯರಾಜ ರಗಳೆ) ಸುಂದರ ಹೆಣ್ಣು ಮಕ್ಕಳನ್ನು, ಅದರಲ್ಲೂ ವೇಶ್ಯಾ ಸ್ತ್ರೀಯರನ್ನು "ಪಾದ ಮುದ್ರಿಕೆಯನ್ನಲಂಕರಿಸಿ, ನೇಪುರಮುನಳವಡಿಸಿ, ಕಂಕಣಮಂ ತಿರುಂಪಿ, ರತ್ನ ಮುದ್ರಿಕೆಗಳಂ ಕೆಯ್ಗೊಳಿಸಿ,

ಬಾಹು ಪೂರಮನಿಕ್ಕಿ, ಕರ್ಣಾವತಂಸಮಂ ಕೆಳೆಗೊಳಿಸಿ, ಕುಚಯುಗಕ್ಕೆ ಕಂಚುಕೆಯಂ ತೊಡಿಸಿ, ತೋರಮುತ್ತಿನಹಾರಮಂ ಹತ್ತೆ ಸಾರ್ಚಿ, ಮುಖಬಿಂಬದೊಳ್ ಮುತ್ತಿನ ಮೂಕುತಿಯಂ ಮೇಳೈಸಿ, ಕಜ್ಜಳಮನೆಚ್ಚಿ, ನವದುಕೂಲಮಂ ನಿರಿವಿಡಿದುಡಿಸಿ, ಕತ್ತುರಿಯ ತಿಲಕಮಂ ನೊಸಲೊಳಿಟ್ಟು, ಮುಡಿಯೊಳ್ ಹೊಸ ಕುಸುಮ ದೆಸಳಂ ತುರುಂಬಿ" ವಿಲಾಸಿನಿಯರು ಅಲಂಕರಿಸುತ್ತಿದ್ದರು (ಮಲುಹಣನ ರಗಳೆ). ಈ ವಿಲಾಸಿನಿಯರು ಉಪ್ಪರಿಗೆಯ ಮನೆಗಳಲ್ಲಿ ವಾಸಿಸುತ್ತಿದ್ದರು. ಪರಿಯಾಣಗಳ ತೊಳೆದ ನೀರನ್ನು ಮೇಲಿನಿಂದ ಬೀದಿಗೆ ಚೆಲ್ಲುತ್ತಿದ್ದರು. ಶಿವಭಕ್ತರಿಗೆ ಅಪಚಾರವಾಗದಂತೆ ಭಯಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು (ತಿರುನೀಲಕಂಠ ರಗಳೆ).

ಬರಿಗೈಯಾದ ವಿಟಪುರುಷರನ್ನು ದೂರ ಸರಿಸುವುದಕ್ಕಾಗಿ ರಕ್ಕಸ ಗುಂಟಣಿಯರಾದ ವೇಶ್ಯೆಯರು ಅನೇಕ ಉಪಾಯಾಂತರಗಳನ್ನು ಹುಡುಕುತ್ತಿದ್ದರೆಂಬುದಕ್ಕೆ ಆಧಾರಗಳು ಕಂಡುಬರುತ್ತವೆ (ಮಲುಹಣನ ರಗಳೆ). ರಾಜರು ಗೆಳೆಯರೊಡಗೂಡಿ ಪರಿಮಳ ಜಳದಲ್ಲಿ ಓಕುಳಿಯಾಟವನ್ನು ಆಡುತ್ತಿದ್ದರು (ಬಾಣಶರಣನ ರಗಳೆ). ಕೆರೆಕಟ್ಟಿ ಉಪವನಗಳಿಗೆ ಮಕ್ಕಳ ಹೆಸರಿಟ್ಟು ಪುತ್ರೋತ್ಸವವನ್ನು ಆಚರಿಸುತ್ತಿದ್ದರು (ಮಳೆಯ ರಾಜ ರಗಳೆ). ರಾಜರು ಕುಮಾರರ ಸಮೇತ ವೈಭವದ ವೈಹಾಳಿ (ಕುದುರೆ ಸವಾರಿ) ವಿನೋದವನ್ನು ಅನುಭವಿಸುತ್ತಿದ್ದರು (ಅದೇ). ಪೂಜ್ಯರಾದ ಹಿರಿಯ ಅತಿಥಿಗಳನ್ನು ಸಂಭ್ರಮಾತಿಶಯದಿಂದ ಎದುರುಗೊಳ್ಳುತ್ತಿದ್ದರು (ಕೆಂಭಾವಿ ಭೋಗಣ್ಣ). ಜಂಗಮರು ಬಂದರೆ ಸಂಗಮನಾಥನೇ ಬಂದನೆಂದು ಬಸವಾದಿಗಳು ಸುಖಿಸುತ್ತಿದ್ದರು. ವಿವಾಹ ಪೂರ್ವ ಪ್ರಣಯದಿಂದ ಗಂಡು ಹೆಣ್ಣಿನಲ್ಲಿ ಪರಸ್ಪರ ಪ್ರೇಮ ಅಂಕುರಿಸಿದಾಗ ವಿಚಾರವಂತರಾದ ಹಿರಿಯರು ಅದನ್ನು ಮಾನ್ಯ ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಹಾವಿನಹಾಳ ಕಲ್ಲಯ್ಯನು ಶಿವಭಕ್ತೆಯೊಬ್ಬಳನ್ನು ಕೂಡಿದಾಗ ಸಿದ್ಧರಾಮನು ಅದನ್ನು ಮನ್ನಿಸುತ್ತಾನೆ (ಹಾವಿನ ಹಾಳ ಕಲ್ಲಯ್ಯನ ರಗಳೆ). ಆದರೆ ಬಸವರಾಜ ದೇವರ ರಗಳೆ ಪ್ರಕಾರ ಮಧುವರಸನ ಮಗಳು ಮತ್ತು ಹರಳಯ್ಯನ ಮಗ ಇವರಿಗೆ ಅಂತರ್‌ಜಾತಿ ವಿವಾಹವಾದ ಉಲ್ಲೇಖವೇ ಇಲ್ಲ.

ಶಿವ ದೇವಾಲಯಗಳಲ್ಲಿ ದಿನನಿತ್ಯವೂ ನಡೆಯುತ್ತಿದ್ದ ಶಿವಲಿಂಗಪೂಜೆ, ಶಿವಪುರಾಣ ಪ್ರವಚನ, ನೃತ್ಯಗೀತ ಗಾಯನ ಗೋಷ್ಠಿಗಳ ವಿವರಣೆಗಳು ಅನೇಕ



ರಗಳೆಗಳಲ್ಲಿ ಬರುತ್ತವೆ. ಜೈನರು ಹಾಗೂ ಶೈವರಲ್ಲಿ ಹೆಣ್ಣು ಕೊಟ್ಟು ತರುವ ಬಾಂಧವ್ಯ ರೂಢಿಯಲ್ಲಿತ್ತು (ವೈಜಕವ್ವೆ ರಗಳೆ). ಶೈವನಾದ ಆದಯ್ಯ ಜೈನಳಾದ ಪದ್ಮಾವತಿಗೆ ದೀಕ್ಷೆ ಕೊಟ್ಟು ಕೈಹಿಡಿಯುವುದನ್ನು ಕಾಣುತ್ತೇವೆ. ಹೊಯ್ಸಳರ ಕಾಲದಲ್ಲಿ ಜೈನ, ವೈಷ್ಣವ ಹಾಗೂ ಶೈವ ಮನೆತನಗಳಲ್ಲಿ ಹೆಣ್ಣು ಕೊಟ್ಟು ತರುವ ಮತ್ತು ಇಷ್ಟ ಬಂದ ಮತಗಳಿಗೆ ಮಂತಾತರಗೊಳ್ಳುವ ಪರಿಪಾಠವಿತ್ತೆಂಬುದು ಚಾರಿತ್ರಿಕ ಸತ್ಯ. ಅದಕ್ಕೆ ಪುರಾವೆಗಳು ಹರಿಹರನ ರಗಳೆಗಳಲ್ಲೂ ಕಾಣಸಿಗುತ್ತವೆ.

ಕೆಲವು ತಾಂತ್ರಿಕ ಪಂಡಿತರು ತಮ್ಮ ಕೆಲಸವು ಕೈಗೂಡಲು ಪಶು ಪ್ರಾಣಿಗಳಂತಿರಲಿ, ಹೆಣ್ಣು ಮಕ್ಕಳನ್ನು ಬಲಿಕೊಡಲೂ ಹೇಸುತ್ತಿರಲಿಲ್ಲ. ರೇವಣ ಸಿದ್ಧೇಶ್ವರ ರಗಳೆಯಲ್ಲಿ ಇಂಥ ಒಂದು ಅಮಾನುಷ ಪ್ರಸಂಗದ ಉಲ್ಲೇಖ ಬರುತ್ತದೆ. ಒಬ್ಬ ಕಪಟ ಯೋಗಿ ಮಾಸೂರಿನ ನದಿಯಲ್ಲಿರುವ ಸುರಗಿಯನ್ನು ತೆಗೆಯಬೇಕಾದರೆ ೧೨ ಸಾವಿರ ಹೆಣ್ಣು ಮಕ್ಕಳನ್ನು ಬಲಿ ನೀಡಬೇಕೆಂದು ಬಿಜ್ಜಳ ದೊರೆಗೆ ತಿಳಿಸುತ್ತಾನೆ.

ಗಣಪರ್ವ ಮಾಡುವುದಕ್ಕೆ ಭತ್ತವನ್ನು ಸಂಗ್ರಹಿಸಿ, ಅದನ್ನು ಕೊಟ್ಟಣ ಕುಟ್ಟಲು ಮನೆ ಮನೆಗೆ ಹಂಚುವ ಪದ್ಧತಿ ಇತ್ತು. ಆದರೆ ಕೆಲವು ಗಟ್ಟಿಗಿತ್ತಿಯರಾದ ಒಕ್ಕಲಗಿತ್ತಿಯರು ನಮ್ಮಿಂದ ಸಾಧ್ಯವಿಲ್ಲವೆಂದು ಆ ಮುಖಂಡರ ಮುಖಕ್ಕೆ ಹೇಳಿಬಿಡುತ್ತಿದ್ದರು. ಊರ ಹೊರಗಿನ ಮಾರಿ ಮಸಣೆಯರು ಇಡೀರಾತ್ರಿ ಗಣಪರ್ವಕ್ಕೆ ಕೊಟ್ಟಣ ಕುಟ್ಟಿ ಅಕ್ಕಿ ತೌಡನ್ನು ಕೇರಿ ತೂರಿ ವಿಂಗಡಿಸುತ್ತಿದ್ದರು. ಆದರೆ ಅವರಿಗೆ ಸಿಕ್ಕುತ್ತಿದ್ದುದು ಅಕ್ಕಿಯ ನುಚ್ಚು ಮಾತ್ರವೇ. ಕೊಟ್ಟಣ ಕುಟ್ಟಿ ಅಕ್ಕಿ ತೌಡನ್ನು ವಿಂಗಡಿಸಿದ ಅವರು ನರೆಮಂಡೆ, ಬಿಜ್ಜೋಲೆ, ನಸು ಮಾಸಿದುಡುಗೆ, ತೆರೆಗೊಂಡಮೆಯ್ಯ, ನುಣ್ಬರಿಸಿನದ ಗಾಡಿ ಮೊಗದೊಳು, ದಾಡೆಯೊಳು ಹತ್ತಿರ್ದ ತೌಡು ಮುಂತಾಗಿ ಕರುಣಾಜನಕ ಸ್ಥಿತಿಯಲ್ಲಿರುತ್ತಿದ್ದರು. ಭತ್ತ ಕುಟ್ಟಲು ಒನಕೆ, ಕೇರಿ ತೂರಲು ಮೊರ ಮುಂತಾದ ಸಾಧನಗಳಿದ್ದವು (ಆದಯ್ಯನ ರಗಳೆ). ದೇವರಿಗೆ ಹೆಣ್ಣು ಮಕ್ಕಳ ತಲೆಗೂದಲನ್ನು ಮುಡಿ ಕೊಡುತ್ತಿದ್ದರು (ಮಾನಕಂಜರ ರಗಳೆ).

'ನಿನ್ನ ಸಕಲ ಸಂಪತ್ತು ನನ್ನ ಪುಟಗೋಸಿಗೆ ಸಮನಲ್ಲ' ಎಂಬ ಜಾನಪದ ಬೈಗುಳಕ್ಕೆ ಪ್ರತ್ಯಕ್ಷ ಪ್ರಸಂಗ ಒಂದನ್ನು ಅಮರನೀತಿಯ ರಗಳೆಯಲ್ಲಿ ನಿರೂಪಿಸಲಾಗಿದೆ. ಅಮರ ನೀತಿ ಎಂಬ ರಾಜನ ಸರ್ವವಸ್ತ್ರ ಭಂಡಾರವೆಲ್ಲ ವೃದ್ಧ(ಶಿವ) ಭಿಕ್ಷುಕನೊಬ್ಬನ

ಮಾರುಡೆಕೌಪು (ಕೌಪೀನ)ವಿಗೆ ಸಮತೂಕ ತೂಗುವುದಿಲ್ಲ (ಅಮರ ನೀತಿಯ ರಗಳೆ).

ವೃದ್ಧ ಜಂಗಮರು ತಮ್ಮ ತಿರುಗಾಟದ ಸಂದರ್ಭದಲ್ಲಿ ತಮ್ಮಲ್ಲಿರುವ ಕೆಲವು ವಸ್ತುಗಳನ್ನು ಯಾರದಾದರೂ ಬಳಿಯಲ್ಲಿ ನ್ಯಾಸವಾಗಿಟ್ಟು ಹೋಗುತ್ತಿದ್ದರು. ಅವರು ಅವುಗಳನ್ನು ಭಯಭಕ್ತಿಯಿಂದ ಕಾಪಾಡಿಕೊಂಡಿದ್ದು ಮಾಲೀಕರು ಬಂದಾಗ ಹಿಂತಿರುಗಿಸುತ್ತಿದ್ದರು (ತಿರುನೀಲಕಂಠರ ರಗಳೆ, ಅಮರ ನೀತಿಯ ರಗಳೆ). ಹಾಗೇನಾದರೂ ಅವರು ಹಿಂದಿರುಗಿಸದಿದ್ದ ಪಕ್ಷಕ್ಕೆ ಅಂಥವರನ್ನು ಊರಿನ ಪಂಚಾಯಿತಿ ಕಟ್ಟೆ ಹತ್ತಿಸಲಾಗುತ್ತಿತ್ತು. (ಅದೇ)

ಅಪುತ್ರರಾದ ರಾಜರು ಸಲ್ಲಕ್ಷಣವುಳ್ಳ ಮಗುವನ್ನು ಕೊಂಡುಕೊಳ್ಳುತ್ತಿದ್ದರು (ದತ್ತು). ಬಡವರು ಮಕ್ಕಳ ಪುರೋಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಟ್ಟು ಕೊಡುತ್ತಿದ್ದರು (ನಂಬಿಯಣ್ಣನ ರಗಳೆ). ಮಲ್ಲಯುದ್ಧ, ಟಗರುಕಾಳಗ, ಕೋಳಿ ಪಂದ್ಯ, ಮಹಿಷ ಕಾಳಗ ಮುಂತಾದುವುಗಳು ಮನರಂಜನೆ ಕೊಡುತ್ತಿದ್ದವು (ಅದೇ). ಲಗ್ನ ನಿಷ್ಕರ್ಷೆಯ ಸಂದರ್ಭದಲ್ಲಿ ಮುಹೂರ್ತಿಕನ ಬಳಿಗೆ ಹೋಗಿ ನಕ್ಷತ್ರಬಲ ಕೇಳುತ್ತಿದ್ದರು (ಅದೇ). ರಾಜನ ಪರವಾಗಿ ಮಂತ್ರಿಯೆ ಕುಮಾರರ ಮದುವೆ ಮಾಡಿಸಲು ಹೋಗಿ ಬರುತ್ತಿದ್ದರು. (ಅದೇ)

ವೃದ್ಧ ಬ್ರಾಹ್ಮಣರು ವಂಶಪಾರಂಪರ್ಯವಾಗಿ ಗಂಡು ತೊತ್ತುಗಳನ್ನು ನೇಮಿಸಿಕೊಳ್ಳುತ್ತಿದ್ದರು. ಹೀಗೆ ನೇಮಿಸಿಕೊಳ್ಳುವಾಗ ಸಾಕ್ಷಿ ಸಮೇತ ಕರಾರು ಪತ್ರಗಳನ್ನು ಬರೆಸಿಕೊಳ್ಳುತ್ತಿದ್ದರು. ಆಳು ಮಕ್ಕಳು ಸೇವೆಯಿಂದ ಬಿಟ್ಟು ಹೋಗದಂತೆ ಇಂಥ ನಿಬಂಧನೆಗಳಿದ್ದುವು. ಕರಾರುಪತ್ರದ ಮೂಲ ಪ್ರತಿಯನ್ನು ಊರಿನ ಶಿವ ದೇವಾಲಯದಲ್ಲಿ ಭದ್ರವಾಗಿಡುತ್ತಿದ್ದರು. ಪ್ರಮಾಣಪತ್ರದಲ್ಲಿ ಏನಾದರೂ ಏರುಪೇರಾದರೆ, ತೊತ್ತಿನ ಮಗ ಸರಿಯಾಗಿ ನಡೆದುಕೊಳ್ಳದಿದ್ದರೆ ಸಾಕ್ಷಿದಾರರ ಸಮಕ್ಷಮದಲ್ಲಿ ಇತ್ಯರ್ಥಮಾಡಿಕೊಳ್ಳುತ್ತಿದ್ದರು (ಅದೇ). ಈ ವೃದ್ಧ ಜಂಗಮರು ತಮ್ಮ ತೊತ್ತಿನ ಮಕ್ಕಳಿಗೆ ಹೆಣ್ಣು ನಿಶ್ಚಯಮಾಡಿಕೊಂಡು ಬರುತ್ತಿದ್ದರು. ಹೆಣ್ಣಿನ ಮನೆಗೆ ಮಧ್ಯಸ್ತಿಕೆ ವಹಿಸಲು ಯಾರಾದರು ಹೋಗುವುದನ್ನು 'ಕುಂಟಣಿತನ' ಎಂದು ಕರೆಯಲಾಗುತ್ತಿತ್ತು. (ಅದೇ)



ಮರ್ಯಾದಸ್ತರು ಸೂಳೆಯರ ಮನೆಯತ್ತ ಸುಳಿಯುತ್ತಿರಲಿಲ್ಲ (ಅದೇ). ಆದರೂ ಕುಂಟಣಿ ಸ್ತ್ರೀಯರಿಗೆ ಸಮಾಜದಲ್ಲಿ ವಿಶೇಷ ಗೌರವದ ಸ್ಥಾನವಿತ್ತು. ಏಕೆಂದರೆ ಪ್ರಭಾವಿ ಪುರುಷ ಸಮಾಜಕ್ಕೆ ಇವರು ಬೇಕಾಗಿದ್ದರು. (ಅದೇ)

ಬಾಳೆಯ ಬಾಳ್ಗಂಭ, ಲಾಮಂಚದ ಕೇರ್ಗಟ್ಟು, ಮುಡಿವಾಳದ ಚಮರಿ, ಕಮಲದ ಘಂಟೆ, ಮರುಗದ ಮೇಲ್ಕಟ್ಟು, ಕತ್ತುರಿಯ ಸಾರಣೆ, ಕುಂಕುಮದ ಕಾರಣೆ, ಕರ್ಪುರದ ರಂಗವಲಿ, ಆಲಂಬಿಸಿದ ಪುಷ್ಪಮಾಲೆ ಮುಂತಾದುವುಗಳಿಂದ ಮದುವೆಯ ಹೂವಿನ ಚಪ್ಪರವನ್ನು ನಿರ್ಮಿಸುತ್ತಿದ್ದರು. (ಅದೇ)

ಮದುವಣಿಗನನ್ನು ಮಜ್ಜನ ಮಾಡಿಸಿ, ಸಿರಿಗಂಧವನ್ನು ಮೈಗೆ ಹಚ್ಚಿ, ಸಿರಮುಡಿಗೆ ಪರಿಪರಿಯ ಹೂವನ್ನು ಸೂಡಿ, ಕಸ್ತೂರಿಯ ತಿಲಕವನ್ನಿಟ್ಟು, ಮುತ್ತಿನ ಏಕಾವಳಿಯನ್ನು ಕೊರಳಿಗೆ ಹಾಕಿ, ಬಾಹುಪೂರವನ್ನು ಕೈಗೊಳಿಸಿ, ರತ್ನ ಮುದ್ರಿಕೆಗಳನ್ನು ಬೆರಳಿಗೆ ಅಳವಡಿಸಿ, ಬಿಳಿಯ ಪಟ್ಟಾವಳಿಯನ್ನು ತೆಗೆದುಡಿಸಿ, ಸವ್ಯದಿವ್ಯಾಭರಣವನ್ನು ತೊಡಿಸಿ, ಚೆಂಗಣಿಗಿಲೆಯ ತೋಳ್ಮಾಲೆಗಳನ್ನಿಕ್ಕಿ, ಬೆಳ್ಪನೆಯ ಉತ್ತರೀಯವನಿಕ್ಕಿ ಸಿಂಗರಿಸುತ್ತಿದ್ದರು. (ಅದೇ)

ಮದುವಣಗಿತ್ತಿಯು ತಾವರೆಯನೂಲ ದುಕೂಲಮನುಟ್ಟು, ಪರಾಗದ-ತಿಲಕಮನಿಕ್ಕಿ, ಅದಿರ್ಗಂತಿ ಕಂಕಣವನ್ನು ತೊಟ್ಟು, ಮಲ್ಲಿಗೆಯ ಹಾರವನ್ನು ಧರಿಸಿ, ಮಲ್ಲಿಗೆಯ ಮುಗುಳ ಕಡುಕಗಳನ್ನು ಕಿವಿಗಿಟ್ಟು ಅಲಂಕಾರಗೊಳ್ಳುತ್ತಿದ್ದಳು (ಅದೇ). ಜಾಜಿಯ ಸಣ್ಣ ನನೆಗಳಿಂದ ಮದುವಣಿಗರಿಗೆ ಸೇಸೆಯನ್ನಿಡುತ್ತಿದ್ದರು (ಅದೇ). ಆ ಸಮಯದಲ್ಲಿ ಗಂಡು ಹೆಣ್ಣಿನ ಹೂವಿನ ಹೆಡಗೈಯ್ಯನ್ನು ಬಿಟ್ಟು ತನ್ನ ಸ್ನೇಹದ ಹೆಡಗೈಯನ್ನು ಕಟ್ಟುತ್ತಿದ್ದನು (ಅದೇ).

ತಳಿಯಲಾರ ಕುಲದ ಸಂಪ್ರದಾಯದ ಪ್ರಕಾರ ಹೆಣ್ಣು ಪ್ರಥಮ ಪುಷ್ಪಿತ (ಮೈನೆರೆ)ಯಾದ ಸಂದರ್ಭದಲ್ಲಿ "ಪುಷ್ಪಮಾಲಾಬದ್ಧ"ವೆಂಬ ಪರ್ವವನ್ನು ಏರ್ಪಡಿಸುತ್ತಿದ್ದರು. ಅದನ್ನು "ಮನ್ಮಥ ಪರ್ವ"ವೆಂದೂ ಕರೆಯಲಾಗುತ್ತಿತ್ತು. ಆ ದಿನ ಹೆಣ್ಣಿನ ಹೂವಿನ ಹೆಡಗೈಯ್ಯನ್ನು ಬಿಡುವೊಡೆ ಶಿವಬ್ರಾಹ್ಮಣನೇ ಆಗಮಿಸಬೇಕಾಗಿತ್ತು (ಅದೇ). ನಂಬಿಯಣ್ಣನ ರಗಳೆಯಲ್ಲಿ ವರ್ಣಿಸಲ್ಪಟ್ಟಿರುವ ಇಂಥ ಸಂಪ್ರದಾಯದ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಮಾರುಡೆಕೌಪು (ಕೌಪೀನ)ವಿಗೆ ಸಮತೂಕ ತೂಗುವುದಿಲ್ಲ (ಅಮರ ನೀತಿಯ ರಗಳೆ).

ವೃದ್ಧ ಜಂಗಮರು ತಮ್ಮ ತಿರುಗಾಟದ ಸಂದರ್ಭದಲ್ಲಿ ತಮ್ಮಲ್ಲಿರುವ ಕೆಲವು ವಸ್ತುಗಳನ್ನು ಯಾರದಾದರೂ ಬಳಿಯಲ್ಲಿ ನ್ಯಾಸವಾಗಿಟ್ಟು ಹೋಗುತ್ತಿದ್ದರು. ಅವರು ಅವುಗಳನ್ನು ಭಯಭಕ್ತಿಯಿಂದ ಕಾಪಾಡಿಕೊಂಡಿದ್ದು ಮಾಲೀಕರು ಬಂದಾಗ ಹಿಂತಿರುಗಿಸುತ್ತಿದ್ದರು (ತಿರುನೀಲಕಂಠರ ರಗಳೆ, ಅಮರ ನೀತಿಯ ರಗಳೆ). ಹಾಗೇನಾದರೂ ಅವರು ಹಿಂದಿರುಗಿಸದಿದ್ದ ಪಕ್ಷಕ್ಕೆ ಅಂಥವರನ್ನು ಊರಿನ ಪಂಚಾಯಿತಿ ಕಟ್ಟೆ ಹತ್ತಿಸಲಾಗುತ್ತಿತ್ತು. (ಅದೇ)

ಅಪುತ್ರರಾದ ರಾಜರು ಸಲ್ಲಕ್ಷಣವುಳ್ಳ ಮಗುವನ್ನು ಕೊಂಡುಕೊಳ್ಳುತ್ತಿದ್ದರು (ದತ್ತು). ಬಡವರು ಮಕ್ಕಳ ಪುರೋಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿಟ್ಟು ಕೊಡುತ್ತಿದ್ದರು (ನಂಬಿಯಣ್ಣನ ರಗಳೆ). ಮಲ್ಲಯುದ್ಧ, ಟಗರುಕಾಳಗ, ಕೋಳಿ ಪಂದ್ಯ, ಮಹಿಷ ಕಾಳಗ ಮುಂತಾದುವುಗಳು ಮನರಂಜನೆ ಕೊಡುತ್ತಿದ್ದವು (ಅದೇ). ಲಗ್ನ ನಿಷ್ಕರ್ಷೆಯ ಸಂದರ್ಭದಲ್ಲಿ ಮುಹೂರ್ತಿಕನ ಬಳಿಗೆ ಹೋಗಿ ನಕ್ಷತ್ರಬಲ ಕೇಳುತ್ತಿದ್ದರು (ಅದೇ). ರಾಜನ ಪರವಾಗಿ ಮಂತ್ರಿಯೆ ಕುಮಾರರ ಮದುವೆ ಮಾಡಿಸಲು ಹೋಗಿ ಬರುತ್ತಿದ್ದರು. (ಅದೇ)

ವೃದ್ಧ ಬ್ರಾಹ್ಮಣರು ವಂಶಪಾರಂಪರ್ಯವಾಗಿ ಗಂಡು ತೊತ್ತುಗಳನ್ನು ನೇಮಿಸಿಕೊಳ್ಳುತ್ತಿದ್ದರು. ಹೀಗೆ ನೇಮಿಸಿಕೊಳ್ಳುವಾಗ ಸಾಕ್ಷಿ ಸಮೇತ ಕರಾರು ಪತ್ರಗಳನ್ನು ಬರೆಸಿಕೊಳ್ಳುತ್ತಿದ್ದರು. ಆಳು ಮಕ್ಕಳು ಸೇವೆಯಿಂದ ಬಿಟ್ಟು ಹೋಗದಂತೆ ಇಂಥ ನಿಬಂಧನೆಗಳಿದ್ದುವು. ಕರಾರುಪತ್ರದ ಮೂಲ ಪ್ರತಿಯನ್ನು ಊರಿನ ಶಿವ ದೇವಾಲಯದಲ್ಲಿ ಭದ್ರವಾಗಿಡುತ್ತಿದ್ದರು. ಪ್ರಮಾಣಪತ್ರದಲ್ಲಿ ಏನಾದರೂ ಏರುಪೇರಾದರೆ, ತೊತ್ತಿನ ಮಗ ಸರಿಯಾಗಿ ನಡೆದುಕೊಳ್ಳದಿದ್ದರೆ ಸಾಕ್ಷಿದಾರರ ಸಮಕ್ಷಮದಲ್ಲಿ ಇತ್ಯರ್ಥಮಾಡಿಕೊಳ್ಳುತ್ತಿದ್ದರು (ಅದೇ). ಈ ವೃದ್ಧ ಜಂಗಮರು ತಮ್ಮ ತೊತ್ತಿನ ಮಕ್ಕಳಿಗೆ ಹೆಣ್ಣು ನಿಶ್ಚಯಮಾಡಿಕೊಂಡು ಬರುತ್ತಿದ್ದರು. ಹೆಣ್ಣಿನ ಮನೆಗೆ ಮಧ್ಯಸ್ತಿಕೆ ವಹಿಸಲು ಯಾರಾದರು ಹೋಗುವುದನ್ನು 'ಕುಂಟಣಿತನ' ಎಂದು ಕರೆಯಲಾಗುತ್ತಿತ್ತು. (ಅದೇ)



ಮರ್ಯಾದಸ್ತರು ಸೂಳೆಯರ ಮನೆಯತ್ತ ಸುಳಿಯುತ್ತಿರಲಿಲ್ಲ (ಅದೇ). ಆದರೂ ಕುಂಟಣಿ ಸ್ತ್ರೀಯರಿಗೆ ಸಮಾಜದಲ್ಲಿ ವಿಶೇಷ ಗೌರವದ ಸ್ಥಾನವಿತ್ತು. ಏಕೆಂದರೆ ಪ್ರಭಾವಿ ಪುರುಷ ಸಮಾಜಕ್ಕೆ ಇವರು ಬೇಕಾಗಿದ್ದರು. (ಅದೇ)

ಬಾಳೆಯ ಬಾಳ್ಗಂಭ, ಲಾಮಂಚದ ಕೇರ್ಗಟ್ಟು, ಮುಡಿವಾಳದ ಚಮರಿ, ಕಮಲದ ಘಂಟೆ, ಮರುಗದ ಮೇಲ್ಕಟ್ಟು, ಕತ್ತುರಿಯ ಸಾರಣೆ, ಕುಂಕುಮದ ಕಾರಣೆ, ಕರ್ಪುರದ ರಂಗವಲಿ, ಆಲಂಬಿಸಿದ ಪುಷ್ಪಮಾಲೆ ಮುಂತಾದುವುಗಳಿಂದ ಮದುವೆಯ ಹೂವಿನ ಚಪ್ಪರವನ್ನು ನಿರ್ಮಿಸುತ್ತಿದ್ದರು. (ಅದೇ)

ಮದುವಣಿಗನನ್ನು ಮಜ್ಜನ ಮಾಡಿಸಿ, ಸಿರಿಗಂಧವನ್ನು ಮೈಗೆ ಹಚ್ಚಿ, ಸಿರಮುಡಿಗೆ ಪರಿಪರಿಯ ಹೂವನ್ನು ಸೂಡಿ, ಕಸ್ತೂರಿಯ ತಿಲಕವನ್ನಿಟ್ಟು, ಮುತ್ತಿನ ಏಕಾವಳಿಯನ್ನು ಕೊರಳಿಗೆ ಹಾಕಿ, ಬಾಹುಪೂರವನ್ನು ಕೈಗೊಳಿಸಿ, ರತ್ನ ಮುದ್ರಿಕೆಗಳನ್ನು ಬೆರಳಿಗೆ ಅಳವಡಿಸಿ, ಬಿಳಿಯ ಪಟ್ಟಾವಳಿಯನ್ನು ತೆಗೆದುಡಿಸಿ, ನವ್ಯದಿವ್ಯಾಭರಣವನ್ನು ತೊಡಿಸಿ, ಚೆಂಗಣಿಗಿಲೆಯ ತೋಳ್ವಾಲೆಗಳನ್ನಿಕ್ಕಿ, ಬೆಳ್ಳನೆಯ ಉತ್ತರೀಯವನಿಕ್ಕಿ ಸಿಂಗರಿಸುತ್ತಿದ್ದರು. (ಅದೇ)

ಮದುವಣಗಿತ್ತಿಯು ತಾವರೆಯನೂಲ ದುಕೂಲಮನುಟ್ಟು, ಪರಾಗದ-ತಿಲಕಮನಿಕ್ಕಿ, ಅದಿರ್ಗಂತಿ ಕಂಕಣವನ್ನು ತೊಟ್ಟು, ಮಲ್ಲಿಗೆಯ ಹಾರವನ್ನು ಧರಿಸಿ, ಮಲ್ಲಿಗೆಯ ಮುಗುಳ ಕಡುಕಗಳನ್ನು ಕಿವಿಗಿಟ್ಟು ಅಲಂಕಾರಗೊಳ್ಳುತ್ತಿದ್ದಳು (ಅದೇ). ಜಾಜಿಯ ಸಣ್ಣ ನನೆಗಳಿಂದ ಮದುವಣಿಗರಿಗೆ ಸೇಸೆಯನ್ನಿಡುತ್ತಿದ್ದರು (ಅದೇ). ಆ ಸಮಯದಲ್ಲಿ ಗಂಡು ಹೆಣ್ಣಿನ ಹೂವಿನ ಹೆಡಗೈಯ್ಯನ್ನು ಬಿಟ್ಟು ತನ್ನ ಸ್ನೇಹದ ಹೆಡಗೈಯನ್ನು ಕಟ್ಟುತ್ತಿದ್ದನು (ಅದೇ).

ತಳಿಯಲಾರ ಕುಲದ ಸಂಪ್ರದಾಯದ ಪ್ರಕಾರ ಹೆಣ್ಣು ಪ್ರಥಮ ಪುಷ್ಪಿತ (ಮೈನೆರೆ)ಳಾದ ಸಂದರ್ಭದಲ್ಲಿ "ಪುಷ್ಪಮಾಲಾಬದ್ಧ"ವೆಂಬ ಪರ್ವವನ್ನು ಏರ್ಪಡಿಸುತ್ತಿದ್ದರು. ಅದನ್ನು "ಮನ್ಮಥ ಪರ್ವ"ವೆಂದೂ ಕರೆಯಲಾಗುತ್ತಿತ್ತು. ಆ ದಿನ ಹೆಣ್ಣಿನ ಹೂವಿನ ಹೆಡಗೈಯ್ಯನ್ನು ಬಿಡುವೊಡೆ ಶಿವಬ್ರಾಹ್ಮಣನೇ ಆಗಮಿಸಬೇಕಾಗಿತ್ತು (ಅದೇ). ನಂಬಿಯಣ್ಣನ ರಗಳೆಯಲ್ಲಿ ವರ್ಣಿಸಲ್ಪಟ್ಟಿರುವ ಇಂಥ ಸಂಪ್ರದಾಯದ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ.

ಮದುವೆ ಮಂಟಪದಲ್ಲಿ ಯಾರಾದರೂ ಸೀಂತರೆ, ತುಪ್ಪದ ಕೊಡ ಒಡೆದರೆ, ಕಳಸ ಉರುಳಿದರೆ, ಘಳಿಗೆ ಬಟ್ಟಲು ಮುರಿದು ತಂಡುಲ (ಅಕ್ಕಿ) ಚೆಲ್ಲಿದರೆ ಅಪಶಕುನವೆಂದು ನಿರ್ಣಯಿಸಿ ಮದುವೆಯನ್ನು ನಿಲ್ಲಿಸಲಾಗುತ್ತಿತ್ತು. (ನಂಬಿಯಣ್ಣನ ರಗಳೆ)

ಸುಮುಹೂರ್ತ ನೋಡಿ ವಿವಾಹ ಮಂಟಪದಲ್ಲಿ ನಿಬ್ಬಣಿಗರು ಕಲೆತು ಸುಹಾಸಿನಿಯರು ಸಂಭ್ರಮದಿಂದ ವಧೂವರರ ಮಧ್ಯೆ ತೆರೆ (ಕಾಂಡ ಪರದೆ) ಹಿಡಿದು ಜೀರಿಗೆ ಬೆಲ್ಲ ಸುರಿದು ಕೈಧಾರೆ ಎರೆದು ಲಗ್ನವನ್ನು ನೆರವೇರಿಸುತ್ತಿದ್ದರು. ಕುಲಗೋತ್ರಗಳು ಹೊಂದಿದರೆ ಹೆಣ್ಣು ಕೊಡುತ್ತಿದ್ದರು (ಬಸವರಾಜ ದೇವರ ರಗಳೆ). ಕರಣಿಕ ವೃತ್ತಿಗೆ ಒಂದು ವರ್ಷಕ್ಕೆ ೧೦೧ ಹೊನ್ನು ಸಂಭಾವನೆ ನೀಡುತ್ತಿದ್ದರು (ಅದೇ). ರಾಜಭಂಡಾರವನ್ನು ಮುದ್ರಿಸಿರುತ್ತಿದ್ದರು. ಆಗಾಗ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡಲಾಗುತ್ತಿತ್ತು. ಶಿವಪೂಜೆಗೆ ಕೇದಗೆ ಹೂ ನಿಷಿದ್ಧವೆಂಬ ಭಾವನೆಯಿತ್ತು. (ಅದೇ)

ಶಿವ ಪೂಜೆಗೆ ಬಿಲ್ವ ಪತ್ರೆ, ಮಲ್ಲಿಗೆ, ಸುರಗಿ, ಮರುಗ, ಇರವಂತಿ, ಕೇತಕಿ, ಸಂಪಗೆ, ಸೇವಂತಿಗೆ, ಜಾಜಿ, ಪಡ್ಡಳಿ ಮುಂತಾದ ಪುಷ್ಪಗಳು ಶ್ರೇಷ್ಠವಾಗಿದ್ದವು (ಅದೇ). ಶರಣ ಜನಕ್ಕೆ ಬಸವಣ್ಣ ಮಾಣಿಕದ ಕರ್ಣಾವತಂಸ, ಮುತ್ತಿನಹಾರ, ಬಾಹುಪೂರ, ಕಂಕಣ, ಬೆರಳ ಮುದ್ರೆಯುಂಗುರ ಮುಂತಾದ ಆಭರಣಗಳನ್ನಿತ್ತು ಸನ್ಮಾನಿಸುತ್ತಿದ್ದರು. (ಅದೇ)

ಬದನೇಕಾಯಿಗಳನ್ನು ಲಿಂಗವೆಂದು ಕಟ್ಟಿಕೊಂಡು ಲಿಂಗವಂತರನ್ನು ಅನ್ಯಧರ್ಮಿಯಗು ಹಿಯ್ಯಾಳಿಸುತ್ತಿದ್ದರು (ಅದೇ). ಗೋವುಗಳು ಸಂಪತ್ತಿನ ಭಾಗವಾಗಿದ್ದವು. ಕೆಲವೊಮ್ಮೆ ಕಳ್ಳರು ಗೋವುಗಳನ್ನು ಅಪಹರಿಸುತ್ತಿದ್ದರು (ಅದೇ). ಸುಖೀ ಜಂಗಮರು ಇಷ್ಟಪಟ್ಟರೆ ತಮ್ಮ ಸತಿಯರನ್ನೇ ದಾನವಾಗಿ ಕೊಡುವ ಅತಿರೇಕದ ಭಕ್ತರಿದ್ದರು. (ಇಹಃಪಗೆಯಾಂಡ, ಬಸವರಾಜ ದೇವರ ರಗಳೆಗಳು)

ಜಂಗಮರ ಶಿವಪೂಜೆಗೆ ಸಂಪಿಗೆ, ಸೇವಂತಿ, ಇರುವಂತಿ, ಮಲ್ಲಿಗೆ, ಮಾಧವಿ, ಅದಿರ್ಗಂತಿ, ಜಾಜಿ, ಕೇತಕಿ, ಮುಡಿವಾಳ, ದವನ, ಕಮಲ, ನೆಯ್ದಿಲೆ, ಚೆಂಗಣೆಗೆಲೆ ಮುಂತಾದ ಹೂಗಳು ಬೇಕಾಗಿದ್ದುವು. ಹೂವಿನ ತೋಟಕ್ಕೆ ಹೋದ ಶಿವಭಕ್ತ ಅವುಗಳನ್ನು ಕುಯ್ದು ತರುತ್ತಿರಲಿಲ್ಲ, ಪ್ರತಿಯೊಂದರ ಯೋಗಕ್ಷೇಮವನ್ನು ವಿಚಾರಿಸಿ ಮೆಲ್ಲಗೆ ಪ್ರೀತಿಯಿಂದ ಎತ್ತಿ ತರುತ್ತಿದ್ದ. (ಪುಷ್ಪರಗಳೆ)



ಒಕ್ಕಲಿಗರು ಕೃಷೀಭೂಮಿಯನ್ನು ಹಸನುಮಾಡಿ ಜೋಡಿ ಎತ್ತುಗಳನ್ನು ನೇಗಿಲಿಗೆ ಹೂಡಿ ನೆಲವನ್ನು ಉತ್ತುಬಿತ್ತುತ್ತಿದ್ದರು. ಮಳೆನೀರಿಗೆ ಪೈರು ಬೆಳೆಯುತ್ತಿತ್ತು. ಕಳೆಗಳನ್ನು ಕಿತ್ತು ಹಾಕಿ ತಮಗೆ ಇಷ್ಟ ಬಂದ ಬೆಳೆಯನ್ನು ಬೆಳೆಯುತ್ತಿದ್ದರು (ಇಳೆಯಾಂಡ ಗುಡಿಮಾರರ ರಗಳೆ). ಬಡ ಬಗ್ಗರು ಪಟ್ಟಣ ಪ್ರದೇಶಗಳಲ್ಲಿ ಮೂಟೆಗಳನ್ನು ಹೊತ್ತು ಜೀವಿಸುತ್ತಿದ್ದರು (ತಿರುನಾಳ್ನೋವರ ರಗಳೆ). ಅಗಸರು ಎಲ್ಲರ ಮನೆಯಿಂದ ಮಲಿನ ವಸ್ತ್ರಗಳನ್ನು ಸಂಗ್ರಹಿಸಿ, ಉಬ್ಬೆಯಲ್ಲಿ ಕಾಯಿಸಿ, ಹೊಳೆಯಲ್ಲಿ ಒಗೆದು ಶುಚಿಗೊಳಿಸಿ ಕೊಡುತ್ತಿದ್ದರು. ಅಗಸರಿಗೆ ಹೇರು ಹೊರಲು ಕತ್ತೆ ಉಪಯುಕ್ತ ಪ್ರಾಣಿಯಾಗಿತ್ತು (ತಿರುಕುರುಂಪೆ ರಗಳೆ). ನೆಲ್ಲಕ್ಕಿಯ ಅನ್ನ, ಮಾವಿನಹಣ್ಣು, ಕೀರೆಯ ಸಾರು ಬಡವರ ಆಹಾರವಾಗಿತ್ತು (ಅರಿವಾಳ್ತಾಂಡರ ರಗಳೆ). ಜೋಳವನ್ನು 'ಶಂಕರಗಂಡ' ಎಂದು ಗೌರವದಿಂದ ಕರೆಯಲಾಗುತ್ತಿತ್ತು (ಶಂಕರ ದಾಸಿಮಯ್ಯನ ರಗಳೆ). ಬೆಸ್ತರು ಬಲೆ ಬೀಸಿದಾಗ ಮೊದಲು ಬಿದ್ದ ಮೀನನ್ನು ಮೀಸಲು ಎಂದು ಮತ್ತೆ ನೀರಿಗೆ ಬಿಡುತ್ತಿದ್ದರು (ಅತಿ ಭಕ್ತನ ರಗಳೆ).

ಬಡವರು ಊರ ದನಕರುಗಳನ್ನು ಕಾದು ಹೊಟ್ಟೆ ಹೊರೆಯುತ್ತಿದ್ದರು. ಹಸುವಿಗೆ ಒಂದು ಕೊಳಗ ಧಾನ್ಯವನ್ನು ಆಯವಾಗಿ ಕೊಡುತ್ತಿದ್ದರು. ಸುಮಾರು ನೂರು ದನಗಳನ್ನು ಒಬ್ಬನೇ ವ್ಯಕ್ತಿ ನೋಡಿಕೊಳ್ಳುತ್ತಿದ್ದ. ಚಿಕ್ಕ ಮಕ್ಕಳೂ ಸಹ ದನ ಕಾಯುವ ಪರಿಸ್ಥಿತಿ ಇತ್ತು (ಚಂಡೇಶ್ವರ ಪಿಳ್ಳೆ ರಗಳೆ). ಇರುವೆ ಅಲ ಕೋಟಿ ಜೀವರಾಶಿಯೆಲ್ಲ ಶತಮಾನಗಳ ಕಾಲ ಸುಖವಾಗಿ ಬಾಳಲಿ ಎಂದು ಜನರು ಇಷ್ಟ ದೈವವನ್ನು ಪ್ರಾರ್ಥಿಸುತ್ತಿದ್ದರು (ಮಳೆಯರಾಜನ ರಗಳೆ). ಚಿಕ್ಕ ಮಕ್ಕಳನ್ನು ಅಗಲಿ ಮಾತಾಪಿತೃಗಳು ಕಾಲವಾದಾಗ ಹಳ್ಳಿಯ ಜನ ಸಾಮೂಹಿಕವಾಗಿ ಮಕ್ಕಳ ಶೋಕದಲ್ಲಿ ಭಾಗಿಯಾಗುತ್ತಿದ್ದರು. ಹಿರಿಯರಾದವರು ಮಕ್ಕಳನ್ನು ಸಮಾಧಾನ ಮಾಡಿ ಸಾವಿನ ಅನಿವಾರ್ಯತೆಯನ್ನು ಮನಗಾಣಿಸುತ್ತಿದ್ದರು (ಓಹಿಲಯ್ಯನ ಮಹಾತ್ಮೆ). ಕೈಲಾಸ ಪದವಿ ಸಿಕ್ಕುವುದಾದರೆ ತಮ್ಮ ಊರೂರನ್ನೆಲ್ಲ ಕರೆದೊಯ್ಯಬೇಕೆಂದು ಬೇಡುವ, ಸಮಷ್ಠಿ ಒಳಿತನ್ನು ಕೋರುವ ಭಕ್ತರಿದ್ದರು (ಕರಿಕಾಲ ಚೋಳ, ಉದ್ಭಟದೇವ, ಹಲಾಯುಧ ದೇವರ ರಗಳೆಗಳು).

ಶಿವಭಕ್ತರು ಕಟ್ಟಿದ ಕೆರೆ, ಇಟ್ಟರವೆ, ಬಿತ್ತಿದ ಬೆಳೆ, ಮಾಡಿದ ಮನೆ, ಪರರ ವಸ್ತು ನೀರಂ ಕುಡಿಯದೆ, ನೆಳಲಂ ಸೇರದೆ, ಫಲವನುಣ್ಣದೆ, ಮರೆದು ಪಟ್ಟಿರದೆ, ಪರಿವ ತೊರೆಯ ನೀರ್ಗುಡಿಯುತುಂ, ಕಾಡ ಮರಂಗಳ ನೆಳಲೊಳ್ನಿಂದು

ಫಲಂಗೊಳ್ಳುತುಂ, ಹೊಡೆಹುಲ್ಲ ಭತ್ತಮನುಣುತುಂ ಮೆಳೆ - ಗುಹೆಗಳ ತಳದೊಳ್ಪಟ್ಟಿರುತುಂ ದ್ವೀಪಾಂತರಗಳಿಗೆ ೧೨ ವರ್ಷಗಳ ಕಾಲ ಹೋಗಿ ದೇವರಿಗೆ ಗುಗ್ಗುಳ (ಧೂಪ) ಸೇವೆಯನ್ನು ಮಾಡುತ್ತಿದ್ದರು (ಒಹಿಲಯ್ಯನ ರಗಳೆ). ಕಪಾಲದಲ್ಲಿ ಪಾಕವನ್ನು ತಯಾರಿಸುವ, ಕೆರದಿಂದ ಅದರ ಬಾಯಿ ಮುಚ್ಚುವ ತಾಂತ್ರಿಕ ಪಂಡಿತರಿದ್ದರು (ಸಾಮವೇದಿಗಳ ಮಹಾತ್ಮೆ). ಶಿವಭಕ್ತರು ಭವಿಗಳೊಂದಿಗೆ ಸಂಭಾಷಿಸುವಾಗ ತೃಣವನ್ನು ಮಧ್ಯೆ ಇಟ್ಟುಕೊಳ್ಳುತ್ತಿದ್ದರು (ಅದೇ). ರಾವಣನೊಂದಿಗೆ ಸಂಭಾಷಿಸುವಾಗ ಸೀತಾದೇವಿ ಹೀಗೆ ಮಾಡುತ್ತಿದ್ದಳಂತೆ. ತಾಮಸ ವ್ಯಕ್ತಿಗಳೊಂದಿಗೆ ಸಾತ್ವಿಕ ವ್ಯಕ್ತಿಗಳ ಸಂಪರ್ಕ ಸಲ್ಲ ಎಂಬುದು ಇದರ ತಾತ್ಪರ್ಯವಿರಬಹುದು.

ವಿಪ್ರ ಜಾತಿ ಚಾಂಡಲನೆಂದೂ, ಬೇಡ ಕರ್ಮಚಾಂಡಾಲನೆಂದೂ ಪರಿಗಣಿಸಲಾಗಿತ್ತು (ಅದೇ). ಕೆಯ್ಯಗುಂಡಿಗೆ, ಮೋಟುಕುಂಚ, ಹರಿದ ತಟ್ಟು, ಮೆಯ್ಯಮಲಂ, ಹರಿದ ತಲೆಕಟ್ಟು, ಜುಂಜುದಲೆ, ಹಡಿಕೆವಾಯ್, ಹಗೆಹಲ್ಲುಗಳ ಮೋರೆ, ಹೊಲಸುನಾರುವ ಮೈಯಿಂದ ಕೂಡಿದ್ದ ಜೈನಯತಿಗಳನ್ನು ಜನ ಪರಿಹಾಸ್ಯ ಮಾಡುತ್ತಿದ್ದರು (ಏಕಾಂತ ರಾಮಿತಂದೆ ರಗಳೆ). ಪ್ರಭಾವಿ ಶಿವ ಭಕ್ತರು ಊರೂರು ಸುತ್ತುತ್ತ ತಟಾಕಗಳನ್ನು ನಿರ್ಮಿಸುವ, ಶಿವಪುರಗಳನ್ನು ಕಟ್ಟುವ, ಛತ್ರಗಳನ್ನು ತೆರೆಯಿಸುವ ಪುಣ್ಯ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದರು (ರೇವಣ ಸಿದ್ಧೇಶ್ವರ ರಗಳೆ). ಮಕ್ಕಳು ಹುಟ್ಟಿದ ಮುಹೂರ್ತದ ಮೇಲೆ ತಂದೆ ತಾಯಿಗಳಿಗೆ ಬಡತನ ಸಿರಿತನ ಬರುವುದೆಂದು ಜನ ನಂಬುತ್ತಿದ್ದರು (ಚಂಡೇಶ್ವರ ಪಿಳ್ಳೆ ರಗಳೆ). ಯುದ್ಧದಲ್ಲಿ ಗಜ, ತುರಗ, ರಥ, ಪದಾತಿಯೊಡ್ಡುಗಳು ನೆರೆಯುತ್ತಿದ್ದವು. ನಿಸ್ಸಾಳ, ತಂಬಟ, ಭೇರಿ, ಕಹಳೆ, ಲೆತ್ತರಿ, ಶಂಖ, ಜವಳಿಕಹಳೆ, ಕಿನ್ನರಿ ಮುಂತಾದ ಯುದ್ಧ ವಾದ್ಯಗಳಿದ್ದವು (ಇಹಃಪಗೆಯಾಂಡರ ರಗಳೆ).

### ಪವಾಡಗಳು

ಸಾಮಾನ್ಯರ ಬುದ್ಧಿಗೆ ಎಟುಕದ ಲೋಕ ಸತ್ಯಗಳನ್ನು ಪವಾಡಗಳ ಮೂಲಕ ಕಾವ್ಯಲೋಕ ಪ್ರಕಟಿಸುವುದುಂಟು. ಅಘಟಿತ ಘಟನೆಗಳು ಸಂಭವಿಸಿದರೆ ಪವಾಡವೆಂದು ಕರೆಯಲಾಗುತ್ತದೆ. ಭಾವಸತ್ಯಕ್ಕೆ ಒಡ್ಡಿದ ಪ್ರತಿಮೆಗಳು ಈ ಪವಾಡಗಳು. ಹರಿಹರನ ರಗಳೆಗಳಲ್ಲಿ ಇಂಥ ಅನೇಕ ಪವಾಡಗಳ ಉಲ್ಲೇಖ ಉಂಟು. ಬಸವಣ್ಣನ ಮಹಿಮೆಯನ್ನು ಕೊಂಡಾಡಲು ಅನೇಕ ಪವಾಡಗಳನ್ನು



ಬಳಸಿಕೊಳ್ಳಲಾಗಿದೆ. ನಂದಿಯ ಬಾಯಿಂದ ಶಿವಲಿಂಗ ಮೂಡಿಬರುತ್ತದೆ; ಬಸವಣ್ಣ ನಿಷಿದ್ಧ ಪುಷ್ಪ ಕೇದಿಗೆಯನ್ನು ಶಿವಲಿಂಗಕ್ಕೆ ಅರ್ಪಿಸಲು, ಎಲ್ಲ ಶಿವಭಕ್ತರ ಶಿವ ಲಿಂಗದ ಮೇಲೆ ಅವು ಕಾಣಿಸಿಕೊಂಡವು; ಕಪಟ ಭಕ್ತರು ಕಟ್ಟಿಕೊಂಡಿದ್ದ ಬದನೆಕಾಯಿಗಳೆಲ್ಲ ಶಿವಲಿಂಗಗಳಾಗಿ ಪರಿವರ್ತನೆಗೊಂಡವು; ಜಂಗಮರ ಹಿಂದೆ ಹೋದ ಬಸವನ ಪ್ರಾಣ ಅವರು ಹಿಂದಿರುಗಲು ಮತ್ತೆ ದೇಹಕ್ಕೆ ಬಂದಿತು; ಭಕ್ತರ ಮೈಯಲ್ಲಿ ಹಾಲು ಹರಿಯುವುದು; ಮಹದೇವಿಸೆಟ್ಟಿ ಮುತ್ತು ರತ್ನ ಮಾಣಿಕ್ಯದ ಏರುಗಳು ಬೇಕೆಂದು ಬೇಡಲು ಬಂದು ಕಡಲೆ, ತೊಗರಿ, ಜೋಳದ ಏರುಗಳನ್ನು ಬೇಡುವುದು; ಹೀಗೆ ಹಲವಾರು ಪವಾಡಗಳನ್ನು ವಿಚಾರವಂತನಾದ ಬಸವಣ್ಣನಿಗೆ ಲಗತ್ತಿಸಿದ ಕವಿ ಜನಪದರ ಶ್ರದ್ಧಾ ನಂಬಿಕೆಗಳನ್ನು ತನ್ನ ಕಾವ್ಯ ಲೋಕದಲ್ಲಿ ಸಮರ್ಥವಾಗಿ ದುಡಿಸಿಕೊಳ್ಳುತ್ತಾನೆ. "ಹರಿಹರನಿಗೆ ಮುಖ್ಯವಾಗಿ ಬೇಕಾಗಿದ್ದ ವಿಷಯಗಳು ಬಸವಣ್ಣನ ಗುರುಲಿಂಗ ಜಂಗಮಾರಾಧನೆ ಮತ್ತು (ಪ್ರತ್ಯಕ್ಷ ಪವಾಡ) ಮಹಾತ್ಮೆಗಳು. ಧಾರ್ಮಿಕ ಮಹಾಪುರುಷರ ಜೀವನದಲ್ಲಿ ಅದ್ಭುತ ಕಾರ್ಯಗಳು ನಡೆಯುವುದೇ ಆ ಜೀವನದ ಒಂದು ಮುಖ್ಯ ಲಕ್ಷಣವೆಂದು ನಮ್ಮ ಜನಗಳ ಸಂಪ್ರದಾಯವಾಗಿರುವುದರಿಂದ ಹರಿಹರನು ಈ ದೃಷ್ಟಿಯಿಂದಲೇ ಬಸವಣ್ಣನ ಜೀವನವನ್ನು ನೋಡಿರಬೇಕು" (ಬಸವ ರಾಜದೇವರ ರಗಳೆ - ಪೀಠಿಕೆ). ಇದೇ ಮಾತನ್ನು ರೇವಣಸಿದ್ಧೇಶ್ವರ, ಆದಯ್ಯ, ಏಕಾಂತ ರಾಮಿತಂದೆ, ಶಂಕರ ದಾಸಿಮಯ್ಯ ಮುಂತಾದ ರಗಳೆಯ ನಾಯಕರ ಬಗ್ಗೆಯೂ ಹೇಳಬಹುದು. ಹರಿಹರ ತನ್ನ ಕಾವ್ಯ ನಾಯಕರ ಅಲೌಕಿಕ ಕಾರ್ಯಗಳನ್ನು ಅದ್ಭುತ ಮಹಿಮೆಗಳನ್ನು ಮೇಲಿಂದ ಮೇಲೆ ಘೋಷಿಸಿದರೂ ಅವರ ಸರಳವಾದ ಮುಗ್ಧ ಮಾನವ ಹೃದಯವನ್ನು ಮಾತ್ರ ಎಲ್ಲಿಯೂ ಮರೆಮಾಡುವುದಿಲ್ಲ.

ಮಧ್ಯಯುಗದಲ್ಲಿ ಮತೀಯ ಕಲಹಗಳು (ಕ್ರುಸೇಡ್ಸ್) ಸರ್ವೇ-ಸಾಮಾನ್ಯವಾಗಿದ್ದವು. ಏಕಾಂತ ರಾಮಿತಂದೆಗಳ ರಗಳೆ ಪ್ರಕಾರ ಶಿವಭಕ್ತರಿಗೂ ಜಿನಭಕ್ತರಿಗೂ ಕಾಳಗ ನಡೆಯುತ್ತದೆ. ಏಕಾಂತರಾಮಯ್ಯ ೧೦೦೦ ಜಿನ ಪ್ರತಿಮೆಗಳನ್ನು ಭಂಗಿಸುವ ಭಾಷೆಯನ್ನು ಕೈಗೊಳ್ಳುತ್ತಾನೆ. ಅಬ್ಬಲೂರಿನ ಶಾಸನವು ಕೂಡ ಈತನು ಜಿನ ಪ್ರತಿಮೆಗಳನ್ನು ನಾಶ ಮಾಡಿ ಬಸದಿಗಳಲ್ಲಿ ಶಿವಲಿಂಗ ಪ್ರತಿಷ್ಠಾಪನೆ ಮಾಡಿಸಿದನೆಂದು ಸಮರ್ಥಿಸುತ್ತದೆ. ಪರವಾದಿಗಳನ್ನು ಖಂಡಿಸಿ, ಸ್ವದೈವದ ಪಾರಮ್ಯವನ್ನು ಪ್ರತಿಷ್ಠಾಪಿಸುವಾಗ ಎಂತಹ ತ್ಯಾಗ ಬಲಿದಾನಗಳಿಗೂ

ವ್ಯಕ್ತಿ ಸಿದ್ಧನಾಗಿರಬೇಕೆಂಬುದು ಹರಿಹರ ನಂಬಿದ ನೀತಿ. ಆದಯ್ಯನು ಸೌರಾಷ್ಟ್ರದಿಂದ ಸೋಮನಾಥನನ್ನು ಕರೆತಂದು, ೩೦೦೦೦ ಜನ ಸವಣರನ್ನು ಕೊಂದು, ಪುಲಿಗೆರೆಯ ಜೈನ ಬಸದಿಗಳನ್ನು ಕೆಡವಿ, ಸೋಮೇಶ್ವರನನ್ನು ನೆಲೆಗೊಳಿಸಿದನು. ಮತೀಯ ಕಲಹಗಳನ್ನು ಹರಿಹರನ ರಗಳೆಗಳು ದಾಖಲಿಸಿವೆ. ಹೀಗೆ ವಸ್ತುನಿಷ್ಠವಾಗಿ ಸಾಮಾಜಿಕ ಧಾರ್ಮಿಕ ವಿಚಾರಗಳನ್ನು ಪ್ರತಿಪಾದಿಸುವ ಹರಿಹರ ಮೇಲುನೋಟಕ್ಕೆ ವೀರಶೈವ ಮತದ ಮೂಲಭೂತವಾದಿಯಂತೆ ಕಂಡು ಬಂದರೂ ಅಂದಿನ ಧಾರ್ಮಿಕ ಕಲಹಗಳಿಗೆ ಕಿರುಕಿಂಡಿಗಳನ್ನು ತನ್ನ ರಗಳೆಗಳಲ್ಲಿ ತೆರೆದಿಟ್ಟು ಹೋಗಿದ್ದಾನೆ.

ಹಾಗಾದರೆ ಹರಿಹರ ಕವಿಯ ಸಂದೇಶವೇನು? ಅವನು ಪ್ರತಿಪಾದಿಸಿದ ತತ್ವಗಳಾವುವು? ಮುಂತಾದ ವಿಷಯಗಳು ವಿಚಾರಣೀಯ. ಶಾಸ್ತ್ರ ನಿಚಯಗಳನ್ನು ಓದಿ, ವಿಧಿವಿಧಾನಗಳಿಂದ ಅರ್ಚಿಸುವ ಆಡಂಬರದ ಪೂಜೆಗೆ ಶಿವನು ಒಲಿಯುವುದಿಲ್ಲ; ಅವನು ಬಯಸುವುದು ಮನಃಪೂರ್ವಕ ಭಕ್ತಿಯನ್ನು ಮಾತ್ರ. ಅಂಥ ಸಾಧಕನು ಅಜ್ಞಾನದಿಂದ ಹಿಂಸೆಯನ್ನು ಮಾಡಿದರೂ ಅದು ಪಾಪವಲ್ಲ. ಏಕೆಂದರೆ ಅದು ಅರಿಯದೆ ಮಾಡಿದ ಪಾಪ. ಈ ತತ್ವ ಪ್ರತಿಪಾದನೆಗೆ ಬೇಡರ ಕಣ್ಣಪ್ಪನ ಕಥೆ ಉತ್ತಮ ಉದಾಹರಣೆ. ಶಿವಬ್ರಾಹ್ಮಣ ತಿಳಿದೂ ತಿಳಿದು ಹಿಂಸೆ ಮಾಡುವನಾದ ಕಾರಣ ಅವನಿಗೆ ಮುಕ್ತಿಯಿಲ್ಲ. ಇದು ಹರಿಹರನ ಮಾರ್ಪಾಟಿನ ಉದ್ದೇಶ. ಮುಗ್ಧ ಭಕ್ತಿಗೆ ಶಿವನು ಬೇಗ ಒಲಿಯುತ್ತಾನೆ. ಕಣ್ಣಪ್ಪ, ರುದ್ರ ಪಶುಪತಿ, ಕೋಳೂರು ಕೊಡಗೂಸು ಇವರೆಲ್ಲರು ಇಂಥ ಮುಗ್ಧ ಭಕ್ತರು.

ಹರಿಹರ ಗುಪ್ತಭಕ್ತಿಪ್ರಿಯ. ಶಿವನಿಗೆ ಮಾಡಿದ್ದನ್ನು ಆಡಿಕೊಳ್ಳುವುದಾಗಲಿ, ತಾನು ಮಾಡಿದ ಭಕ್ತಿ ಪರರ ಕಣ್ಣಿಗೆ ಬೀಳುವುದಾಗಲಿ ಅವನ ಗುಪ್ತ ಭಕ್ತರಿಗೆ ಹಿಡಿಸುವುದಿಲ್ಲ. ಗುಪ್ತ ಭಕ್ತಿ ಯಾವ ಕಾರಣಕ್ಕೂ ಬಹಿರಂಗವಾಗಬಾರದು. ಅದು ಪ್ರಕಟವಾಗಲು ಶಿವನೇ ಕಾರಣನಾದರೂ ಅವನನ್ನು ಪ್ರತಿಭಟಿಸುವ ಎದೆಗಾರಿಕೆ ಗುಪ್ತ ಭಕ್ತರಲ್ಲಿರುತ್ತದೆ. ಅದಕ್ಕಾಗಿ ಪ್ರಾಣವನ್ನು ಫಣವಾಗಿಟ್ಟು ಹೋರಾಡುವ ಛಲಗಾರರು ಅವರು. ಮಾದಾರ ಚೆನ್ನಯ್ಯ, ತಿರುನೀಲಕಂಠ, ಕಾರಿಕಾಲಮ್ಮೆ ವೈಜಕ್ಕವ್ವೆ ಮುಂತಾದವರು ಗುಪ್ತಭಕ್ತಿಯನ್ನು ಆಚರಿಸಿದ ವಿರಳ ಭಕ್ತರು.

ಕಾವ್ಯದ ವಸ್ತು ರೀತಿ ರಸ ಮುಂತಾಗಿ ಪ್ರತಿಯೊಂದರಲ್ಲೂ ಹೊಸತನವನ್ನು ಮೆರೆದ ಕವಿ ಹರಿಹರ. ರಾಜ ಮಹಾರಾಜರ ಕಥಾವಸ್ತುವನ್ನು ಕಡೆಗಣಿಸಿ ಸಾಮಾನ್ಯ



ಶಿವ ಭಕ್ತರ ಕಥೆಗಳನ್ನು ಆರಿಸಿಕೊಂಡ. ಪುರಾತನ ಹಾಗೂ ಸಮಕಾಲೀನ ಭಕ್ತರನ್ನು ಪುರಾಣ ವ್ಯಕ್ತಿಗಳನ್ನಾಗಿ ಪರಿವರ್ತಿಸಿದ. ಜನಪದ ಕಥನ ಕಲೆಗೆ ಹೊಂದುವ ರಗಳೆ ಎಂಬ ಛಂದಸ್ಸನ್ನು ಬಳಸಿ, ಅದನ್ನು ಊರ್ಜಿತಗೊಳಿಸಿ, ಅದರ ಸಾಧ್ಯತೆಗಳನ್ನು ಸೂರೆಗೊಂಡ. ಡಿ.ಎಲ್.ಎನ್ ಅವರು ಹೇಳಿರುವಂತೆ ರಗಳೆಗಳು ಅವನ ಚಿತ್ತವೃತ್ತಿಯ ವರ್ಣಚಿತ್ರಗಳು. ಸುಮಾರು ೧೨೦ ರಗಳೆಗಳನ್ನು ಬರೆದಿರುವ ಹರಿಹರ ದೊಡ್ಡ ರಗಳೆಗಳನ್ನು ಪದ್ಯಸ್ಥಲ, ಗದ್ಯಸ್ಥಲ ಎಂದು ವಿಂಗಡಿಸಿದ್ದಾನೆ. ರಗಳೆಯ ಛಂದದಲ್ಲಿ ಜಾನಪದ ಗದ್ಯದ ಲಯಗಾರಿಕೆ, ಪ್ರಾಸಾನುಪ್ರಾಸ, ಒಳ ಪ್ರಾಸಗಳ ಬಳಕೆ ಸಲೀಸಾಗಿ ಜರುಗುತ್ತದೆ. ಗದ್ಯಪದ್ಯದ ಸ್ಥಲ ವಿಂಗಡಣೆಯಿಂದ ಏಕತಾನತೆಯ ಬೇಸರ ಬರುವುದಿಲ್ಲ. ಹರಿಹರನ ಗದ್ಯವಂತೂ ಆಡುಮಾತಿನ ಸಂವಾದ ರೂಪದಲ್ಲಿದ್ದು ಚೇತೋಹಾರಿಯಾಗಿದೆ.

ಹರಿಹರನ ರಗಳೆಗಳು ಜಾನಪದ ಕಥಾಲಕ್ಷಣಗಳನ್ನೊಳಗೊಂಡಿವೆ. ಈ ರಗಳೆಗಳ ನಾಯಕರು ಗ್ರಾಮಾಂತರ ಪ್ರದೇಶದ ದುಡಿಯುವ ಮಂದಿ. ಅವರು ಮತ್ತು ಅವರ ಸಹಾಯಕರು ಅನೇಕ ಪವಾಡಗಳನ್ನು ಮೆರೆಯುವರು. ಇವರಲ್ಲಿ ಅತಿಮಾನುಷ ಶಕ್ತಿ ಸಂಗ್ರಹವಾಗಿರುತ್ತದೆ. ಹೀಗಾಗಿ ಡಾ.ಕೆ. ರಂಗಾರೆಡ್ಡಿಯವರು ಹೇಳುವಂತೆ ಹರಿಹರನ ರಗಳೆಗಳಲ್ಲಿ ದೇಸಿಯ ಬಳಕೆಯಿದ್ದರೂ ಕಾವ್ಯದ ಒಳಗೂ ಜನಪದ ಆಶಯಗಳೇ ತುಂಬಿಕೊಂಡಿವೆ (ಶಿಷ್ಟ ಸಾಹಿತ್ಯದಲ್ಲಿ ಜಾನಪದ ಕರ್ನಾಟಕ ಸಾಹಿತ್ಯ ಅಕಾಡೆಮಿ). ರೇವಣಸಿದ್ಧೇಶ್ವರ ರಗಳೆ, ಆದಯ್ಯನ ರಗಳೆ, ಶಂಕರ ದಾಸಿಮಯ್ಯನ ರಗಳೆ, ಬಸವರಾಜ ದೇವರ ರಗಳೆ ಮುಂತಾದುವುಗಳಲ್ಲಿ ಅನೇಕ ಪವಾಡಗಳಿವೆ. ಇದರಿಂದ ವ್ಯಕ್ತವಾಗುವ ಅಂಶವೆಂದರೆ ಇವರು ಅಸಾಮಾನ್ಯ ವ್ಯಕ್ತಿಗಳೆಂಬುದನ್ನು ಸಮರ್ಥಿಸುವುದಷ್ಟೆ. ಬಸವಣ್ಣ ಮೆರೆಯುವ ಆರೆಂಟು ಪವಾಡಗಳು ಆತನು ಐತಿಹಾಸಿಕ ವ್ಯಕ್ತಿ ಎಂಬುದನ್ನೇ ಮರೆಸಿ ಜನಪದದತ್ತ ಮುಖಿಯಾಗಿಸಿವೆ. ವೀರಶೈವ ಮತವನ್ನು ಒಲಿಯುವ ಸಾಮಾನ್ಯ ಜನಕ್ಕೆ ಇಂಥ ಪವಾಡಗಳು ಬೇಕು ಎಂಬುದನ್ನು ಹರಿಹರ ಬಲ್ಲ. ಇವು ಜನಪದ ಮಾಂತ್ರಿಕ ಕಥೆಗಳ ಸತ್ವವನ್ನು ಒಳಗೊಂಡಿವೆ. ಹೀಗೆ ಬಸವರಾಜರಗಳೆ ಮುಂತಾದುವುಗಳ ಕಥನಕ್ರಮ, ಪವಾಡಗಳ ಸೃಷ್ಟಿ ಎಲ್ಲವೂ ಜನಪದ ಕತೆಗಳ ಆಶಯವನ್ನೇ ಹೊಂದಿವೆ. ಈ ಕಥಾನಾಯಕರ ಐತಿಹಾಸಿಕ ವಿಚಾರಗಳತ್ತ ಕವಿಗೆ ಅಷ್ಟು ಗಮನವೇಇಲ್ಲ. ಹರಿಹರನ ಕಥಾ ನಾಯಕರು ಸಾಮಾನ್ಯವಾಗಿ ಸಮಾಜದ ಕೆಳಸ್ತರದ, ವಿವಿಧ

ವೃತ್ತಿಯ ಜನರೇ ಆಗಿದ್ದಾರೆ. ಜನಪದ ಕಥೆಗಳಲ್ಲಿ ಇಂಥವರೇ ಹೆಚ್ಚು ಸಾಹಸಗಳನ್ನು ಅದ್ಭುತಗಳನ್ನು ಮೆರೆಯುವವರು. ಇಂಥ ನಾಯಕರ ಅಂತರಂಗದ ಭಕ್ತಿಗೂ ಬಹಿರಂಗದ ಅವರ ಕಾಯಕಕ್ಕೂ ಅದ್ವೈತ ಸಂಬಂಧವಿರುತ್ತದೆ. ಜನಪದ ಸಾಹಿತ್ಯದಲ್ಲಿ ಇಂಥ ಅವಿನಾಸಂಬಂಧ ಕಂಡುಬರುತ್ತದೆ. ಕುಂಬಾರ ಗುಂಡಯ್ಯನ ಕುಂಬಾರಿಕೆ, ಇಳೆಯಾಂಡಗುಡಿಮಾರನ ಒಕ್ಕಲುತನ, ತಿರುಕುರುಂಪೆಯ ಮಡಿವಾಳಿಕೆ ಮುಂತಾದುವುಗಳ ಚಿತ್ರಣವನ್ನು ಇಲ್ಲಿ ಉದಾಹರಿಸಿ ನೋಡಬಹುದು.

ಜಾನಪದ ಲೋಕದ ಪವಾಡಗಳಿಂದ ಇಡಿಕಿರಿದಿರುವ ರೇವಣಸಿದ್ಧೇಶ್ವರ ರಗಳೆಯ ಒಂದು ನಿದರ್ಶನವನ್ನು ಇಲ್ಲಿ ಉದಾಹರಿಸಬಹುದು: **ನದಿಯ ನಡುವಣ ಸುರಗಿಯ ಕಥೆ:**

ರೇವಣಸಿದ್ಧನು ದೇಶ ಸಂಚಾರ ಮಾಡುತ್ತ ಮಾಸೂರು ಎಂಬ ಒಂದು ಊರಿಗೆ ಬರುತ್ತಾನೆ. ಅಲ್ಲಿ ರಾತ್ರಿ ಶಿವ ದೇವಾಲಯದಲ್ಲಿ ತಂಗುತ್ತಾನೆ. ಆ ದೇವಾಲಯದ ಎದುರಿನ ಆಲದ ಮರದಲ್ಲಿ ಸುರದಂಪತಿಗಳು ಶಾಪನಿಮಿತ್ತ ತಿಗಣೆಯಾಕಾರದಲ್ಲಿ ವಾಸವಾಗಿದ್ದು ರಾತ್ರಿ ತಾವು ವಾಸ ಮಾಡುತ್ತಿದ್ದ ಆ ಮರದಿಂದ ಇಳಿದು ಬಂದು ಮಲಗಿದವರನ್ನು ಕಚ್ಚಿ ರಕ್ತ ಹೀರುತ್ತಿದ್ದವು. ಅಂದು ರೇವಣ ಸಿದ್ಧನನ್ನು ಇವು ಕಚ್ಚಲು ಬರುತ್ತವೆ. ಆದರೆ ಅವನು ತನ್ನ ಹಣೆಗಣ್ಣನ್ನು ತೆರೆದು ಅವುಗಳನ್ನು ಸುಟ್ಟುಬಿಡುತ್ತಾನೆ. ಸುಟ್ಟ ಅವು ಎರಡು ಉಕ್ಕಿನ ಗುಂಡುಗಳಾದವು. ಅವುಗಳಲ್ಲಿ ಒಂದನ್ನು ಕಮ್ಮಾರನ ಕೈಗೆ ಕೊಟ್ಟು ಒಂದು ಕತ್ತಿಮಾಡಿಸಿದನು. ಆದರೆ ಅದು ಹಲ್ಲು ಮೊರೆಯುತ್ತ ಗರ್ಜಿಸಿ ಹೆದರಿಸಲು ಕಮ್ಮಾರ ಅದನ್ನು ಹಿಡಿದುಕೊಳ್ಳಲಾರದೆ ರೇವಣ ಸಿದ್ಧೇಶ್ವರನಿಗೆ ಒಪ್ಪಿಸಿದನು. ಸಿದ್ಧನು ಆ ಕತ್ತಿಯನ್ನು ತೆಗೆದುಕೊಂಡು ಹೋಗಿ ಮಾಸೂರಿನ ಮುಂದೆ ಹರಿಯುವ ನದಿಯ ಒಂದು ದೊಡ್ಡ ಮಡುವಿನಲ್ಲಿ ಮೊನೆ ಕೆಳಗಾಗಿ ನಟ್ಟು ಎಲ್ಲಿಯೂ ಚಲಿಸದಿರುವಂತೆ ನೇಮಿಸಿ ಹೊರಟು ಹೋಗುವನು.

ಕೆಲವು ಕಾಲಾನಂತರ ಮಂಗಳವಾಡದ ದೊರೆ ಬಿಜ್ಜಳನಿಗೆ ಈ ಕತ್ತಿಯ ವಿಷಯ ತಿಳಿದು ಅದನ್ನು ವಶಪಡಿಸಿಕೊಳ್ಳಲು ಇಚ್ಛಿಸುವನು. ಆಗ ಖರ್ಪರ ಸಿದ್ಧನೆಂಬ ತಾಂತ್ರಿಕನೊಬ್ಬನು ಬಂದು ೧೨ ಸಾವಿರ ಕನ್ನಿಕೆಯರನ್ನು ಬಲಿಗೊಟ್ಟರೆ ಅದನ್ನು ವಶಪಡಿಸಿಕೊಡುತ್ತೇನೆ ಎನ್ನುವನು. ದೇಶಾದ್ಯಂತ ೧೨ ಸಾವಿರ ಕನ್ನೆಯರನ್ನು



ಹುಡುಕಿ ಕೂಡಿಸುವಾಗ ಒಬ್ಬಳು ಕಡಿಮೆಯಾದಳು. ಅದಕ್ಕಾಗಿ ಮಂಗಳವಾಡದ ವೇಶ್ಯೆಯ ಮಗಳಾದ ಮಾಯಿದೇವಿಯನ್ನು ಹಿಡಿದು ತರಲು ಆಜ್ಞೆಯಾಯಿತು. ಆದರೆ ಆ ವೇಶ್ಯೆಯು ತನ್ನ ಮಗಳನ್ನು ಉಳಿಸಿಕೊಡಬೇಕೆಂದು ಕಾಶಿಯಲ್ಲಿದ್ದ ರೇವಣಸಿದ್ಧನನ್ನು ಸ್ಮರಿಸಲು, ಆತ ಪ್ರತ್ಯಕ್ಷನಾಗಿ, ಇಷ್ಟು ಜನ ಬಲಿ ಏಕೆ? ಕತ್ತಿ ನಿನಗೆ ಬೇಕಾದರೆ ನಾನೇ ಎತ್ತಿಕೊಡುತ್ತೇನೆ ಎಂದು ದೊರೆಗೆ ಹೇಳುವನು. ಅದೇ ಪ್ರಕಾರ ಮಾಸೂರಿನ ಹಳ್ಳದ ಬಳಿಗೆ ಹೋಗಿ ಆ ಕತ್ತಿಯನ್ನು ಕಿತ್ತು ರಾಜನಿಗೆ ಕೊಡುವನು. ಆದರೆ ಅದು ಐದೆಡೆಯ ಸರ್ಪವಾಗಿ ಬುಸ್ಸೆನ್ನಲು ರಾಜ ಹೆದರುವನು. ಅಲ್ಲಿಗೆ ಶಾಪ ಮುಕ್ತನಾಗಿ ಕತ್ತಿಯ ರೂಪದಲ್ಲಿದ್ದ ಯಕ್ಷ ನಿಜರೂಪವನ್ನು ತಾಳಿ ಅಲ್ಲಿಂದ ಹೊರಟು ಹೋಗುವನು. ಜನಪದರಿಗೆ ಇಂಥ ಕಥೆಗಳು ಅಚ್ಚು ಮೆಚ್ಚು ಎಂದು ಬೇರೆ ಹೇಳಬೇಕಾಗಿಲ್ಲ.

ತಮಿಳಿನ 'ಶೆಕ್ಕಿಟಾರ್' ಕವಿಯ ಪೆರಿಯಪುರಾಣದ ಪ್ರಭಾವ ಹರಿಹರನ ಮೇಲೆ ಆಗಿದೆಯೆಂದು ವಿದ್ವಾಂಸರ ಅಭಿಮತ. ಆತ ತಮಿಳು ನಾಡಿನಲ್ಲಿ ಸುತ್ತಾಡಿದ್ದು ತಮಿಳು ಭಾಷೆಯ ಪರಿಚಯವನ್ನೂ ಕೊಂಚ ಬಲ್ಲವನಾಗಿರಬೇಕು. ಕಾವೇರಿ ಜಲಾನಯನ ಪ್ರದೇಶದ ಪುರಾತನ ಊರುಗಳ, ವ್ಯಕ್ತಿಗಳ ಹೆಸರುಗಳು ರಗಳೆಗಳಲ್ಲಿ ಕಂಡು ಬರುತ್ತವೆ. ಆ ನಾಡಿನ ಆಚಾರವಿಚಾರ, ನೀತಿ ನಡಾವಳಿ ಮುಂತಾದ ಸಂಸ್ಕೃತಿ ಚಿತ್ರಗಳು ಅವನ ಕಾವ್ಯದಲ್ಲಿ ಚೆಲ್ಲುವರಿದಿದೆ. ಹರಿಹರನ ರಗಳೆಗಳಲ್ಲಿ ಭಕ್ತಿ ಹಾಗೂ ಶೃಂಗಾರಗಳ ಸಾಮರಸ್ಯವಿದೆ. ಈ ಕವಿಯ ನಂಬಿಯಣ್ಣನ ರಗಳೆಯನ್ನು ಓದಿ ಕೇಳಿದ ದೂರಾಂತರದೇಶದ ವಿಲಾಸಿನಿಯೊಬ್ಬಳು ಕವಿಯನ್ನು ಮೋಹಿಸಿ ಬಂದಳೆಂಬ ಐತಿಹ್ಯ ನಿಜವೇ ಇರಬೇಕು!

* * * *

ಹರಿಹರನ 'ಗಿರಿಜಾ ಕಲ್ಯಾಣ'ದಲ್ಲಿ ಚಿತ್ರಿತವಾಗಿರುವ ಜನಜೀವನದ ಬಗ್ಗೆಯೂ ಇಲ್ಲಿಯೇ ಒಂದೆರಡು ಮಾತನ್ನು ಹೇಳಬಹುದಾಗಿದೆ. ಪತಿ ಮರಣ ಹೊಂದಿದರೆ ಸತಿ 'ಸಹಗಮನ' ಹೋಗುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಪುರುಷ ಲೋಕದ ಈ ನಿಯಮವನ್ನು ಮುರಿದು ಮತ್ತೊಬ್ಬ ಹೆಣ್ಣು ಸಹೃದಯತೆಯಿಂದ ಸತಿ ಹೋಗುವ ಹೆಣ್ಣನ್ನು ತಡೆಯುವುದೂ ಇತ್ತು. ಮದುವೆಯ ಸಂದರ್ಭದಲ್ಲಿ ವಧೂ ವರರ ಮೇಲೆ ಜೀರಿಗೆ ಬೆಲ್ಲ ಸುರಿಯುವ ಸಂಪ್ರದಾಯವಿತ್ತು. ಗಿರಿಜಾಕಲ್ಯಾಣದಲ್ಲಿ ವರ್ಣಿತವಾಗಿರುವ ಅರವಟ್ಟಿಗೆ ಚಿತ್ರವಂತೂ

ಮನೋಜ್ಞವಾಗಿದೆ. ಪಥಿಕನೊಬ್ಬನಿಗೆ ತರುಣಿಯೋರ್ವಳು ಬಾಯಾರಿಕೆಗೆ ನೀರರೆಯುತ್ತಿದ್ದಾಳೆ. ಜಲಪಾನ ಮಾಡುತ್ತಿರುವ ಆ ರಸಿಕ ಆಕೆಯ ಲಾವಣ್ಯವನ್ನೇ ಮನಂಬುಗುವಂತೆ ನೋಡುತ್ತ ಮೈಮರೆತಿದ್ದಾನೆ. ತಂಬಿಗೆಯ ನೀರು ಬರಿದಾದರೂ, ಅವನ ಬಾಯಾರಿಕೆ ತೀರಿದ್ದರೂ, ಅವಳತ್ತ ನೋಡುವ ಅವನ ಆಸೆ ತೀರದೆ, ಅವನು ಇದ್ದಂತೆಯೇ ಮರವಟ್ಟಿದ್ದಾನಂತೆ.

(ಗಿರಿಜಾ ಕಲ್ಯಾಣ ೨-೩೪)

ಹಿಮವತ್ ಪರ್ವತದ ತಪ್ಪಲು ಪ್ರದೇಶದಲ್ಲಿ ಗಿರಿಜಾಕಲ್ಯಾಣದ ಕಥೆ ಸಂಭವಿಸಿದೆಯೆಂದು ಕಲ್ಪಿತವಿದ್ದರೂ ಹರಿಹರ ಅದನ್ನು ಕರ್ನಾಟಕದ ನೆಲದಲ್ಲಿಯೇ ಸಂಭವಿಸಿರುವಂತೆ ಕಸಿಗೊಳಿಸುತ್ತಾನೆ. ಕರ್ನಾಟಕದ ಋತುಮಾನಗಳು, ನದಿನದ ಪ್ರದೇಶಗಳ, ಊರು ಕೇರಿ ಜನರ ಬದುಕಿನ ವಾಸ್ತವ ಚಿತ್ರಗಳು ಇಲ್ಲಿ ಕಂಡುಬರುತ್ತವೆ. ಪಾರ್ವತಿ ಪರಮೇಶ್ವರರು ಕರ್ನಾಟಕದ ಮಣ್ಣಿನ ವಾಸನೆಯನ್ನು ಮೈಗೂಡಿಸಿಕೊಂಡವರಂತೆ ಕಂಡುಬರುತ್ತಾರೆ. ಬಯಲು ಸೀಮೆಯಲ್ಲಿ ಮಳೆಗಾಲದಲ್ಲಿ ಬೆಳೆದು ನಿಂತಿರುವ ಜೋಳದ ಹೊಲಗಳು, ಕಬ್ಬಿನ ಗದ್ದೆಗಳು, ಭತ್ತದ ಪೈರುಗಳು, ಅವುಗಳಿಗೆ ನೀರು ತಿದ್ದುವ, ಹಕ್ಕಿಗಳನ್ನು ಸೋವುವ, ಕಣವೆ ಕಲ್ಲಾಟದ ತರುಣ ತರುಣಿಯರ ಸಲ್ಲಾಪಗಳು ಮುಂತಾಗಿ ಕಣ್ಮನಗಳನ್ನು ತುಂಬುತ್ತವೆ. ಒಟ್ಟಿನಲ್ಲಿ ಶಿವ ಗಿರಿಜೆಯರು ನಮಗೆ ದೂರದವರೇನಲ್ಲ ನಮ್ಮ ನಂಟರಿಷ್ಟರೆ ಇರಬಹುದೆಂಬ ಆತ್ಮಿಯ ಭಾವನೆ ಈ ಕಾವ್ಯದ ಓದುಗರಿಗೆ ಲಭಿಸುತ್ತದೆ. ಆದರೆ ಚಂಪೂಶೈಲಿಯ ಒಳಪ್ರವೇಶ ಅಷ್ಟು ಸುಲಭವೇನಲ್ಲ.

**ಹರಿಹರನ ಕಾವ್ಯದಲ್ಲಿ ಪ್ರಯೋಗವಾಗಿರುವ ಕೆಲವು ಗಾದೆಗಳು**

ದುಗ್ಧಂ ವಿಷಮಾದೊಡೇನನೆಂದಪೆನ್ (೪-೧೩೭) ಗಿರಿಜಾಕಲ್ಯಾಣ.

ಬೇರಂ ಬಲ್ಲರ್ಗೆಲೆದೋರಲೇಕೆ? ((೫-೬೫) ಗಿರಿಜಾಕಲ್ಯಾಣ.

ನಂಬಿದವರ ಗೋಣಂ ಕೋಯ್ವರೇ? - ಬಸವರಾಜ ದೇವರ ರಗಳೇ (೫-೩೩)

ಲೋಕಕ್ಕೆ ತಾ ಮರುಳು, ತನಗೆ ಲೋಕಂ ಮರುಳು-ರೇವಣ ಸಿದ್ಧರ ರಗಳೆ.

ಕೂಸಂ ಚಿವುಂಟುವೈ ತೊಟ್ಟಿಲಂ ತೂಗುವೈ, (೧೫-೧೪೧) ನಂಬಿಯಣ್ಣನ ರಗಳೆ.

ನಂಬಿದವರಂ ನಡುನೀರೊಳದ್ದುವರೆ? (೧೯-೩೩) ಅದೇ.......



ಅತಿಕಾಮಿ ಕಣ್ಗಾಣ (೧೪-೧೦೫) ಅದೇ......

ಸಿತಗನೊಳು ಗುಣಮನರಸುವರೆ? (೧೫-೧೯೧) ಅದೇ.......

* * * *

ಡಿ.ಎಲ್.ಎನ್. ಅವರು ಹರಿಹರನ ಶೈಲಿಯ ಮುಖ್ಯ ಲಕ್ಷಣವನ್ನು ಉತ್ಸಾಹ ಎಂದಿದ್ದಾರೆ. ಅವನ ಗಮನಕ್ಕೆ ಬಂದ ಯಾವುದೇ ವಿಷಯ ಇರಲಿ, ಅವು ನಾಮುಂದು ತಾ ಮುಂದು ಎಂದು ಜನಪದರಂತೆ ಎದೆ ತೆರೆದು ಸ್ಪರ್ಧಿಸುತ್ತ ಮುನ್ನುಗ್ಗುತ್ತವೆ. ಅವುಗಳನ್ನು ಹೇಗೇಗೆ ಹೇಳಿದರೂ ಆತನಿಗೆ ತೃಪ್ತಿ ಇಲ್ಲ. ಹೇಳಿದ್ದು ಸಾಲದು, ಚೆನ್ನಾಗಿ ಹೇಳಬೇಕು ಇನ್ನೂ ಚೆನ್ನಾಗಿ ಹೇಳಬೇಕು ಎಂಬುದು ಅವನ ಸ್ವಭಾವ. ಅವನ ಕಾವ್ಯಗಳಲ್ಲೆಲ್ಲ ಪದಗಳ, ಚಿತ್ರಗಳ, ನಾದಗಳ, ಭಾವಗಳ ಚೆಂಡಾಟವು ಕಾಣುತ್ತವೆ. ಅವನ ಉತ್ಸಾಹ ಆ ಶಿವನೇ ಬಲ್ಲ. ರಗಳೆಯ "ನಾಯಕರ ಊರು, ಕೇರಿ, ದೇಶ, ಅಲ್ಲಿನ ಶಿವದೇವಾಲಯ, ಭಕ್ತನ ಓಡಾಟ, ಪೂಜೆ, ನಿಷ್ಠೆ, ಭಕ್ತಿ, ದೈನಂದಿನ ಬದುಕು, ಅವನ ಮನಸ್ಸನ್ನು ಒರೆದು ನೋಡಬೇಕೆಂದು ಶಿವನಿಗೆ ಸಂಕಲ್ಪ ಬಂದು ವೇಷ ಧಾರಣೆ ಮಾಡುವುದು. ಪರೀಕ್ಷೆ , ಭಕ್ತನ ಗೆಲುವು, ಪುಷ್ಪಕ ವಿಮಾನ, ಕೈಲಾಸ ಪ್ರಯಾಣ, ಶಿವನ ಪ್ರಶಂಸೆ, ಕೈಲಾಸಸಭೆ ಈ ಚಿತ್ರಗಳು ಒಂದಾದ ಮೇಲೊಂದು ಬರುತ್ತವೆ. ಉಸಿರಾಡದೆ ಎವೆಯಿಕ್ಕದೆ ಕುಳಿತು ನೋಡುವ ಕೇಳುವ ಕೆಲಸ ಓದುವವನದು." (ಡಿ.ಎಲ್.ಎನ್. ಹರಿಹರ)

ಹರಿಹರನ ಪದ್ಯ ಶೈಲಿಗಿಂತಲೂ ಗದ್ಯಶೈಲಿ ಉತ್ತಮವಾದುದೆಂದು ವಿದ್ವಾಂಸರ ಅಭಿಪ್ರಾಯ. ದೇಸಿ ನುಡಿಗಟ್ಟಿನ ಕಾಕು ಮನಸೆಳೆಯುತ್ತದೆ. ಒಂದು ಉದಾಹರಣೆ ನೋಡಿ:

"ದೇವ ದೇವ ಸಂಗ, ಕಂಡ್ಯೆ. ಕೆಟ್ಟೆ ಕೆಟ್ಟೆಂ ತೊಟ್ಟ ನಿಂತು ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ? ಗಗನದಿಂದಿಳಿವಂಗಾಧಾರವಾಗುತ್ತೆ ತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ? ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ? ನರಲೋಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದಾಳ್ಗೊಂಡ ಗುರುವೆ ಪರಮ ಬಂದುವೆ ಪ್ರಾಣವೆ, ಬೆಳುದಿಂಗಳೇಕೆ? ಬಿಸುಪೇಕೆ? ಅಮೃತವೇಕೆ? ವಿಷವೇಕೆ? ಬೆಳಗೇಕೆ ತಮವೇಕೆ?

ನೀನೇಕೆ? ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ? ಸಾರ್ದರ ಸೈರಿಸೆಂಬರೇ? ನಂಬಿದವರ ಗೋಣಂ ಕೊಯ್ವರೆ? ಶಿಶುವನಿರಿವರೆ? ಪಶುವಂ ಕೊಲುವರೆ? ಎನ್ನ ಬಿಡುವರೆ? ಕರುಣೆ ಕರುಣೆ, ಕರುಣಂ ಲೇಸಾಯ್ತು. ಅರ್ಚಿಸಿತಕ್ಕೆ ಫಲವಾಯ್ತು. ಇನ್ನೇನು ಇನ್ನೇನು? - ಎಂದೊಟ್ಟಿ ಒರಲಿ ಪರಿತಂದು ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು ಆಲಿಟ್ಟು - ಸಿವದಿಟ್ಟು ಮೊರೆಯಿಟ್ಟು ಮೂರ್ಚಿಸುತ್ತೆಂತಕ್ಕೆಚ್ಚತ್ತು ಮೆಲ್ಲ ಮೆಲ್ಲನಾಲಿಂಗನಮಂ ಸಡಿಲ್ಚಿ ನಡೆತಂದು;" (ಬಸವರಾಜ ದೇವರ ರಗಳೆ, ಪುಟ - ೧೫-೧೬)

○



# ರಾಘವಾಂಕ

# ರಾಘವಾಂಕ

**ಕವಿಯ ಇತಿವೃತ್ತ:** ರಾಘವಾಂಕನು ಒಟ್ಟು ಆರು ಕಾವ್ಯಗಳನ್ನು ರಚಿಸಿರುವಂತೆ ತಿಳಿದುಬರುತ್ತದೆ. ಅವುಗಳೆಂದರೆ ಹರಿಶ್ಚಂದ್ರ ಕಾವ್ಯ, ಸಿದ್ಧರಾಮಚರಿತೆ, ಸೋಮನಾಥ ಚಾರಿತ್ರ, ವೀರೇಶ ಚರಿತೆ, ಶರಭ ಚಾರಿತ್ರ ಮತ್ತು ಹರಿಹರ ಮಹತ್ವ. ಆದರೆ ಕೊನೆಯ ಎರಡು ಕೃತಿಗಳು ಇದುವರೆಗೂ ಲಭ್ಯವಾಗಿಲ್ಲ. ಹರಿಶ್ಚಂದ್ರ ಕಾವ್ಯ, ಸಿದ್ಧರಾಮಚರಿತೆ, ಸೋಮನಾಥ ಚಾರಿತ್ರಗಳನ್ನು ವಾರ್ಧಕ ಷಟ್ಪದಿಯಲ್ಲೂ ವೀರೇಶ ಚರಿತೆಯನ್ನು ಉದ್ದಂಡ ಷಟ್ಪದಿಯಲ್ಲೂ ಬರೆದಿರುತ್ತಾನೆ. ರಾಘವಾಂಕನೇ ಷಟ್ಪದಿಯಲ್ಲಿ ಕಾವ್ಯಗಳನ್ನು ರಚಿಸಿದವರಲ್ಲಿ ಮೊದಲಿಗನೆಂದೂ ಹೇಳುತ್ತಾರೆ. ಈತನನ್ನು ಷಟ್ಪದಿಯ ಆಚಾರ್ಯನೆಂದೂ ಭಾವಿಸಲಾಗಿದೆ. ಈ ಕವಿಗೆ ಉಭಯಕವಿ ಕಮಲರವಿ, ಉಭಯ ಕವಿಶರಭ ಭೇರುಂಡ, ಅದಟಕವಿ ನಿಕರ ಚೌದಂತ ಎಂಬ ಬಿರುದುಗಳಿದ್ದುವೆಂದು ತಿಳಿದು ಬರುತ್ತದೆ.

ಕವಿಯೇ ಹೇಳಿಕೊಂಡಿರುವಂತೆ ಅವನ ಗುರು ಪರಂಪರೆ ಇಂತಿದೆ: ಹಂಪೆಯ ಶಂಕರ ಪ್ರಭುವಿನ ಶಿಷ್ಯಮಾದಿ ರಾಜ, ಇವನ ಶಿಷ್ಯ ಮಹಾದೇವ, ಅವನ ಶಿಷ್ಯ ಕವಿ ಹರಿಪರ, ಹರಿಹರನ ಶಿಷ್ಯ ರಾಘವಾಂಕ. ಇವನ ಹುಟ್ಟಿದೂರು ಪಂಪಾಕ್ಷೇತ್ರ (ಹಂಪೆ). ತಂದೆ ಮಹಾದೇವ ಭಟ್ಟ, ತಾಯಿ ರುದ್ರಾಣಿ ದೇವಿ. ಕವಿ ಹರಿಪರ ದೇವನು ಇವನಿಗೆ ಸೋದರಮಾವ. ಅಲ್ಲದೆ ಈ ಮಹಾಕವಿಯೇ ರಾಘವಾಂಕನಿಗೆ ವಿದ್ಯಾಗುರು, ಶಿಕ್ಷಾಗುರು, ದೀಕ್ಷಾಗುರು, ಮೋಕ್ಷ ಗುರುವೂ ಆಗಿದ್ದನು. ಕವಿಯ ಕಾಲದ ವಿಚಾರದಲ್ಲಿ ಕವಿಚರಿತೆಯ ವಿದ್ವಾಂಸರುಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಸಧ್ಯದ ಒಮ್ಮತದ ಅಭಿಪ್ರಾಯವೆಂದರೆ ಈತನ ಕಾಲ ಕ್ರಿ.ಶ. ೧೧೫೬ರಿಂದ ೧೨೨೦ ಎಂದು ನಿರ್ಣಯಿಸಲ್ಪಟ್ಟಿದೆ.

ಕರುಣರಸ ಪ್ರಧಾನವಾದುದು ಹರಿಶ್ಚಂದ್ರ ಕಾವ್ಯ. ಭಕ್ತಿರಸ ಪ್ರಧಾನವಾದುದು ಸಿದ್ಧರಾಮಚಾರಿತ್ರ. ಸೋಮನಾಥ ಚಾರಿತ್ರ ಶೃಂಗಾರ ಹಾಗೂ ಕರುಣರಸಗಳಿಂದ ಕೂಡಿದ್ದರೆ, ವೀರೇಶ ಚರಿತೆಯು ವೀರರಸ ಪ್ರಧಾನವಾಗಿದೆ. ರಾಘವಾಂಕನ ಕಾವ್ಯ ನಾಣ್ನುಡಿಗಳಿಂದ ತುಂಬಿದ್ದು ದೇಸೀಯ ಸೊಗಡನ್ನು, ಬೆಡಗನ್ನು ಮನಂಬುಗುವಂತೆ ಚಿತ್ರಿಸುತ್ತದೆ. ಅವನು ಬಳಸುವ ಅಲಂಕಾರ, ಸ್ವಭಾವೋಕ್ತಿ, ದೃಷ್ಟಾಂತ, ಉಪಮೆಗಳು ನೂತನವಾಗಿವೆ. ನಾಟಕೀಯತೆ ರಾಘವಾಂಕನ ಮತ್ತೊಂದು ಪ್ರಧಾನವಾದ ಸ್ವಭಾವ ಗುಣ. ರನ್ನ ಕವಿಯಂತೆ ಈತನದೂ ನಾಟ್ಯ ಪ್ರತಿಭೆ. ಗಾನರಾಣಿಯರ ಮತ್ತು ಹರಿಶ್ಚಂದ್ರನ ಸಂವಾದದಲ್ಲಿ ಅವನ ನಾಟ್ಯ ಶೈಲಿಯ ಪರಮ ಜಾಣ್ಮೆಯನ್ನು ಕಾಣಬಹುದು. ಜಾತಿ, ಮತ, ವರ್ಗ, ವರ್ಣಗಳ ಬಗ್ಗೆ ರಾಘವಾಂಕನಿಗಿರುವ ನ್ಯಾಯೋಚಿತ ಸಮಾನ ತರ್ಕ ದೃಷ್ಟಿ ಈತನನ್ನು ಅಗ್ರ ಕವಿಸಾಲಿಗೆ ಸೇರಿಸುವಂತೆ ಪ್ರೇರೇಪಿಸುತ್ತದೆ.

ರಾಘವಾಂಕನ ಕಾವ್ಯ ಯಾವ ರಾಜ ಮಹಾರಾಜರನ್ನು ಕುರಿತು ಹಾಡಿ ಹೊಗಳಿ ಮೆಚ್ಚಿಸುವುದಕ್ಕಾಗಿ ರಚಿತವಾದದ್ದಲ್ಲ. ಜನ ಸಾಮಾನ್ಯರ ನೈತಿಕ ಬದುಕನ್ನು ಎತ್ತರಕ್ಕೇರಿಸುವ ಉದ್ದೇಶದಿಂದ ಮೂಡಿಬಂದದ್ದು. ಆದ್ದರಿಂದ ಗಮಕ ವಾಚನಕ್ಕೆ ಅನುಕೂಲಕರವೆಂಬಂತೆ ಷಟ್ಪದಿ ಶೈಲಿಯನ್ನು ಈತ ಆರಿಸಿಕೊಂಡಿದ್ದಾನೆ. "ಕೇಳ್ದು ಜನ ಬದುಕಬೇಕೆಂಬುದೇ" ಇವನ ಉದ್ದೇಶ.

"ಹರನೆಂಬುದೇ ಸತ್ಯ, ಸತ್ಯವೆಂಬುದೇ ಹರನು" ಎಂಬ ಬೀಜ ಮಂತ್ರವನ್ನು ಕಥಾನಿರೂಪಣೆಯಲ್ಲಿ ಹೇಳಿ, ಹರಿಶ್ಚಂದ್ರನ ಸತ್ಯಸ್ವರೂಪವನ್ನು ಜಗತ್ತಿಗೆ ಸಾರಿಹೇಳುತ್ತಾನೆ. ರಾಘವಾಂಕನ ಹರಿಶ್ಚಂದ್ರ ಕಾವ್ಯವು ಸಂಸ್ಕೃತದಲ್ಲಿ ಭವಭೂತಿಯು ಬರೆದ ಉತ್ತರರಾಮಚರಿತೆಯನ್ನು ನೆನಪಿಗೆ ತರುತ್ತದೆ ಕರುಣರಸ ಪ್ರತಿಪಾದನೆಯಲ್ಲಿ. ಹಾಗೆಯೇ ಕನ್ನಡ ಜಾನಪದದ ಅಪೂರ್ವಕಾವ್ಯ ಪುಣ್ಯ ಕೋಟಿ ಎಂಬ ಗೋವಿನ ಹಾಡನ್ನೂ ಕೂಡ ನೆನಪಿಗೆ ತರುತ್ತದೆ.

ಹಂಪೆಯ ದೇವರಾಯ, ಓರುಂಗಲ್ಲಿನ ಪ್ರತಾಪರುದ್ರ ಮಹಾರಾಜ, ಬೇಲೂರಿನ ಬಲ್ಲಾಳರಾಯ ಇವರುಗಳ ಆಸ್ಥಾನದಲ್ಲಿ ರಾಘವಾಂಕನು ಗೌರವಿಸಲ್ಪಟ್ಟನು. ಓರುಂಗಲ್ಲಿನ ಪಂಡಿತವರ್ಗದ ಗರ್ವಭಂಗ ಮಾಡಿದನು. ತನ್ನ ಉತ್ಕಟ ಭಕ್ತಿಯಿಂದ ಗುರು ಹರಿಹರನಂತೆಯೇ ಹಂಪೆಯ ವಿರೂಪಾಕ್ಷನನ್ನು



ಸಾಕ್ಷಾತ್ಕರಿಸಿಕೊಂಡನು. ಬೇಲೂರಿನ ಕೆರೆಯ ಪದ್ಮರಸನಿಂದ ತತ್ತ್ವೋಪದೇಶವನ್ನು ಪಡೆದ ರಾಘವಾಂಕನು ತನ್ನ ಜೀವನದ ಅಂತಿಮ ದಿನಗಳನ್ನು ಗುರುಸನ್ನಿಧಿಯಲ್ಲಿಯೇ ಕಳೆದು ತೀರಿಕೊಳ್ಳುತ್ತಾನೆ. ಬೇಲೂರಿನಲ್ಲಿ ಜೀರ್ಣಾವಸ್ಥೆಯಲ್ಲಿರುವ ರಾಘವಾಂಕನ ಸಮಾಧಿ ಇನ್ನೂ ಉಳಿದಿದೆ.

**ರಾಘವಾಂಕನ ಕಾವ್ಯದಲ್ಲಿ ಜಾನಪದೀಯ ಅಂಶಗಳು**

ಹರಿಹರನಂತೆಯೇ ರಾಘವಾಂಕನು ಸಹ ಜನಪದ ಕಾವ್ಯಗಳ ಪ್ರಭಾವಕ್ಕೆ ಒಳಗಾಗಿರುವ ಕವಿ. ಈತ ಷಟ್ಪದಿಯೆಂಬ ದೇಸಿ ಛಂದಸ್ಸಿನ ಸಾಧ್ಯತೆಗಳನ್ನು ಸೂರೆಗೊಂಡವನು. ಹರಿಶ್ಚಂದ್ರ ಕಾವ್ಯದಲ್ಲಿ ಬರುವ ವಶಿಷ್ಠ ಮತ್ತು ವಿಶ್ವಾಮಿತ್ರರ ಶಪಥದ ಪ್ರಸಂಗ, ಗಾನರಾಣಿಯರ ಪ್ರಸಂಗ, ಸಂಬಳಿ ಗೋಲ ಮುದ್ರೆ ಕೊಟ್ಟ ಪ್ರಸಂಗ, ವಿಪ್ರನ ಮನೆಯಲ್ಲಿ ಚಂದ್ರಮತಿ ಕಷ್ಟಪಡುವ ಪ್ರಸಂಗ, ಬಾಲಕ ಲೋಹಿತಾಶ್ವನಿಗೆ ಹಾವು ಕಚ್ಚುವುದು, ಚಂದ್ರಮತಿಯ ಮೇಲೆ ಕಾಶೀರಾಜನ ಮಗುವನ್ನು ಕೊಂದ ಆರೋಪ, ಕಡೆಗೆ ಪತಿಯೇ ಸತಿಯ ತಲೆ ಕಡಿಯಲು ಸಿದ್ಧವಾಗುವ ಪ್ರಸಂಗ ಈ ಮುಂತಾದುವೆಲ್ಲ ಜನಪದ ಕಥೆಗಳಲ್ಲಿ ಬರುವಂತಹ ಘಟನೆಗಳೇ ಆಗಿವೆ. ಸೋಮನಾಥ ಚರಿತೆ, ಸಿದ್ಧರಾಮ ಪುರಾಣ ಮುಂತಾದ ಶಿವಶರಣರನ್ನು ಕುರಿತಾದ ಅವನ ಕಾವ್ಯಗಳೂ ಕೂಡ ಜನಪದ ಕಾವ್ಯದ ಮಾದರಿಯಲ್ಲಿಯೇ ಇವೆ ಎಂಬುದಾಗಿ ಡಾ.ಕೆ. ರಂಗಾರೆಡ್ಡಿಯವರು ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ. (ಕನ್ನಡ ಶಿಷ್ಟ ಸಾಹಿತ್ಯದಲ್ಲಿ ಜಾನಪದ, ಕರ್ನಾಟಕ ಸಾಹಿತ್ಯ ಅಕಾಡೆಮಿ. ಪುಟ ೬೩)

ರಾಘವಾಂಕನ ಕೃತಿಗಳಲ್ಲಿ ಜಾನಪದೀಯ ಅಂಶಗಳನ್ನು ಪರಿಶೀಲಿಸಲು ಹರಿಶ್ಚಂದ್ರ ಕಾವ್ಯದ ಕೆಲವು ಸನ್ನಿವೇಶಗಳನ್ನು ಮಾತ್ರ ಇಲ್ಲಿ ಎತ್ತಿಕೊಳ್ಳಲಾಗಿದೆ. ಈ ಕಾವ್ಯದ ನಾಲ್ಕನೆಯ ಸ್ಥಲ ಸಂಪೂರ್ಣವಾಗಿ ಸೂಳೆಗೇರಿಯ ವರ್ಣನೆಗೆ ಮೀಸಲಾಗಿದೆ. ಹರಭಕ್ತನ ಈ ಕಥೆಗೆ ಸೂಳೆಗೇರಿಯ ವರ್ಣನೆ ಅನಗತ್ಯವೆಂದೂ, ಕಥಾನಾಯಕನನ್ನು ಇಲ್ಲಿ ಸುತ್ತಿಸುವುದರಲ್ಲಿ ಔಚಿತ್ಯವಿಲ್ಲವೆಂದೂ ಈ ಬಗ್ಗೆ ಕೆಲವು ವಿದ್ವಾಂಸರು ಆಕ್ಷೇಪಿಸಿರುವುದುಂಟು. ಆದರೆ ಜನಜೀವನದ ಒಂದು ಮುಖವನ್ನು ಚಿತ್ರಿಸುವ ಮೂಲಕ ರಾಘವಾಂಕ ನಮಗೆ ಅಂದಿನ ಸಮಾಜವನ್ನು ಅರ್ಥಮಾಡಿಕೊಳ್ಳಲು ಉಪಕಾರವನ್ನೇ ಮಾಡಿದ್ದಾನೆ. ಹಾಗೆಯೇ ಬೇಟೆಯ ಸಂದರ್ಭವೂ ಸಹ ಕುತೂಹಲಕಾರಿಯಾಗಿದೆ.

ರವಿಕೆಯನ್ನು ಸಸಿನೆ ಬಿಗಿಮು, ಎವೆ ಉದುರಿದ ಕಣ್ಗೆ ಕಾಡಿಗೆ ಹಚ್ಚಿ, ಸದೆ ಸೊಪ್ಪ ಅಣಲೊಳ್ ಅಡಿಸಿ, ಮುಸುಡು ಗಾಣದ ತೆರದಿ ಹಿಂದೆ ಸೊಡರಿಟ್ಟು, ನೆರೆನಸಿದ ರಾಗದಿಂ ಕೊಳೆತ ಹಾಡ ಬೊಗಳುತ ಗಂಡಿನ ಹೆಸರು ಸುಳಿಯಲ್ಕೆ 'ಬಾರೊ ನಸ್ನಾಣೆ' ಎಂದು ಗೋಗರೆಯುವ ಮುದಿ ಪಾರಿಯದ್ದರು. ಯೌವನದಲ್ಲಿ ಮೆರೆದ ಈ ಮಂದಿಯ ಆರೋಗ್ಯ ಈಗ ತುಂಬಾ ಹದಗೆಟ್ಟು ಹೋಗಿದೆ. ನೊರಜುಗಣ್ಣು, ನಳಿತಮೂಗು, ಎಳಲುವ ತುಟಿ, ಕುರುಟು ಹಲ್ಲು, ಕರಿಯ ಕಬ್ಬಾಯ್, ಒಳಸರಿದ ಪರಿತಲೆ, ಬೆಂಗಡರಿದ ಮುಸುಡು, ಸುಬ್ಬರ (ಒರಟು) ವಡೆದ ಗಲ್ಲ, ಕೊಂಕಿದ ಕೊಡಂಕೆ (ಕಿವಿ), ಮುರುಟಿದ ಮೊಲೆ, ಮೆಯ್‌ಸೆರೆ ಬಿಗಿದ ಹೊಟ್ಟೆ, ತೆರೆತೆರೆಗೊಂಡು ಸುಕ್ಕಿದ ತೊಗಲು, ನೊರೆ ಸೂಸಿ ನಾರುವ ಬಾಯ್ ಇಂಥ ಮುದುಕಿಯರು ಸೂಳೆಗೇರಿಯ ಸಂದು ಗೊಂದುಗಳಲ್ಲಿ ಮುಸುಕಿಟ್ಟು ಅವಿತುಕೊಂಡಿದ್ದರು. ಅಧಃಪತನಗೊಂಡ ಮನುಷ್ಯ ಪ್ರಪಂಚದ ಜಗತ್ ಚಾರಿತ್ರ್ಯಕ್ಕೆ ಹಿಡಿದ ಜೀವಂತ ಪ್ರತಿಮೆಗಳು ಇವರು. ರಾಘವಾಂಕ ಕವಿ ಯಾವ ಮುಜುಗರವೂ ಇಲ್ಲದೆ ಈ ಮುದಿಸೂಳೆಯರ ಪಾಡನ್ನು ನೋವಿನಲ್ಲಿ ಅದ್ದಿದ ಕುಂಚದಿಂದ ಬಿಡಿಸಿಟ್ಟಿದ್ದಾನೆ.

ಇತ್ತ ಕೆಲವು ಜಾರೆಯರು ತಮ್ಮ ಜಾರರು ಹೇಳಿದ ಸಂಕೇತ ಸ್ಥಾನದತ್ತ ಯಾರೂ ಕಾಣದ ಹಾಗೆ ನಲಿನಲಿದು ಬರುವ ಚಿತ್ರಗಳಿವೆ. ಕೀಳಿಲೊಳು, ಹಿತ್ತಿಲೊಳು, ಕೊಟ್ಟಿಗೆಯ ಒತ್ತುಗಳೊಳು, ಭಿತ್ತಿಯ ಮರೆಗಳೊಳು, ಸಂಧಿಗೊಂದಿಗಳೊಳು, ಇಡಿದ ಮರಗತ್ತಲೆಯ ನೆರಳೊಳು, ಮುಳು, ತೆವರು, ಕುಳಿ ಎನ್ನದೆ ಎಳಸಿ ಒರಗಿರುತ್ತಿದ್ದರು. ಪಿಸುಮಾತು, ನಸು ಚುಂಬನ, ಸೂಸದ ಉಸುರು, ಸೊಪ್ಪಳ ನುಡಿ, ಗಾಸಿ ನಡದಿರುವ ಉಗುರು, ಸಡಲಿಸಿದ ಉಡುಗೆ ಹೀಗೆ ನೆರೆ ನೆರೆದು ಕತ್ತಲೆ ಹರಿಯಲು ತಮ್ಮ ಮನೆಯತ್ತ ಹರಿಯುವ ಜಾರ ಮಿಥುನಗಳಿದ್ದವು. ತಡಹುತ್ತ ಹರೆದ ಮುಂದಲೆಯನ್ನು, ಉಬ್ಬಿದ ತುಟಿಯನ್ನು ಒಡೆಗಚ್ಚುತ, ಉಸುರ ಒಳ ತೆಗೆಯುತ್ತ, ಬಾಗಿ ತೋಳ್ ತೊಡೆಯ ನಖಗಂಧೆಗಳನ್ನು ಒರೆಸಿಕೊಳುತ, ಎದೆಯ ಕಿರುಬೆಮರುಗಳನ್ನು ಊದಿಕೊಳುತ, ಮುಡಿಯರಳ ಚೆಲ್ಲುತ, ಅಣಲ (ದವಡೆ) ತಂಬುಲ ಉಗಳ್ದು, ನಿಡು ಮುಸುಕ ಇಡುತ, ಉರವಣಿಸಿ ನಡೆಯುತ, ಉಲಿಗೇಳುತ ಅಡಿಗಡಿಗೆ ನಿಲ್ಲುತ, ಹಿತ್ತಲ ದಾರಿಯಿಂದ ಜಾರೆಯರು ಒಳಹೋಗುತ್ತಿದ್ದರು.



ಶಿಷ್ಟ ಜನಕಿಟ್ಟ ಬಲುಗಾಣದಂತಹ ನಾಯಕ ಸ್ತ್ರೀಯರು ಹಡಪದ ಅನುಲೇಪನದ, ಕುಸುಮ ಮಾಲೆಗಳ ಕನ್ನಡಿಯ ಸಿರಿ ಮುಡಿಯ, ಪಡಿಸಣದ ಹಂತಿಯ, ಹಲವು ತೊಡಿಗೆಗಳ, ಸೀಗುರಿಯ ಚಾಮರಂಗಳ, ಹದಿರ ಹಾಡುವ, ಆಡುವ ನಗಿಸುವ ನುಡಿವ, ಗಿಳಿಯೋದಿಸುವ, ಹಂಸ ಮಿಥುನಂಗಳ ನಡೆಯಿಸುವ, ನವಿಲ್ಗಳ ಕುಣಿಯಿಸುವ ವನಿತೆಯರು ಕಂಗೊಳಿಸುತ್ತಿದ್ದರಲ್ಲಿ.

ಹಸುವಿಗೆ ಮೇವು, ಶಿಶುವಿಗೆ ನವನೀತ, ಹಸಿದವನಿಗೆ ಉದಕ, ದಾನ ಬೇಳ್ವಂಗೆ ಹಸೆದಾನ, ವಧುವಿಲ್ಲದವನಿಗೆ ವಿವಾಹ, ವಿಟರಾದವರಿಗೆ ಅಂಗಸುಖವ ಬೆಸಗೊಂಬುದಕ್ಕೆ ಇದೇ ಕುರುಹೆಂದು ಮನೆಯ ಮುಂದೆಸೆವ ನೆಲೆಯುಪ್ಪರಿಗಳ ಬಾಗಿಲೊಳು ಮೆರೆವ ಮಿಸುನಿಗಳ ಗಂಟೆಯ ಚೆಲುವಿಕೆಯಿಂದ ಆ ಸೂಳೆಗೇರಿಗಳು ರಂಜಿಸುತ್ತಿದ್ದವು.

ಅಳುಪಿ ನೋಡಿದಡೆ ಒಂದು, ಚಿಂತಿಸಿದಡೆ ಎರಡು, ಸುಯ್ ಹೊಳೆಯೆ ಮೂರು, ಜ್ವರಂ ತೋರಿದಡೆ ನಾಲ್ಕು, ಮೈ ಇಳುಹಲ್ ಐದು, ಊಟಮಂ ಬಿಡಲ್ ಆರು, ವಿಕಳವೆಡೆಗೊಳಲ್ ಏಳು, ಕಡುಮೋನಮಂ ತಳೆಯಲ್ ಎಂಟು, ಅತಿ ಮೂರ್ಚೆ ಮೂಡಲ್ ಒಂಭತ್ತು, ತನುವಳಿಯೆ ಹತ್ತು ಇಂತಿವು ದಶಾವಸ್ಥೆಕೇಳು ಎಂದು ಕಡು ಜಾಣೆಯರು ಬಾಲಕಿಯರಿಗೆ ಬೋಳೈಸುತ್ತಿದ್ದರು.

ಕಾಲ ಕಾಲದೊಳ್ ಅವರ ಕಯ್ಯುವೊಡವೆಯ ತಿಂದು ಸೂಳೆ ಸೂಳೆಯ ಮಗಂಗೀವುದು ಏನಚ್ಚರಿಯೆ ಎಂಬ ಮಾತಿರುವುದರಿಂದ ಸೂಳೆ-ಸಂಸಾರಗಳು ವಂಶ ಪಾರಂಪರ್ಯವಾಗಿ ಗಳಿಸುತ್ತಿದ್ದವೆಂದು ಹೇಳಬಹುದು. ಕೆಲವು ದುಶ್ಶೀಲೆಯರಾದರೊ ಖೂಳನಂ ಮೂಳನಂ ಮೋಟನಂ ಮುಕ್ಕನಂ ಕೀಳು ಜಾತಿಯನಂ ಪುರುಳಳಿದ ಮೆಯ್ಯಾದೊಡಂ ಬೇಡಿ ಬೆಲೆ ಇತ್ತೊಡೆ ಅವನೇ ಕಾಮದೇವನೆಂದು ಕೊಂಡಾಡುತ್ತಿದ್ದರು.

ಪಾನಮತ್ತರಾದ ಸ್ತ್ರೀಯರ ಚಿತ್ರವಂತೂ ಮನೋಜ್ಞ. ಕುಡಿದು ಕಡುಸೊಕ್ಕಿದ ತೊತ್ತಿರುಗಳು ಕೆಲರು ಸೀರೆಯಂ ಕಳೆದು ಕೌಂಕುಳಲವಚಿ, ನಡೆದು ಡೆಂಡಣಿಸುತ್ತ, ತೊದಳಿಸುತ್ತ, ಬೈವುತ್ತ, ದಡದಡಿಸಿ ಜೋಲುತ್ತ, ಝೊಂಪಿಸುತ, ಹಾಡುತ್ತ, ಹರಿವುತ್ತ, ಹಂಬಲಿಸುತ, ಎಡಹಿ ಕೆಡೆದು, ಎದ್ದು ಡರ್ರನೆ ತೇಗಿ ಬಾಳುಗೆ ಎನ್ನೊಡಯ ಎಂದು ಹೆದ್ದುರುಚೆಯ ಗಿಡುವಿನಂತೆ ಬೀದಿ ಬೀದಿಯೊಳು

ಸುಳಿದಾಡುತ್ತಿದ್ದರು. ಅಲ್ಲದೆ ಆರುಟ್ಟು ಕಳೆದ ಹೂ? ನಿನ್ನ ಬಾಯದು ಕೇತಿ ಮಾರಿಯೆ? ಮೂಸಿಕೊಳು; ಮುಳಿದಿತ್ತರೆ ಅವಳಿಗೆ ಇವರು? ಆರಿತ್ತರು? ಅವರಣ್ಣನ್; ಅದ ತಂದೆನ್; ಎಲ್ಲಿ? ಚಪ್ಪರದ ಮೇಲೆ; ಇಂದು? ನಾಳೆ? ನೀರು? ಅಲ್ಲ; ಎಲೆ? ಅಲ್ಲ; ನಾಯಮರಿಯದ ಸುರಿಯೆ, ಬಾರೆಲೆಗೆ ಕಿವಿ ಕಲಸಬಾರದು; ಅಂತಾಗಿ ನೀನು ಹಾರುವತಿಯೇ? ಎಂದು ಕುಡಿದ ಮೂಳಿಯರು ಬಾಯಿಗೆ ಬಂದ ಅಸಂಬದ್ಧವನ್ನು ನುಡಿದು ಬೀದಿಯ ಜನರನ್ನು ನಗಿಸುತ್ತಿದ್ದರು.

ಮತ್ತಿತ್ತ ವಲ್ಲಭರನ್ನು ಅಗಲಿದ ವಿರಹದಿಂದ ಚಿಕ್ಕಹರೆಯದ ಬಾಲೆಯರು ವಿಕಳತೆಯಿಂದ ಪಲ್ಲಟಿಸಿ ಮಾತಾಡುತ್ತಿದ್ದರು. ಇಂತಾಗಿ ರಾಜದುರ್ಗಗಳ ಸೂಳೆಗೇರಿಗಳು ಯೌವನ ದುರ್ಗಗಳಂತಿದ್ದುವು. ರಾಘವಾಂಕ ಚಿತ್ರಿಸಿರುವ ಸೂಳೆಗೇರಿಗಳು ಪಂಪಕವಿಯ ವೇಶ್ಯಾವಾಟಿಕೆಯಂತೆ ಸಹಜ ವಾಸ್ತವ ಚಿತ್ರಗಳಿಂದ ಕೂಡಿವೆ. ಆದರೂ ಕೆಲವೆಡೆ ಕಾವ್ಯಾಲಂಕಾರಗಳ ಉತ್ಪ್ರೇಕ್ಷಾಡಂಬರದ ವರ್ಣನೆಗಳು ಅಲ್ಲಲ್ಲಿ ನುಸುಳಿದ್ದು ಇ.ಪಿ. ರೈಸ್ ಅಂಥವರ ಕಾಮೆಂಟಿಗೆ ಕಾರಣ ಉಂಟು ಎಂಬಂತಿವೆ.

**ಬೇಟೆಯ ವರ್ಣನೆ**

**ಬೇಡರು** : ಹರಿಶ್ಚಂದ್ರ ಕಾವ್ಯದ ಐದು, ಆರನೇ ಸ್ಥಲಗಳು ಬೇಟೆಗೆ ಸಂಬಂಧಿಸಿವೆ. ಕತ್ತಲೆಯ ತತ್ತಿಗಳಂತಿದ್ದ ಬೇಡರೊಡೆಯರಿಗೆ ಕಾರೊಡಲು, ಮೇಗಡರ್ದಮೆಯ್‌ನವಿರು, ಕೆಂಗಲಿಪ ತೋರಗಣ್ಣು, ಕೆಮ್ಮೀಸೆ, ಗುಜುರುದಲೆ, ಬಳೆದ ಕಾಳೋಗರನನ್ನೇಳಿಸುವ ತೋಳು, ನಾರಿ ಹೊಡೆದು ಒಡೆದ ಹುಣ್ಣು, ಮೇಲಣಕೈಪೊಡೆ, ಪೇರುರ, ಕಿರಿಯನಡು, ಕೊಬ್ಬಿದ ಹೆಗಲು ಇದ್ದು ಅವರು ಪಿಡಿದ ಕೂರಂಬು ದೀರ್ಘ ಧನುಸಮೇತ ತಿರುಗಾಡುತ್ತಿದ್ದರು.

**ತರುವ ಕಾಣಿಕೆಗಳು**

ಬೇಡರು ತರುತ್ತಿದ್ದ ಕಾಣಿಕೆಯ ವಸ್ತು ವಿಶೇಷಗಳೆಂದರೆ ಹೊಂಗಿಮಿಡುಕುವ ಮೊನಗುದಿಗಳು, ಸಾರಂಗದ ಎಳೆಯ ಮರಿ, ಎರಳೆ ತೊಡೆ, ಉಗ್ರಮಾತಂಗದ ದಂತ, ಚಮರಿಯ ಹಿಣಿಲು, ಜೇನಿನ ನಳಿಗೆ, ನವಿಲಗರಿ ಕಟ್ಟು, ಸಿಂಗದ ಉಗುರು, ಹುಲಿಚರ್ಮ, ಕ್ರೋಡಶಾಬಗಳು, ಪೂತಿ (ಪುನುಗು?) ಬೆಕ್ಕು ಇತ್ಯಾದಿ......



**ಅನ್ವರ್ಥ ಚಿಹ್ನೆಗಳು**

ಮದಹಸ್ತಿ ಇರಿದ ಘಾಯಗಳು, ವರಾಹನೆತ್ತಿದ ಡೋರುಗಳು, ಮೃಗಾಧಿಪನುಗಿದು ಬಗೆದು ತೋಡಿದ ಬಾದಣ, ಕರಡಿ ಕಾರಿಬತ್ತಿದ ತೋಳು, ಹುಲಿ ಹೊಯ್ದು ಜರಿದ ಹೆಗಲು, ಪದೆದು ಕೋಣಂ ಹೊಯ್ದ ಹೋರು, ಭೇರುಂಡನೆರಗಿದ ಗಂಟುಗಳು, ಕಡವೆ ತುಳಿದ ಹೆಜ್ಜೆ ಚಿಹ್ನೆಗಳು ಮುಂತಾಗಿ ಹೊಂದಿದ್ದರು.

ಬೇಡನಾಯಕರ ಸಾಹಸದಂತೆ **ಬಿರುದುಗಳು ಅನ್ವರ್ಥ**ವಾಗಿದ್ದವು. ಹರಿದಲ್ಲಣ, ಹುಲಿಬಾಕ, ಸೂಕರಮೃತ್ಯು, ಸಾರಂಗಮರ್ದನ, ಮರೆಮಾರಿ, ಕಾಳ್ಕೋಣಕಂಟಕ, ಭಲ್ಲೂಕಮಲ್ಲ, ಕರಿಸಿಂಹ ಇತ್ಯಾದಿ. ಅಲ್ಲದೆ ಅವರ ಬಳಿ ಇದ್ದ ನಾಯಿಗಳಿಗೂ ಸಹ ಕಡವೆಗತ್ಯಾಸ್ವಾದಿ, ಉಡುಮೊಲಗಳಿಗೆ ದಡಿವೊಯಿಲನ್, ಕರಡಿಯಗಂಡ, ತೋಳ ಜಜ್ಝಾರ, ನರಿತಿನಿಹಿ ಮುಂತಾದ ಅನ್ವರ್ಥ ನಾಮಗಳಿದ್ದವು.

**ಬಲೆಗಳು**

ತಡಿಕೆಬಲೆ, ತಟ್ಟೆಬಲೆ, ಹಾಸು ಬಲೆ, ಬೀಸು ಬಲೆ, ಕೊಡತಿ ಬಲೆ, ಕೋಲು ಬಲೆ, ತಳ್ಳಿ ಬಲೆ, ಬಳ್ಳಿ ಬಲೆ, ತೊಡಕು ಬಲೆ, ತೋರುಬಲೆ, ತೊಟ್ಟಿ ಬಲೆ, ಗೂಟ ಬಲೆ, ಕಣ್ಣಿ ಬಲೆ, ಕಾಲುಬಲೆ, ಸಿಡಿ ಬಲೆ, ಸಿಲುಕು ಬಲೆ, ಹಾರು ಬಲೆ, ಜಾರಿ ಬಲೆ, ಬಡಿಗೆ ಬಲೆ, ಚಾಚುಬಲೆ, ಗಾಥ ಬಲೆ, ಗೂಢ ಬಲೆ, ಮಡಿಕೆಬಲೆ, ಮಂದಸಿನ ಬಲೆ ಮುಂತಾದ ನಾನಾಬಗೆಯ ಬಲೆಗಳಿದ್ದವು.

**ಬೇಟೆಯ ಸಾಧನಗಳು**

ತಡಿಕೆ, ಗಳ, ಬಲೆ, ಗಾಣ, ಕೂಳಿ, ಬಿಲ್ಲು, ಸರಳು, ನಾಯ್, ಗಿಡುಗ, ನೆರೆಮಡ್ಡಿ, ಬೆಳ್ಳಾರ್ಪಟ, ತೋರೆತ್ತು, ಹಿಡಿಯೆರಳೆ, ಸಿಲುಕು ಗಟ್ಟಿಗೆ, ಬೀಸುಗಣ್ಣೆ, ಗುಗ್ಗುರಿಯರಳು, ಗೌಜುಸುರಗಿ, ಕೊಡತಿ, ಕರವತಿಗೆ, ಕೂಳಿಕ್ಕವಡ, ದಂಡೆಕಯ್, ಹೊಡೆಯಿಟ್ಟಿ, ಗೂಡುಗಳು, ಕತ್ತಿ, ಬಡಿಕೋಲ್, ಕಲ್ಲಿ, ಹಿಡಿದ ಹುಲಿ ಮುಂತಾದುವು.

**ಸೈನಿಕರ ಆಯುಧಗಳು**

ರಾಜ ಚತುರಂಗ ಬಲ ಸಮೇತ ಮೃಗಯಾವಿಹಾರ ಹೊರಡುತ್ತಿದ್ದ. ಸೈನಿಕರಲ್ಲಿ

ಸಬಳ, ಸೆಲ್ಲೆಹ, ಕೊಂತ, ಕಕ್ಕಡೆ, ತ್ರಿಶೂಲ, ಸುರಗಿ, ಚಕ್ರ, ಮುದ್ಗರ ಮುಂತಾದ ಆಯುಧಗಳಿರುತ್ತಿದ್ದವು.

**ಅರಣ್ಯದ ಸಸ್ಯವರ್ಗ**

ಜಾಲಿ, ಆಲ, ನೆಲ್ಲಿ, ಕೆನ್ನೆಲ್ಲಿ, ಕಡವಡವ, ಹಾಲೆ, ಅಂಕೋಲೆ, ದಿಂಡಗ, ತಂಡಸೆರ, ಅರಳಿ, ಬೇಲ, ವರುಟಾಳ, ಹಲಸು, ಕಿರಿನಂದಿ, ಚಂದನ, ಕಕ್ಕೆ, ಬಿಕ್ಕೆ, ತರಿಯ, ಹೂಲಿ, ಮಾಲಿನಿ, ಬನ್ನಿ, ಹೊನ್ನೆ, ಸೊಗಡಗಿಲು, ಕಿತ್ತಾಳೆ, ಹೆಬ್ಬಾಳೆ ಔದುಂಬರ, ತುಂಬುರಿ ಮುಂತಾದುವಲ್ಲದೆ ತಡಸು, ಕೆಂದೆರಿ, ತೆಂಗು, ಸಂಗು, ಕೇದಿಗೆ, ಕದಳಿ, ನೆಲ್ಲಿ, ಬಿಲ್ಲ, ಬಿಲ್ವ, ರುದ್ರ, ನಡುವು, ತಂಡಸು, ತಪಸು, ತಾರಿ, ಕೆಂಗು, ತಿರುಳಿ, ತಗ್ಗಿ, ತುಗ್ಗಿಲು, ತುಂಬರ, ಬೀಡೆ, ತೊಟ್ಟೆ, ಹಾರಿವಾಳ, ಹುಣಿಸೆ, ಖರ್ಜೂರ ಮುಂತಾದ ಹಣ್ಣು ಹಂಪಲುಗಳ ತರುಮರ ಗಿಡಾದಿಗಳಿದ್ದವು. ಒಟ್ಟಾರೆಯಾಗಿ ಉಷ್ಣವಲಯದ ಕಾಡೊಳಗಿರುವ ಎಲ್ಲ ಬಗೆಯ ಸಸ್ಯವರ್ಗವಿತ್ತು.

**ಮೃಗ ತಾಣಗಳ ಕುರುಹುಗಳು ಮತ್ತು ಬೇಟೆ**

ಮೃಗಗಳ ಉಗುರು, ತುಪ್ಪಳು, ಕೊಳಗು, ನೊರಜು, ನೊರೆಗೆಸರು, ಸೊಗಡು ಹೆಜ್ಜೆಯನರಸಿ ಬೇಡರು ತೊಳಲುತ್ತಿದ್ದರು. ಬೇಟೆಯ ಸಮಯದಲ್ಲಿ ಘೋರಾಣ್ಯದ ಸರು, ದರು, ಹಳ್ಳ, ಕೊಳ್ಳ, ಗಿಡು, ಮಡು, ಬೆಟ್ಟ, ಘಟ್ಟ, ಕುತ್ತುರು, ಮೆಳೆ ಮುಂತಾಗಿ ಎಲ್ಲವೂ ಬೊಬ್ಬಿಟ್ಟು ಘೀಳಿಡುತ್ತಿದ್ದುದು. ಮತ್ತು ಅರಣ್ಯದಲ್ಲಿ ನಡೆವ ದನಿ, ಹರಿವ ದನಿ, ಕರೆವ ದನಿ, ಬಿಲ್ಲು ಜೇವೊಡೆವ ದನಿ, ಎಸುವ ದನಿ, ಬೈವ ದನಿ, ಕೂಗಿ ಬೊಬ್ಬಿಡುವ ದನಿ, ಇರಿವ ದನಿ, ಮುರಿವ ದನಿ, ತರಿವದನಿ, ಬೇಗೆ ಉರಿವದನಿ, ತುಡುಕು ದನಿ, ತಿತ್ತಿರಿಯದನಿ, ಹರೆಯದನಿ, ಸನ್ನೆಗೊಡುವದನಿ, ಖಗಮೃಗ ಗರ್ಜನೆಯದನಿ, ಒರಲಿಕೆಡವ ದನಿಗಳು ಬೆರಸಿ ಬೆಳೆಯೆ ಇನ್ನೂ ಭಯ ಹುಟ್ಟಿಸುವಂತಾಗುವುದು.

ಹಿಡಿನವಿಲ, ಇರಿಹುಲಿಯ, ಅಟ್ಟುಮರೆವಿಂಡ, ದರಿಗೆ ಕೆಡಹು ಕರಿಯ, ರೊಪ್ಪವಿಡಿದ ಹಂದಿಗೆ ತಡವಿ ಬಿಡುನಾಯ, ಎಚ್ಚು ಎರಳೆಯ, ಕೋಣವನು ಹೊರ ಹೋಗಲೀಯದೆ ಹೊಡೆ, ಉಡುವ ಮರೆ ಹಿಡಿ, ಕುತ್ತು ಕೋಣನ, ಒಯ್ಯನೆ ಇಡು ಮೊಲನ, ಮರಚು ಸಿಂಹವ, ಹಲವು ಬಲೆಗೆದರಿ ನಡೆಗೆಡಿಸು



ಹಕ್ಕಿಗಳನೆಂದು ಬೇಟೆಗಾರರು ಬೊಬ್ಬಿಡುತ್ತಿದ್ದರು. ಹರೆದುನಡೆ, ಬಲೆಯಹಸರಿಸು, ಹೆಜ್ಜೆಯ ನೋಡು, ಕರುಹಕಟ್ಟು, ಉಲುಹ ಆಲಿಸು, ಕುತ್ತುರಸೋಹು, ಸೆರೆಗೆದರು, ಬೆಳ್ಳಾರ ಬಿಗಿ, ತೋಹಿನೊಳುನಿಲ್ಲು, ತಿರಿಯಂಬ ಬಿಡು, ನಾಯ್ಗಳ ಕೊರಳ ಹಾಸದ ನೇಣ ಸಡಿಲ ಬಿಡು, ಸನ್ನೆಗೆಯ್, ಮರನೇರು, ಬಗೆ ಕುಣಿಗಳ, ಕುನ್ನಿಯ ಹೊಗಿಸು ಎಂದು ಬೇಡ ಪಡೆ ಒಬ್ಬರಿಗೊಬ್ಬರು ಆಡುತ್ತಿದ್ದ ಬೊಬ್ಬೆ ಅಡವಿಯಲಿ ಹಬ್ಬುತ್ತಿತ್ತು.

**ಕಾಡುಪ್ರಾಣಿಗಳ ವರ್ತನೆ**

ಧೀಂಕಿಟ್ಟು ಗರ್ಜಿಸಿ ಮುಟ್ಟುವ ಅತಿಬಲದ ಸಿಂಹವ ಕಂಡು, ಕಣ್ಮುಚ್ಚಿ ನೆರೆ ತಗ್ಗಿ ಮಗ್ಗಿ ತಲೆಗುತ್ತಿ, ನೆಲಕೆ ಸೊಂಡಿಲ ಹರಹಿ, ಮೊಳಕಾಲಿಕ್ಕಿ. ಬಲವಳಿದು, ಘೀಳಿಟ್ಟು, ಬೆನ್ನುಡುಗಿ ಗೂನುಗೊಂಡು, ಉಲುಕಲಮ್ಮದೆ ಆನೆಗಳು ಸುಕ್ಕಿ ಸುಗಿದಿರುತ್ತಿದ್ದವು.

**ಬೆದೆಯ ಕಾಡುಕೋಣ**

ಮಿಕ್ಕು ಪಚ್ಚಳಕೆತ್ತಿ, ಮೆಯ್ ನಿಮಿರಿ, ಗುರುಗುರಿಸಿ, ಹೊಕ್ಕುಳಲ್ಲಾಡೆ, ಮುಂಬದನನಸೆಗೊಸರ್ವ ನೊರೆನೆಕ್ಕಿ, ವಾಸಿಸಿ, ಲೋಳೆಬೇಳೆ, ಮೂಗಂ ಸುಗಿದು, ನೆಗಹಿ ಪಂಚಕಕೆ ಮುಸುಡನಿಕ್ಕಿ, ಕಿವಿ ಎಳಲೆ, ಕಣ್ಣ ಅರೆ ಮುಚ್ಚಿ, ನೆಗೆದು ಮೇಲಿಕ್ಕಿ, ದನಿಗೊಡುತ, ಲಂಘಿಸುತ ಕಾಡೆಮ್ಮೆಗಳ ತೆಕ್ಕೆಯ ಕೋಣಗಳಿದ್ದವು.

**ಬೆದರಿದ ಕೋಣ**

ದಿಟ್ಟಿಸುವ ಕಣ್, ನಟ್ಟ ಕಿವಿ, ಮರಳ್ದ ಮುಸುಡು, ಸುರುಕಿಟ್ಟು ಗುರುಗುರುಪ ಮೂಗು, ಅಲುಗದಂಗ, ನೆಲನತಟ್ಟಿ ಬೆರಂಟುವ ಪಾದ, ನೆಗೆದ ಅಳ್ಳೆ, ಬೆನ್ನಿಗೆ ಅಡರ್ದ ಬಾಲ, ರೌದ್ರ ಕೋಪ ಹುಟ್ಟಿ ಕೋಡ ಜಡಿದು, ತನುವ ಝಾಡಿಸಿ, ಹಿಂಡಬಿಟ್ಟು, ರೌಂಕಿಟ್ಟು ಮಹಿಷಾಸುರನನ್ನು ಹೋಲುವ ಕಾಡುಕೋಣಗಳಿದ್ದುವು. ಇಂಥ ನಿಡುಕೋಣಗಳಿಗೂ ಶಬರಿಯರು ಕೂರ್ಗಣೆಗಳಿಂದ ಹೊಡೆದು ಬಾಣನಾಟಿದರೆ ಆಗ ಅವು ಎಯ್ ಮೃಗದಂತೆ ಕಾಣುತ್ತಿದ್ದವು.

**ಪಕ್ಕಿಬೇಟೆ**

ಸಾಳುವಂಗಳನು (ಸಾಕಿದ ಸಾಳ್ವ) ಹಕ್ಕಿ ಬೇಟೆಗೆ ಉಪಯೋಗಿಸುತ್ತಿದ್ದರು. ಬಾವುಗೆ, ಹರಡೆ, ಗೌಜು, ಟಿಟ್ಟಿಭ, ಕುಕಿಲ, ತುರುವೆಗಣ್ಣ, ಹಂಸೆ, ರಾಗಧರನೆಂಬ

ಪಕ್ಷಿಗಳ ದನಿಯನ್ನು ಅನುಕರಿಸಿ ಕರೆಯುತ್ತಿದ್ದರು. ಆಗ ಆಕಾಶ ಮಂಡಳದಲ್ಲಿ ಸುತ್ತಿ ಇಳಿವ ಹಕ್ಕಿ ಸಮೂಹವನ್ನು ಲುಬ್ಧಕರು ಹೊಡೆಯುತ್ತಿದ್ದರು. ಅವು ಚೀರಿ ನೆಲಕ್ಕೆ ಬೀಳುತ್ತಿದ್ದವು. ತಪ್ಪಿಸಿಕೊಂಡು ಹೋಗುವವುಗಳಿಗೆ ಸಾಕಿದ ಸಾಳ್ವಗಳ ತಲೆನೀವಿ ಸರಪಳಿ ಬಂದಿ ಟೊಪ್ಪರಗಳನ್ನು ಕಳಚಿ ಬಿಡುತ್ತಿದ್ದರು.

### ಪಕ್ಷಿ ಬಗೆಗಳು

ಕಾಗೆ, ಗುಬ್ಬಿ, ನವಿಲು, ಇಬ್ಬಾಯ, ಪಾರಿವ, ಕೊಂಚೆ, ಗೂಗೆ, ಕುಕಿಲಿರಿವ, ಗಂಟಿಗ, ಕಿರುಬ, ಗೊರವ, ಗಿಳಿ, ಜೂಗ, ಹರಡೆ, ಹಸುಬ, ಹಿಸುಣ, ಹೆಬ್ಬಕ್ಕಿ, ಗಿಡಗ, ಹೊರಸು, ಒರೆವ, ಶಕುನಿ, ಮೂಗ, ಉರಿಗಣ್ಣ, ಬೆಳ್ಳಕ್ಕಿ, ವಲಿಯ, ಚಿಟ್ಟೆ, ಜಾಗರಿಗ, ಹದ್ದು ಮುಂತಾದುವುಗಳು. ಸಾಳುವಗಳು ಇವುಗಳಿಗೆ ನೆಗೆದು ತಾಗಿ ಹೊಡೆದು ಇಳೆಗೆ ಬೀಳಿಸುತ್ತಿದ್ದವು.

### ಮೀನು ಷಿಕಾರಿ

ಇರಿಗೂಳಿ, ಹೆಗ್ಗೂಳಿ, ಕಿರುಗೂಳಿ ಎಂಬ ಮೂರು ತೆರನ ಗಾಳಗಳಿದ್ದವು. ಗೋರಿ ಬಲೆ ಮುಂತಾದ ಬಲೆಗಳಿಗೆ ನೀಳ ದಾರವನ್ನು ಬಿಗಿದು ಸಿಲುಕು ನೀರಿನ ನದಿ ಸರೋವರಗಳಲ್ಲಿ ಬೆಸ್ತರು ಮೀನು ಹಿಡಿಯುತ್ತಿದ್ದರು.

### ಪರಿಪರಿಯ ಮೀನುಗಳು

ಕೊರವ, ಸೀಗುಡಿ, ಕುಚ್ಚು, ಹಣ್ಣಲು, ಬಸಿಗ, ಗಿರಲು, ಬಂಗಡೆ, ಹಾವು, ಕುಕಿಲು, ಹೆಗ್ಗರಿ, ಗಣೆ, ಮಣಿಗಣ್ಣ, ತೂತು, ತೆಂತಲು, ಸಿಸಿಲು, ಬೊಂಪು, ಸವಿವಾಯ, ಗೊದಳೆ, ಗರಿ ಮೆರೆವ, ಕಾಗೆಂಡೆ, ಎಯ್ ಎರಗ, ದೊಂಡಿ, ಕೆಂಗರಿ, ಪರಳು, ಹಾರುವ, ಹಿರಿಯ, ಷಡುಸಕ್ಕರಿಗ, ನಿರಿಲು, ಹಂದೆಗ, ಆನೆಮೊಗ ಮುಂತಾದುವುಗಳನ್ನು ಹಿಡಿದು ಬೆಸ್ತರು ಗುದಿಗೆಯ್ಯುತ್ತಿದ್ದರು.

ಬಿಳಿಚ, ಚಿಪ್ಪಲು, ಮಲಗು, ಹೆಮ್ಮಲಗು, ಬಿಳಿಯಾನೆ, ಮಳಲಿ, ಕೂಡಿಲು, ಚಕ್ರಗೆಂಡೆ, ಆವೆಗ, ನವಿಲು, ಇಳಿಯಂಬು, ಕುರಿದಲೆಗ, ಹೆಮ್ಮೀನು, ಕೆಮ್ಮೀನು, ಮುಕ್ಕಣ್ಣನಾರೆ, ನಿರಿಲು, ಕುಳಿಚು, ಸೂಜಿಗ, ನಗಲು, ಹೆಲ್ಲರ, ಬಂಕುರು, ಹಳಲೆ, ಕಪ್ಪೆಗಲೊರಲೆ, ಬೋಟೆ, ಗಿರಲುಗಳೆಂಬ ನಾನಾ ಬಗೆಯ ಮೀನುಗಳು ಹೊಳೆಯಲ್ಲಿದ್ದುವು.



### ಶಬರಿಯರು

ಕೆದರಿವೀಲಿಯ ಚಲ್ಲಣದ, ಸೊಕ್ಕಿದೆಕ್ಕಲನ ತಿದಿಯೆಕ್ಕವಡದ, ಗರುಡನ ಗರಿಯ ತಲೆವರಿಯ, ಮದಗಜದ ಮುತ್ತಿನೇ ಕಾವಳಿಯ, ಹೊಮ್ಮಿಗಾಜಿನದ ರವಕೆಯ, ದಂತದ ಹದವಿಲ್ಲ. ಬೆನ್ನ ಬತ್ತಳಿಕೆಯ, ಕೆಲದ ಚವರದ ಗೊಂಡೆಯ ಈ ಮುಂತಾದುವುಗಳಿಂದ ಕಂಗೊಳಿಸುವ ಶಬರಿಯರು ಹುಲ್ಲೆ ಬೇಟೆಯನ್ನಾಡುತ್ತಿದ್ದರು.

ಬೇಟೆಯಾಡಿದ ಮೇಲೆ ಕಾಡಿನ ಪ್ರಾಣಿಗಳ ಸ್ಥಿತಿ ಚಿಂತಾಜನಕವಾಗಿರುತ್ತಿತ್ತು. ಮೃತ್ಯುವಗಿದುಳಿದಂತೆ ಬೇಡರಟ್ಟುಳಿಗಳೊಳು, ಕುತ್ತುರೊಳು ಅಡಗಿದ್ದು ಬಳಿಕೆದ್ದು ತಮ್ಮತಮ್ಮ ಹೆತ್ತ ತಾಯ್ಗಳನರಸುತ್ತ ಅತ್ತಲಿತ್ತಲು ಪರಿದು ಮೃಗ ಶಿಸುಗಳು ಬಾಯ್ ಬಿಡುತ್ತಿದ್ದವು. ಸುತ್ತಿ ಕಿರುಮರಿಗಾಣದೆ ಒರಲಿ, ಕೆಕ್ಕಳಿಸಿ, ಕೊರಲೆತ್ತಿ, ಹೂಂಕರಿಸಿ, ಗಿಡುಗಿಡುಗಳೊಳು ಹೊಕ್ಕು, ಬಳಲುತ್ತ ಒರಲುತ್ತಿರುವ ಬಾಣಂತಿ ಜಿಂಕೆಗಳು ಕಾಣುತ್ತಿದ್ದವು.

ಎಂಟು ಬಗೆಯ ಬೇಟೆಗಳು ಯಾವುವೆಂದರೆ ಗೋರಿ ಬೇಟೆ, ಪಳಹರ ಬೇಟೆ, ಪಟಬೇಟೆ, ವಿದ್ಯಾಧರಬೇಟೆ, ಚಿತ್ರಬೇಟೆ, ಅಂಟು ಜಲಬೇಟೆ, ತೋಹಿನ ಬೇಟೆ, ಸೋಹು ಬೇಟೆ. ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಬೇಟೆಯ ವರ್ಣನೆಯಂತೂ ಪ್ರತ್ಯಕ್ಷ ಭಾಗವಹಿಸಿದ ಅನುಭವವನ್ನು ನೀಡುವಂತಿದೆ.

### ಕಾಡುಹಂದಿ ಬೇಟೆ

ಕಾಡು ಹಂದಿಗಳು ಯಮನ ಕೋಣನಂತಿರುತ್ತಿದ್ದವು. ಇವುಗಳ ಬೇಟೆ ಪ್ರಯಾಸಕರ. ಗಾಯಗೊಂಡ ಹುಲಿ, ಹಂದಿಗಳು ಮೃತ್ಯು ಸ್ವರೂಪಗಳೇ. ಇವುಗಳು ಕಂಡು ಬಂದಾಗ ಬೇಡರ ಉತ್ಸಾಹ ಮೇರೆಮೀರುವುದು. ಕವಿ ಕವಿಯೆನುತ್ತ ನಾಯ ಹಾಸವನು ತಿವಿದು, ಬಿಲ್ಲು ಹೊಯ್ದು, ಎಂಟುದೆಸೆಯಿಂದ ನೆರೆದು ಹೊಕ್ಕು ಮಿಕ್ಕು ಹೊಡೆಯುತ್ತಿದ್ದರು. ಮುಂಗುಡಿಯ ತವಕಿಗರು ಹಂದಿ ತಪ್ಪಿಸಿಕೊಳ್ಳದಂತೆ ಹೇವರಿಸಿ ಹೊದ್ದಿ ಹೊಡೆ ಕುತ್ತು ಕೊಲ್ಲು ತಿವಿ ಎಂದು ಹಿಂಬಾಲಿಸುತ್ತಿದ್ದರು. ಕೊಬ್ಬಿಡಿದ ಬೆನ್ನ ಭರದಿಂದ ಬೆಟ್ಟವನಡರುತ, ಒಬ್ಬುಳಿಯನೊಡೆದು, ಘುಡುಘುಡಿಸಿ ಕುಡುದಾಡೆಯನು ನಿಬ್ಬರದಿ ಮಸೆದು,

ಕೊರಡ ಹೊಯ್ದು, ಮಂದ ಗತಿಯಿಂದ ಸೊಕ್ಕಿ ಮಲೆತುಕೊಳುತ, ಕಿಗ್ಗಣ್ಣಿಕ್ಕಿ ನೋಡಿ, ಅಬ್ಬರವ ಕೇಳಿ ಆಲಿಸುತ, ಸೊಪ್ಪ ಬೆದಕುತ, ಇಬ್ಬಗಿಯ ಮಾಡಿ, ತೃಣದಿಂ ಶಕುನಮಂ ನೋಡಿ ಹೆಬ್ಬಂದಿವಿಪಿನದಲಿ ಓಡುವುದು. ಆಗ ಬೇಟೆಗಾರನು 'ಎಲೆಲೆಲೆಲೇ ಹಂದಿಯನುವಾದುದುಬುಬುಬೆಂದುಲಿದು' ನಾಯ್ಗಳು ವೆರಸಿ ಮುಕ್ಕುರಿಕ್ಕಲು, ಅದು ಮೆಲ್ಲನೊಲೆದುಬ್ಬಿ ಪುಟನೆಗೆದು ಗಜರಿ ಗರ್ಜಿಸಿ ಪುಳಿಂದರ ಮೇಲೆ ಆ ರಕ್ಕಸಮಿಗ ಬವರಿತಿರುಗಿ ಬಲವೊಂದು ಹೊಯ್ದ ಬೇಗಕ್ಕೆ ಬಿರು ಮಂದಿ ಬೇಡರನ್ನು ನಾಳಲ (ತಾವರೆ) ಹೊರೆಗಳನು ಕೊಚ್ಚಿದಂತಾಗುತ್ತಿತ್ತು. ಬೇಡ ಪಡೆ ಅದರ ಒಡಲ ನೀಡಿರಿದರೆ ಕಡಿವಡೆದ ಕಡಿಗಳೊಳು ಬಿಡದೆ ನಡೆಯುವುದು; ಅದ ಕಂಡು ಕೆಡೆ ಕೆಡೆ ಎನುತ್ತ ಮೂದಲಿಸಿ, ಅಡಗಕಡಿ ಮಾರಿಗೆ ನೆತ್ತರ ಎರೆ, ಹೊದೆಸು ಚರ್ಮವ, ತೊಡು ಬೇಗ ಬಿಡುಸರಳನು ಎಂದು ಉರವಣಿಸುವರು.

ಕುನ್ನಿಗಳ ಕವಿಸು, ಬೆನ್ನಡಗನುರೆ ತಿನಿಸು, ಚಲವಿನ್ನು ಹೆಣಗಿಕ್ಕು, ನಿನ್ನಳವಿನಲಿ ಹೊಕ್ಕುತಿವಿ, ಮುನ್ನ ಹಂದಿಯ ಕರುಳ ತಿನ್ನು, ತಿದಿಯಕಳೆ, ಕೊರಳಕಡಿ, ಸಂದಬಿಡಿಸು ಎಂದು ಪುಳಿಂದರು ಕವಿದು ಹೊಕ್ಕು ಹಂದಿಯ ತಿವಿಯುತ್ತಿದ್ದರು. ಅದು ಅಟ್ಟಿ ಬರಲು ಕವಡಿಕೆಯ ರಾಶಿಗೆ ಕಲ್ಲು ತಟ್ಟಿದಂತಾಗಿ ಶಬರ ಸಂಕುಲ ಕೆಟ್ಟೋಡುವುದು. ಉಸಿರ ಸಂತೈಸಿಕೊಂಡ ಬೇಡರು ಮತ್ತೆ ನಿಟ್ಟೆಲುಬ ಮುರಿ, ಕೊರಳಕೊರೆ, ಬರಿಯನಿರಿ ಎಂದು ನಾಲ್ದೆಸೆಯಿಂದ ಮುತ್ತುವರು. ಹಳ್ಳದೊತ್ತಿನಹೊದರ ಹೊಸ ಮೆಳೆಯ ರೊಪ್ಪಗೊಂಡಿದ್ದ ಗಾಯದ ಹಂದಿಗೆ ಘಿಳ್ಳಿಡುವ ನಾಯಿ ಸುತ್ತಲು ಪರಿಯೆ ಗಾಳಿಹಿಡಿದು, ಅಳ್ಳಂಕಗೊಂಡು ಹೊಗಲು ಬಾರದ ಇಟ್ಟೆಡೆಯೊಳ್ ಎಡಬಲನ ಆರೈವುತ, ಸುಳ್ಳಿದ್ದ ಬಾಲ, ಸಿಗುರೆದ್ದ ರೋಮ, ಕೆದರಿ ಮೆಳ್ಳಿಸುವ ಕಣ್, ದಾಡೆಗಳಿಂದ ಕಿಡಿಯುದುರೆ, ಬೇಂಟೆಕಾರರೊಳಗೆ ಬೀದಿವರಿವುದು. ಇಕ್ಕೆಲದ ಕುನ್ನಿಗಳು ಮಿಡುಕಲೀಯದೆ ಮೃಗವ ಮುಕ್ಕುರಿಕ್ಕಲು, ಕೆಲಬಲನ ನೋಡಿ, ದಾಡೆಯಿಂ ಸೊಕ್ಕಿ ನಲಿಯುತ್ತ ಉಬ್ಬುತ್ತ ಬರುವುದು. ಕೆರಳಿದ ಶಬರರು ಇಕ್ಕಿಕ್ಕು ಕಲ್ಲಲಿ, ಇಟ್ಟಿಯಲಿ ಇರಿಯೊ, ಸಬಳದಿ ಹೊಕ್ಕು ಮೊನೆಗಾಣುವಂತೆ ಇರಿ, ದಾಡೆಯಮುರಿ, ಬಡಿ ಇಕ್ಕೆಯನು ಹೊಗಗೊಡದಿರು ಎಕ್ಕಲನನು ಎನುತ ಬೊಬ್ಬಿಕ್ಕಿ ಸರಳ ಸುರಿವರು. ಕಣ್ಣ ಇರಿ, ಕೇಸರವ ಸುಡುಬಿಡದೆ, ಖಂಡವ ಸಣ್ಣಗಡಿಯಲಿ ನಾಯ್, ಮೂಳೆಯನು ಮೋದು, ತಣ್ಣನೆ ತಣಿಯ ತೊಡೆಯಡಗನ್ ಎನುತ ಬೇಡರು ಉರವಣಿಸಿ ನುಗ್ಗುವರು. ಬಸುರಬಗಿ, ಉಗಿ



ಕರುಳ, ಸುಗಿ ಚರ್ಮವನು, ಕೊರಳ ಬೆಸುಗೆಯ ಬಿಡಿಸು, ಎಲುಬಮುರಿ, ಮೋದು ಮೂಳೆಯನು, ಬಿಸಿನೆತ್ತರ ಕುಡಿ ಎನುತ ಮುಕ್ಕುರಿಕ್ಕುವರು.

ಹಂದಿ ಕಡು ಬಳಲಿ ಕಣ್ಣು ಕೆಂಪಡರಲು, ಉಸುರಿಕ್ಕಿ, ಮೊಗಜಡಿದು, ಕಟವಾಯ್ ಒಸರ್ವ ನೊರೆ, ತೇಂಕುವಳ್ಳೆ ಬಿಡದೆ ಅಂಡುಗೊಂಡು, ಮುಸುಡು ನೆಗಹಿ, ರೊಪ್ಪ ಮಲಗಲು ಇಚ್ಛಿಸುವುದು. ಕಡೆಗೆ ದಣಿದು ತಲೆಯೆತ್ತಿ ಮೂಗರಳುತ, ಉಸುರಿಕ್ಕುತ, ಒಲೆಯತ್ತ ಮಲೆಯುತ್ತ, ಕುತ್ತುರಿಂಗೆ ಒಸೆದು ಬರಲು ಅದರೊಳಗೆ ಹೆದರಿ ಅಡಗಿದ್ದ ಓರ್ವ ಬೇಡನ ಸ್ಥಿತಿಯನ್ನು ಬಣ್ಣಿಸುವುದೆಂತು! ಬಿಟ್ಟ ತಲೆ, ಗಿಡುಹಿಡಿದು ಕಳೆದುಡುಗೆ, ಕಾಡ ಮುಳ್ಳುನಟ್ಟು ಕುಂಟುವ ಪಾದ, ಬೆನ್ನ ಬಿಗುಹಳಿದು ಎಳಲ್ವ ಮೊಟ್ಟೆಗೂಳು, ಎಡಹಿ ಕೆಡೆಯೊಡೆದ ಮೊಳಕಾಲ್, ತೇಂಕುವಳ್ಳೆಗಳಿಂದ ಕೆಟ್ಟೋಡುವನು. ಯಾರಾದರು ಅವನ ಕಂಡು ಇದಿರಡ್ಡಗಟ್ಟಿ ಏನೆಂದು ಕೇಳಿದರೆ, 'ಹುಹುಹು ಹುಲಿಯಲ್ಲ ಹಂದಿಯರೆಯಟ್ಟಿ ಬರುತಿರ್ದುದು' ಎನ್ನುವನು.

**ಕಾಡ್ಗಿಚ್ಚು**

ಬೇಸಿಗೆ ಸಮಯದಲ್ಲಿ ಕಾಡಿಗೆ ಬೆಂಕಿ ಬೀಳುವುದು ಸಾಮಾನ್ಯ. ದಾವಾಗ್ನಿ ಹತ್ತಿಕೊಂಡು ಸುತ್ತ ಮುತ್ತಿದರೆ, ಹೆಡೆಬೇವ ಸರ್ಪ, ಬರಿ ಬೇವ ಸಾರಂಗ, ಕೊರಳೆಡೆ ಬೇವ ಸಿಂಹ, ತಲೆ ಬೇವ ಹುಲಿ, ಕಿವಿಬೇವ ಕಡವು, ಕಾಲ್ಬೇವ ಮರೆ, ತುಟಿಬೇವ ಜಂಬುಕವೃಕ, ಬಸುರ್ ಬೇವ ಶಶಕ, ತೊಡೆಬೇವ ಹುಲ್ಲೆ, ಬಾಲಂ ಬೇವ ಕೋಣ, ಹೆದ್ದೊಡೆ ಬೇವ ಹಂದಿ, ಪಚ್ಚಳಬೇವ ಸೀಳ್ನಾಯ್ ಇತ್ಯಾದಿ ಕಂಗೆಟ್ಟು ದೆಸೆಗೆಟ್ಟು ಕವಿವುವು. ಇಂಥ ಕಿಚ್ಚಿಗೆ ನರಮನುಷ್ಯರೇನಾದರೂ ತಪ್ಪಿ ಸಿಕ್ಕಿಬಿದ್ದರೆ ಕಡಗಿ ಕರ್ಬೊಗೆ ಸುತ್ತಿ, ದಳ್ಳುರಿಗಳಲೆದು, ಕೆಂಗಿಡಿ ಗೆದರಿ, ಕೆಂಡಂಗಳ್ ಅಡಸಿ ಸುಡೆ, ಮಿಡುಮಿಡನೆ ಮಿಡುಕಿ ಬಾಯ್ಬಿಟ್ಟೊರಲಿ, ಕೆಡೆದು ಒಡಲು ಮಡಿದು ಕೈಕಾಲು ಬೆಂದು ಸುಕ್ಕಿಸುಗಿದು ಅಸುನೀಗಬೇಕಾಗುವುದು.

**ಕೆಲವು ಸಾಮಾಜಿಕ ಸಂಗತಿಗಳು**

ಮೃಗಯಾವಿಹಾರಗಳಿಗೆಂದು ಬರುವ ರಾಜಮಹಾರಾಜರ ಮನಸ್ಸಂತೋಷಕ್ಕಾಗಿ ಕಲಾವಿದೆಯರಾದ ಹೊಲತಿಯರು ನರ್ತನ ಗಾಯನವನ್ನು ಮಾಡುತ್ತಿದ್ದರು. ಮೆಚ್ಚಿದ ರಾಜ ವಸ್ತ್ರಾಭರಣಗಳನ್ನು ದಾನವಾಗಿ ಕೊಡುತ್ತಿದ್ದ.

ತಪ್ಪು ವರ್ಣಾಶ್ರಮ ಕಟ್ಟಳೆಗೆ ಚ್ಯುತಿ ಬರುವುದೆಂಬ ಕಾರಣವನ್ನು ಒಡ್ಡಿದ ಊಳಿಗಮಾನ್ಯ ದೊರೆಗಳು ಹೊಲತಿಯರನ್ನು ವಿವಾಹವಾಗುತ್ತಿರಲಿಲ್ಲ. ಮುತ್ತಿನ ಸತ್ತಿಗೆ ರಾಜಲಾಂಛನವಾಗಿತ್ತು. ಹೊಲಯರು ಅದರ ನೆರಳಿಗೆ ಸುಳಿಯಬಾರದಷ್ಟು ಆ ಕೊಡೆ ಪವಿತ್ರವಾಗಿತ್ತು. ರಾಜನಾದವನು ಕನಸಿನಲ್ಲಿ ಕಾಗೆಯನ್ನು ಕಂಡರೆ ಅಲ್ಪ ಸಂಕಟಕ್ಕೆ ಗುರಿಯಾಗುತ್ತಾನೆಂದೂ ಮತ್ತು ಆತ ಪರ್ವತಾಗ್ರದ ಗೃಹವನ್ನು ಹೊಕ್ಕಂತೆ ಕನಸು ಕಂಡರೆ ಸ್ವಲ್ಪದರದಲ್ಲಿಯೇ ಮಹಾಪದವಿಯನ್ನು ಹೊಂದುತ್ತಾನೆಂದೂ ಕನಸಿನ ಫಲವನ್ನು ಗ್ರಹಿಸುತ್ತಿದ್ದರು. ನಾಯ ಮೊಲೆ ಹಾಲು, ಪ್ರೇತವನದ ಹೂವು ವರ್ಜಿತವಾಗಿದ್ದವು. ಗಂಗಾನದಿಯ ನೀರು ಪವಿತ್ರವೆಂದೂ ಗಂಗಾಸ್ನಾನ ಮಾಡಿದವರ ಪಾಪ ಪರಿಹಾರವಾಗುವುದೆಂದೂ ಜನರಲ್ಲಿ ನಂಬಿಕೆ ಇತ್ತು. ಜನರು ಕಷ್ಟ ಕಾಲದಲ್ಲಿ 'ತೃಣವ ತುಡುಕಿ' ಅಧಿಕ ಬಲರಲ್ಲಿ ಮೊರೆಯಿಡುತ್ತಿದ್ದರು. ಕಾಶೀಕ್ಷೇತ್ರ ಪವಿತ್ರವಾಗಿದ್ದು ಅಲ್ಲಿ ಮೃತ್ಯು ಹೊಂದಿದರೆ ಸದ್ಗತಿ ದೊರೆಯುವುದೆಂದೂ ನಂಬಿದ್ದರು. ಅದು ಯಾರ ಆಡಳಿತಕ್ಕೂ ಒಳಪಡದೆ ದೇವರ ರಾಜ್ಯವಾಗಿತ್ತು. ತಿರುಪೆ ಎತ್ತುವುದು, ಭಿಕ್ಷೆ ಬೇಡುವುದು ಅವಮಾನಕರವಾಗಿತ್ತು. ಕೆಲವರಿಗಾದರೂ ಸತಿ ಸುತರನ್ನು ಮಾರುವ ಪರಿಸ್ಥಿತಿ ಇತ್ತು. ಮನುಷ್ಯರನ್ನೂ ಪ್ರಾಣಿಗಳೆಂಬಂತೆ ಕೊಳ್ಳುವ ಧನಿಕರಿದ್ದರು. ಭಾಷೆಗೆ ತಪ್ಪಿದರೆ ತಲೆಯೋಡಿನಲ್ಲಿ ಹೆಂಡ ಕುಡಿಯುತ್ತ ಬೆತ್ತಲೆ ತೆಂಕ ಮುಖನಾಗಿ ಹೋಗುತ್ತೇನೆಂದು ಶಪಥ ಹಿಡಿಯುತ್ತಿದ್ದರು.

ಮಾರಲ್ಪಡುವವರ ತಲೆಗೆ ಹುಲ್ಲು ಕಟ್ಟಿ ಕೊಳ್ಳುವವರಿದ್ದರೆ ಬನ್ನಿ ಎಂದು ಊರಿನ ಬೀದಿ ಬೀದಿಗಳಲ್ಲಿ ಸಾರುತ್ತಿದ್ದರು. ಸಾಲ ವಸೂಲಿಗಾಗಿ ಮಧ್ಯವರ್ತಿಗಳನ್ನು ನೇಮಿಸಲಾಗುತ್ತಿತ್ತು. ವಸೂಲಿ ಅವಧಿಯ ತುಟ್ಟಿ ಭತ್ಯವನ್ನು ಸಾಲಗಾರನೇ ನೀಡಬೇಕಾಗಿತ್ತು. (ಹರಿಶ್ಚಂದ್ರ ವಿಶ್ವಾಮಿತ್ರನ ಸಾಲಕ್ಕಾಗಿ ತನ್ನನ್ನೂ, ವಸೂಲಿಗ ನಕ್ಷತ್ರಕನ ತುಟ್ಟಿ ಭತ್ಯಕ್ಕಾಗಿ ತನ್ನ ಸತಿಸುತರನ್ನೂ ಮಾರಿಕೊಂಡ) ವಿಪ್ರರು ತಮ್ಮ ಮನೆಗೆಲಸಕ್ಕೆ ಹೆಂಗಸರನ್ನೂ, ಕಾಡಿನಿಂದ ಹುಲ್ಲು ಹುಳ್ಳಿ ತರುವುದಕ್ಕಾಗಿ ಬಾಲಕರನ್ನೂ ನೇಮಿಸಿಕೊಳ್ಳುತ್ತಿದ್ದರು. ಮನೆಗೆಲಸದಾಕೆಯನ್ನು 'ಸವುಡಿದೊತ್ತು' ಎಂದು ಕರೆಯುತ್ತಿದ್ದರು.

ಸ್ಮಶಾನದ ಒಡೆಯರು ಹೊಲೆಯರು. ಪ್ರಧಾನ ಕಾವಲುಗಾರ ತನ್ನ ಸಹಾಯಕ್ಕೆ ಅಧೀನ ಕಾವಲುಗಾರರನ್ನು ನೇಮಿಸಿಕೊಳ್ಳುತ್ತಿದ್ದ. ಪಿಡಿದ ಸಂಬಳಿಗೋಲು, ಕಾರೊಡಲು, ಕೆಂಗಣ್ಣು, ಕುಡಿದು ಕೊಬ್ಬಿದ ಬಸುರು, ದಡದಡಿಸಿ ತರಹರಿಸುವ



ಅಡಿ, ಕೆದರಿದ ತಲೆ, ಅಡಸಿ ಸುತ್ತಿದ ಮುಪ್ಪುರಿಯ ಬಾರಿ ಕಡ್ಡಣಿಗೆ, ಬಿಡದೆ ಥರ್ರನೆ ತೇಗುವ ಸ್ಮಶಾನದ ಒಡೆಯರಾದವರು ನೆರದ ಜನರನ್ನು ಬಯ್ಯುವರು. ಇವರು ತಮ್ಮ ವ್ಯವಹಾರವನ್ನು ಹಡಪಿಗನಿಂದ ತೂಗಿಸಿಕೊಳ್ಳುತ್ತಿದ್ದರು.

ಊರ ಹೊರಗೆ ಹೊಲಗೇರಿಗಳು. ಅವು ಹೊರಗೆ ಹಾಸಿದ ಹಸಿಯ ತೊಗಲ ಹೊದೆಗಳು, ಮಾಣದೆ ಒರಲಿ ಕೂಗಿಡುವ ಪ್ರಾಣಿಗಳು, ಕೊರೆವ ಕೊಚ್ಚುವ ತರಿವ ಮುರಿವ ಕಡಿವ ಸೀಳ್ವ ಹರಹುವ ಹಿಂಡುವ ಕರುಳಹಿಳಿಲ ತೋರಣದ ಚಲ್ಲಿರಿದ ಗೋಡೆಗಳ ರಕುತದಿಂದ ಹೇಸಿಗೆ ಹುಟ್ಟಿಸುವಂತಿರುತ್ತಿದ್ದವು.

ಸುಡುಗಾಡಿನ ನೆಲದ ತೆರ ಒಂದು ಹಾಗ ಹೆಣದುಡಿಗೆ ಸ್ಮಶಾನದ ಒಡಯನಿಗೂ ಹೆಣದಕ್ಕಿ ಕಾವಲುಗಾರನಿಗೂ ಸೇರುತ್ತಿತ್ತು. ಒಡೆಯನು ಸಂಬಳಿ ಗೋಲಿನ ಮುದ್ರೆಯನ್ನು ಕೊಟ್ಟು ಸ್ಮಶಾನಕ್ಕೆ ಕಾವಲುಗಾರನನ್ನು ನೇಮಿಸುತ್ತಿದ್ದನು. ಬೀದಿಯಲ್ಲಿ ಹೋಗುವ ಆ ಹೊಲೆಯನು ತನ್ನ ಹೆಸರು ಹೇಳುತ್ತ ಸಾರುತ್ತ ಮೈ ಕುರುಹ ತೋರುತ್ತ, ಎಯ್ದೆ ಜನ ಅರಿಯುವಂತೆ ಹರೆಯ ಮೊಳಗಿಸುತ, ಕೈಯಲ್ಲಿ ಕಂಕರಿ ಕೋಲು ಹಿಡಿದು 'ಸಂಬಳಿ, ಸಂಬಳಿ' ಎಂದು ಬಾರಿಸುತ ಸಾರುತ್ತ ಹೋಗಬೇಕಾಗಿತ್ತು. ಸುಡುಗಾಡಿನ ನಿಯಮಕ್ಕನುಗುಣವಾಗಿ ನೆಲದೆರೆ, ಹೆಣದುಡುಗೆ, ತಲೆಯಕ್ಕಿಯನ್ನು ಕೊಡದೆ ಹೆಣ ಸುಡಬಾರದೆಂದು ಬೀದಿ ಬೀದಿಗಳಲ್ಲಿ ಸಾರುತ್ತಿದ್ದರು. ಬಡವರ ಮನೆಯಲ್ಲಿ ಹೆಣ ಬಿದ್ದರೆ ಸುಡುವುದಕ್ಕೂ ಗತಿ ಇಲ್ಲದ ಪರಿಸ್ಥಿತಿ ಇರುತ್ತಿತ್ತು.

ಸುಡುಗಾಡುಗಳು ಕಣ್ಣಿಗೆ ಭಯ ಹುಟ್ಟಿಸುವಂತೆ ಇರುವ ಹೆಣದ ಹಿಂಡುಗಳಿಂದಲೂ ಮೂಗಿಗೆ ಹಗೆಯನೆ ಕವಿವ ಕರ್ಬೊಗೆಯ ಕೌರಿನಿಂದಲೂ ಕರ್ಣಂಗಳಿಗೆ ತಗುಲುವ ಗೋಳಿನಿಂದಲೂ ಜನದ ಜಂಗುಳಿಯಿಂದಲೂ ಕಾಲಿಡಲು ಅಸಾಧ್ಯವೆಂಬಂತೆ ಗಿಜುಗುಡುತ್ತಿದ್ದವು. ಸುಡುಗಾಡಿನ ನಟ್ಟನಡುವೆ ಉರಿದ ಸಿದಿಗೆ ಮರಗಳ ಕರುಕಾದ ಕರಿಕೊಳ್ಳಿಗಳಿಂದಲೂ ಸಿದಿಗೆಯ ನುಲಿಯಿಂದಲೂ ಚಪ್ಪರವನಿಕ್ಕಿ, ಅದರ ಮೇಲೊಂದು ತಲೆಗುಡಿಸಿಲನ್ನು ಕಟ್ಟಿಕೊಂಡು ಹಗಲಿರುಳು ಕಾವಲುಗಾರ ಕಾಯುತ್ತಿದ್ದನು. ದನಗಳು ತಿಂದು ಸಗಣಿ ಹಾಕಿದ ಅಕ್ಕಿಯನ್ನು ತೊಳೆದು ತಿನ್ನುವ ನಿರ್ಗತಿಕರೂ ಇದ್ದರು. (ಶರಣಕುಮಾರ ಅಂಬಾಳೆಯವರ 'ಅಕ್ರಮಸಂತಾನ'ವೆಂಬ ಆತ್ಮಕಥನದಲ್ಲಿ ಈಚೆಗೆ ಇಂಥದೇ ಪ್ರಸಂಗ ಉಕ್ತವಾಗಿದೆ)

ಮನೆಕೆಲಸ ಮಾಡುವ ದುಃಖಾರ್ತರಾದ ಹೆಣ್ಣುಮಕ್ಕಳ ಪಾಡಂತೂ ಹೇಳತೀರದು. ಒಡೆಯನತಿಕೋಪಿ, ಹೆಂಡತಿ ಮಹಾಮುರ್ಖೆ, ಮಗ ಕಡು ಧೂರ್ತ, ಸೊಸೆ ಅಧಿಕ ನಿಷ್ಠುರೆ, ಮನೆಗೆ ನಡೆವವರು ದುರ್ಜನರು, ನೆರೆಮನೆಯವರು ಮಿಥ್ಯವಾದಿಗಳು, ಪಶುಗಳು ಅಗಡು, ಸದಾ ತಪ್ಪ ಸಾಧಿಸುವ ಇಂಥವರ ಸಹವಾಸದಲ್ಲಿ ಆಳುಗಳಾದವರು ಸತ್ತು ಹುಟ್ಟುತ್ತಿದ್ದರು. ದುರ್ಮರಣಕ್ಕೆ ತುತ್ತಾದ ಶೂದ್ರರಿಗೆ ಸಂಸ್ಕಾರ ಮಾಡುವ ಅಗತ್ಯವಿಲ್ಲವೆಂದು ವಿಪ್ರರ ಅಭಿಪ್ರಾಯವಾಗಿತ್ತು.

ಹಾವು ಕಡಿದರೆ ವಿಷದ ಹೊಗೆ ಹೊಯ್ದು ಹಸುರಾದ ಮೈ, ಮೀರಿ ನೊರೆ ಒಸರ್ವಗಲ್ಲ, ಕಂದಿದ ಉಗುರ್ಗಳು ಅರೆದೆರೆದು ಅಗುರ್ವಿಸುವ ಕಣ್ಣು, ಎಳಲ್ದ ಗೋಣು, ಬರತ ಬಾಯಿಂದ ಆ ಹೆಣ ಕಾಣುತ್ತಿತ್ತು.

ತಾಳಿ ಪತಿವ್ರತೆಯರ ಪರಮ ಸಂಕೇತವಾಗಿತ್ತು. ತನ್ನ ತಾಳಿಯನ್ನು ಒತ್ತೆ ಇಟ್ಟಾದರೂ ತಾಯಂದಿರು ಮಕ್ಕಳ ಹೆಣವನ್ನು ಸಂಸ್ಕಾರ ಮಾಡುತ್ತಿದ್ದರು. ಒಮ್ಮೊಮ್ಮೆ ನೆಲದತೆರ ಬಾರದಿದ್ದರೆ ಹೆಣದ ಬಟ್ಟೆಯಾದರೂ ಸಿಕ್ಕಲಿ ಎಂದು ಕಾವಲುಗಾರ ಅದನ್ನೇ ಕಳಚಿಕೊಳ್ಳುತ್ತಿದ್ದ. ವಸ್ತ್ರವಡವೆಗಳ ಆಸೆಯಿಂದ ಹಸು ಮಕ್ಕಳನ್ನು ಕೊಲ್ಲುವ ಧೂರ್ತರಿದ್ದರು. ಅಂಥವರನ್ನು ಸ್ಮಶಾನಕ್ಕೆ ತಂದು ತಲೆಗಡಿಯಲಾಗುತ್ತಿತ್ತು.

**ಅಸ್ಪೃಶ್ಯತೆ**

ಸಮಾಜದಲ್ಲಿ ಅಸ್ಪೃಶ್ಯತೆಯ ಆಚರಣೆಯಿತ್ತು. ಇದನ್ನು ಕುರಿತು ಸಂವಾದ ಏರ್ಪಡಿಸುವ ಮೂಲಕ ಹರಿಶ್ಚಂದ್ರ ಕಾವ್ಯ ಕನ್ನಡ ಸಾಹಿತ್ಯದಲ್ಲಿ ಒಂದು ಮೈಲಿಗಲ್ಲಾಗಿದೆ. ವಚನಕಾರರಾಗಲೀ ಹರಿಹರನಾಗಲೀ ತೋರದ ದಿಟ್ಟತನವನ್ನು ತೋರಿದ ರಾಘವಾಂಕ ಹೊಲೆತನ ಎಂದರೇನು ಎಂಬುದನ್ನು ಕುರಿತು ಸಾಮಾಜಿಕವಾದ ಸಂವಾದಕ್ಕೆ ವೇದಿಕೆಯನ್ನು ಮಾಡಿಕೊಟ್ಟಿದ್ದಾನೆ. ಈ ಕಾರಣದಿಂದ ಈತ ಆಧುನಿಕ ಸಂದರ್ಭಕ್ಕೂ ಒಪ್ಪುವ ಶುದ್ಧ ಮಾನವತಾವಾದಿಯಾಗಿ ಕಂಡುಬರುತ್ತಾನೆ. ಹರಿಶ್ಚಂದ್ರ ಮಹಾರಾಜನು ಕೊಟ್ಟ ವಸ್ತ್ರಾಭರಣಗಳನ್ನು ಸವಿನಯವಾಗಿ ನಿರಾಕರಿಸಿದ ಹೊಲತಿಯರು ನಮ್ಮನ್ನು ಮದುವೆ ಮಾಡಿಕೊ ಎಂದು ಪ್ರಾರ್ಥಿಸುತ್ತಾರೆ. ಅನೇಕ ಮಂದಿ ಅಂತಃಪುರ ಸ್ತ್ರೀಯರಿಂದ ಕೂಡಿದ್ದ ಈ ಊಳಿಗಮಾನ್ಯ ದೊರೆ ತಾನು ಏಕಪತ್ನೀ ವ್ರತಸ್ತನೆಂದೂ ನಿಮಗಾಗಿ ತನ್ನ ಕುಲವನ್ನು



ಕೆಡಿಸಿಕೊಳ್ಳಲಾರೆನೆಂದೂ ಹೇಳಿ ತಪ್ಪಿಸಿಕೊಳ್ಳಲು ಯತ್ನಿಸುತ್ತಾನೆ. ಆದರೆ ದಿಟ್ಟೆಯರಾದ ಆ ಸ್ತ್ರೀಯರು ಕಿವಿಕಣ್ಣು ಮೂಗು ಬಾಯಿಗಳಿಗೆ ಇಲ್ಲದ ಹೊಲೆತನ ಚರ್ಮಕ್ಕೆ ಮಾತ್ರ ಅನ್ವಯಿಸುವುದೊ ಎಂದು ರಾಜನ ಬಾಯಿ ಕಟ್ಟಿಬಿಡುತ್ತಾರೆ. ರಾಜನೊಬ್ಬನ ಎದುರಿಗೆ ಬಹಿರಂಗವಾಗಿ ಹೀಗೆ ಘಟ್ಟಿಸಿ ನಿಂತು ಮಾತನಾಡಿದ್ದು ಕೆಳವರ್ಗದವರ ಸಾಂಸ್ಕೃತಿಕ ಚರಿತೆಯಲ್ಲಿ ಮಹತ್ವದ ಅಂಶವಾಗಿದೆ ಎಂದು ಡಾ.ಕೆ. ರಂಗಾರೆಡ್ಡಿಯವರು ಗುರ್ತಿಸಿರುವುದು ಸಮಂಜಯವಾಗಿದೆ. (ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ - ೧೪೮). ಪ್ರಭುತ್ವದ ಎದುರಿಗೆ ಮುಖಾಮುಖಿಯಾಗಿ ನಿಂತು ತರ್ಕಬದ್ಧವಾಗಿ ವಾದಿಸಿ ರಾಜನನ್ನು ಮಾತಿಲಿಯನ್ನಾಗಿ ಮಾಡುವ ಮಾತಂಗ ಕನ್ನಿಕೆಯರು ಕಾವ್ಯದ ನಿಜವಾದ ನಾಯಕಿಯರು. ಹೆಣ್ಣು ಅದರಲ್ಲೂ ಹೊಲತಿಯರು ಪುರುಷ ನಿರ್ಮಿತ ಸಾಮಾಜಿಕ ಚೌಕಟ್ಟನ್ನು ಕುಟ್ಟಿ ಪುಡಿಮಾಡುವ ಭರದಲ್ಲಿ ನಿಂತಿರುವುದು ಅತಿಶಯವೆನಿಸಿದೆ. **ಹೀಗೆ ಹೊಲೆಯರಲ್ಲಿ ಉಂಟಾದ ಅಥವಾ ಉಂಟಾಗಬೇಕಾದ ಜಾಗೃತಿಯನ್ನು ರಾಘವಾಂಕ ಸೂಚಿಸಿರುವುದು ಸಮಕಾಲೀನ ಪ್ರಗತಿಪರ ದೃಷ್ಟಿಯಾಗಿದೆ.** ಹರಿಹರನಂತೆ ಭಕ್ತ ಭವಿ ಎಂಬ ತಾರತಮ್ಯವನ್ನು ಎಣಿಸದೆ ಅವನ ಶಿಷ್ಯ ಅಸ್ಪೃಶ್ಯತೆಯ ಆಚರಣೆಯನ್ನು ತರ್ಕಬದ್ಧವಾಗಿ ಹೀಗಳೆಯುತ್ತಾನೆ.

ಇದೇ ಮಾತು ವೀರಬಾಹುವಿನ ಪ್ರಸಂಗಕ್ಕೂ ಅನ್ವಯವಾಗುತ್ತದೆ. ವರ್ಣಾಶ್ರಮದ ಚೌಕಟ್ಟನ್ನು ಪಲ್ಲಟಿಸಿ ಹೊಲಯನಿಗೆ ಕ್ಷತ್ರಿಯನು ಆಳಾಗುವಂತೆ ಏರ್ಪಡಿಸುವುದು ಸಾಮಾನ್ಯ ಸಂಗತಿಯೇನಲ್ಲ. 'ಅತಿ ಹುಸಿವ ಯತಿ ಹೊಲಯ, ಹುಸಿಯದಿಹ ಹೊಲೆಯನುನ್ನತ ಯತಿವರನು' ಎಂದು ವರ್ಣಪದ್ಧತಿಯನ್ನು ಅಲ್ಲಾಡಿಸಿ ಹೊಸ ನೈತಿಕ ಮೌಲ್ಯವನ್ನು ಎತ್ತಿ ಹಿಡಿಯುತ್ತಾನೆ. ಈ ದೃಷ್ಟಿಯಿಂದ ರಾಘವಾಂಕ ತನ್ನ ಕಾವ್ಯವನ್ನು ಕುರಿತು 'ಕೇಳ್ದು ಜನ ಬದುಕಬೇಕೆಂದು' ಹೇಳಿದ್ದು ಔಚಿತ್ಯಪೂರ್ಣವಾದ ಮಾತಾಗಿದೆ.

ಸಾಮಾಜಿಕ ಚಿತ್ರಣದ ದೃಷ್ಟಿಯಿಂದ ರಾಘವಾಂಕನ ಸಿದ್ಧರಾಮ ಪುರಾಣ ಹಾಗೂ ಸೋಮನಾಥ ಚರಿತೆಗಳು ಹರಿಶ್ಚಂದ್ರ ಕಾವ್ಯದಷ್ಟು ವೈಶಿಷ್ಟ್ಯಪೂರ್ಣವಾಗಿಲ್ಲ. ಇವುಗಳಲ್ಲಿಯೂ ಸಂಪ್ರದಾಯದಂತೆ ಸೂಳೆಗೇರಿ ಹಾಗೂ ಬೇಟೆಯ ಚಿತ್ರಗಳು ವರ್ಣಿಸಲ್ಪಟ್ಟಿವೆ. ಆದರೆ ಈ ವರ್ಣನೆಗಳಲ್ಲಿ ಕೆಲವಾರು ಪದ್ಯಗಳು ಹರಿಶ್ಚಂದ್ರ

ಕಾವ್ಯದ ಯಥಾವತ್ ನಕಲೊ ಎಂಬಂತಿವೆ. ಆದ ಕಾರಣ ಈ ಕಾವ್ಯಗಳಲ್ಲಿ ಬರುವ ಬೇಟೆ, ಸೂಳೆಗೇರಿ ಮುಂತಾದ ವರ್ಣನೆಗಳನ್ನು ಪ್ರಸ್ತಾಪಿಸಿಲ್ಲ. ಆದರೂ ಸೋಮನಾಥ ಚಾರಿತ್ರದಲ್ಲಿ ವರ್ಣಿಸಿರುವ ಪುಳಿಂದರ ಊಟೋಪಚಾರ, ಅವರ ಸ್ವಚ್ಛಂದದ ಏಕಾಂತ ವಿಹಾರ ಮುಂತಾದ ಸಂಗತಿಗಳು ಹರಿಶ್ಚಂದ್ರ ಕಾವ್ಯಕ್ಕಿಂತಲೂ ಭಿನ್ನವಾಗಿದ್ದು ಗಮನಾರ್ಹವಾಗಿವೆ. ಇದೇ ಸಂದರ್ಭದಲ್ಲಿ ಸಿದ್ಧರಾಮ ಚಾರಿತ್ರ್ಯದ ಬಿಲ್ಲೇಶ ಬೊಮ್ಮಯ್ಯನ ಪ್ರಸಂಗವೂ ಉಲ್ಲೇಖನಾರ್ಹವಾದುದು. ನಮ್ಮ ಜನಮನದಲ್ಲಿ ಗಾಢವಾಗಿ ಬೇರೂರಿರುವ ನರಕದ ಚಿತ್ರವನ್ನು ಕುತೂಹಲಕ್ಕಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ:

ಬಿಲ್ಲೇಶ ಬೊಮ್ಮಯ್ಯನೆಂಬುವವನು ತನ್ನ ದಾಯಾದಿಗಳಲ್ಲಿ ಮಾಡಿದ ಸಾಲವನ್ನು ತೀರಸಲಾರದೆ, ಗುರು ಸಿದ್ಧರಾಮನ ಆಜ್ಞೆಯನ್ನು ಉಲ್ಲಂಘಿಸಿ, ಋಣಭಾರದಿಂದ ನರಕಕ್ಕೆ ಬಿದ್ದನು. ಅಲ್ಲಿ ಅವನಿಗೆ ಜ್ಞಾನೋದಯವಾಗಲು ಗುರುವಿನ ನಾಮಸ್ಮರಣೆಗೆ ತೊಡಗುವನು. ಕರುಣಾಳು ಸಿದ್ಧರಾಮನಿಗೆ ಶಿಷ್ಯನನ್ನು ಉದ್ಧರಿಸುವ ಮನಸ್ಸಾಗಿ, ಬೊಮ್ಮಯ್ಯನನ್ನು ನರಕದಿಂದ ಪಾರುಮಾಡಲು ಬಯಸುವನು. ಆದರೆ ಬೊಮ್ಮಯ್ಯನ ಉದ್ಧಾರ ಅಷ್ಟು ಸುಲಭವಾಗಿರಲಿಲ್ಲ. ನಾರಕಿಗಳೆಲ್ಲ ಅವನ ಕಾಲು ಹಿಡಿದು ನಮ್ಮನ್ನೂ ಉದ್ಧರಿಸಿ ಎಂದು ಗೋಳಿಡುತ್ತಿರಲಾಗಿ ಶಿವನ ಅನುಮತಿ ಪಡೆದು ಸಿದ್ಧರಾಮ ಬೊಮ್ಮಯ್ಯನ ಸಮೇತ ಎಲ್ಲ ನಾರಕಿಗಳನ್ನೂ ಅಲ್ಲಿಂದ ಪಾರುಮಾಡಿದನು. ಮನುಷ್ಯರು ಇಂಥ ನರಕ ಭಾಜನರಾಗಲು ಅವರು ಮಾಡಿದ ತಪ್ಪುಗಳೇನು, ಅಂಥವರಿಗೆ ಯಾವ ಬಗೆಯ ಶಿಕ್ಷೆ ಕಾದಿದೆ ಎಂಬುದನ್ನು ರಾಘವಾಂಕ ಕವಿ ಸಚಿತ್ರವಾಗಿ, ಸವರ್ಣವಾಗಿ ತನ್ನ ಕಾವ್ಯದಲ್ಲಿ ನಿರೂಪಿಸುತ್ತಾನೆ. ಆ ಸುಳಿವ ಶಾಸನದ ಸಂಕ್ಷಿಪ್ತ ರೂಪವನ್ನು ಇಲ್ಲಿ ಕೊಡಲಾಗಿದೆ:

ಪರನಿಂದೆ, ವಿಶ್ವಾಸ ಘಾತಕತನ, ಸುರಾಪಾನ, ಗುರುಕಲ್ಪಕಂ, ಪ್ರಾಣಿವಧೆ, ಸುವರ್ಣಸ್ತೇಯ, ಪರದಾರ, ಗೋಹತ್ಯೆ, ಮಿತ್ರವಂಚನೆ, ಅಗಮ್ಯಾಗಮನ, ನೀಚಸಂಗ, ಅಪವಾದ, ಅಭಕ್ಷ್ಯಭಕ್ಷಣ, ದುರಾಚರಣೆ, ನಿರ್ದೈವತೆ, ಕೃತಘ್ನತೆ, ಬ್ರಹ್ಮವಧೆ, ಹರಭಕ್ತವೈರ, ಮಹೇಶ್ವರ ಪ್ರಹಸನದಿಂದ ನರಕದಂಡನೆ-ಯಾಗುವುದುಂಟು.



ಅರಿದರಿದು ಪಾಪ ಮಾಡಿದ ಅಂಥ ಅಧಮರನ್ನು ಕಡೆ, ಇರಿ, ಹೊಡೆ, ಕಡೆ, ಕೆತ್ತು, ಕೀಸು, ಕೊರೆ, ಕುಸುರಿದರಿ, ಕಾಸು, ಚುಚ್ಚು, ಸುಡು, ಹಿಂಡಿಹಿಳಿಯಿಕ್ಕು, ಹರಹು ಎಂದೆಂಬ ಘಲ್ಲಣೆಗಳಿಂದ ಹಿಂಸಿಸುವರು. ಆಗ ನರಕಿಗಳು ಮರುಗಿ ಮೊರೆಯಿಡುವರು, ಒರಲಿ ಬಾಯ್ಬಿಡುವರು, ನರಳಿ ಚೀರುವರು. ಇಂಥ ನರಕಿಗಳ ನಾನಾರವಂಗಳಿಂದ ನರಕವದು ಅದ್ಭುತವೆನಿಸುವುದು.

ಕೊಂಕು ಸರಳಿಂದ ಎಸೆವ, ಚಕ್ರದಿಂದ ಇಡುವ, ಕುರುಪಿಂದ ಕೆರೆವ, ಕಾದಂಬಿನಿಂದ ಎಸೆವ, ಹೆಗ್ಗುಂಚಿಯಿಂದ ಕೊಯ್ವ, ಕೊಡಲಿಯಿಂದ ತರಿವ, ಖಡ್ಗದಿಂದ ಹೊಡೆವ, ಹೇರೀಟಿಯಿಂದ ಇರಿವ, ಅಂಕುಶದಿಂದ ಎತ್ತುವ, ಅಲಗಿನಿಂದ ಇರಿವ, ಕತ್ತರಿಯಿಂದ ಕತ್ತರಿಸುವ, ಬಾಚಿಯೊಳು ಕೆತ್ತುವ, ಕತ್ತಿಯಿಂದ ಕಡಿವ, ಗರಗಸದಿಂದ ಕೊಯ್ವ ರೌರವದ ನರಕವು ಭಯಂಕರವಾದುದು. ಸೆಳೆವ, ಸೇದುವ, ಬೀಸುವ, ಒಗೆವ, ಕುಸುರುವ, ಹಿಂಡಿಹಿಳಿವ, ಕೆಡಹುವ, ಹೊರಜಿ ಹೊಸೆವ, ತಿರುಹುವ, ಮುರುಹುವ, ನೇರುಬಲೆ ತೆಗೆವ, ಕಾಸುವ, ಕೆರೆವ, ಸುಡುವ, ಸಂಧಿಸಿ ಚುಚ್ಚುವ, ಕುಳಿಯೊಳಿಕ್ಕುವ, ಮುರುಡಿ ಮುಚ್ಚಿ ಮುಗ್ಗುವ, ಮುಳಿವ ಬಗೆಗಳಿವೆ. ಹೋಳ್ವ, ಸೀಳ್ವ, ಆರಿಸುವ, ನೆರೆಸುಲಿವ, ಖಳರ ಕಳಕಳದ ಕೋಲಾಹಳದಿಂದ ಆ ನರಕ ಅತಿ ಭಯಂಕರವಾಗಿದ್ದಿತು.

ಅಲ್ಲಿ ಕಾಹೇರಿ ಕೆಂಗಲಿಪ ಕರ್ಬೊನ್ನ ಪುತ್ತಳಿಯನು ನೇಹದಿಂದ ನಿನ್ನ ಮನದೋಪಳೆಂದು ಅಪ್ಪಿಸುವರು ಆಹಾ ಎಂದಳುಕಿದರೆ ಮುನ್ನಪರಸತಿ ಪುರುಷರಿವರೆಂದು ಕಾಣುವುದು. ಲೋಹರಸವನು ಮದ್ಯ ಇದೆಂದು ಎರೆಯಲು, ಅದು ದೇಹವನು ಸುಡುತ ಒಳಗಿಳಿಯೆ ಅವರು ಚೀರುವರು. ಸುಖಬೇಹುದೇ ಎಂದು ಕಾದಕಗ್ಗಲ್ಲೆ ಫಲವೆಂದು ಅವುಗಳನ್ನು ತಂದೀವರು. ಪರಧನವನು ಚೋರಕೃತ್ಯದಿ ಕೊಂಡು ಪರಿಪರಿಯ ವಸ್ತ್ರಾಭರಣ ವಾಹನದಿಂದ ಆದರಿಸಿ ಸುಖಿಸಿದ ಸುಖಿಯ ಕಂಡು ಮಿಗೆ ಮುಡಿಸುವರು, ತೊಡಿಸುವರು, ಮುಡಿಯಿಸುವರು, ಹಿರಿದಪ್ಪ ಉರಿಯ ನಾಲಗೆಯ ವಸ್ತ್ರವನು ಕಾದ ಸರಪಳಿಯ ಕಟಕ ಮುದ್ರಿಕೆ ಮಂಡನಗಳನು ಇವು ಬಿರಿಮುಗುಳ್ಗಳು, ಒಳ್ಳೆ ಅರಲ್ಗಳು ಎಂದು ಲೋಗರ ಒಡವೆ ಚೋರರಿಗೆ ಅಲ್ಲಿ ಕೆಂಡವ ಮುಡಿಸುವರು. ಹೀಗೆ ಪ್ರಾಚೀನ ಸಾಹಿತ್ಯದಲ್ಲಿ ನರಕವರ್ಣನೆಗಳನ್ನು ಕಲ್ಪಿಸಿ ಹೇಳಿ ಲೋಕದ ಜನ ತಪ್ಪು ದಾರಿ ಹಿಡಿಯದಂತೆ

ನೋಡಿಕೊಳ್ಳುತ್ತಿದ್ದರು. ಇಲ್ಲಿ ಗಮನಾರ್ಹವಾದ ಒಂದು ವಿಚಾರವೆಂದರೆ ಈ ನಾರಕಿಗಳಲ್ಲಿ ಕೇವಲ ಗಂಡಸರೇ ಇರುವುದು. ಪಾಪ! ಹೆಂಗಸರಿಗೆ ಭೂಲೋಕವನ್ನೇ ನರಕವನ್ನಾಗಿ ಇವರು ಮಾಡಿದ್ದ ಕಾರಣ ಅವರಿಗೆ ಪ್ರತ್ಯೇಕ ನರಕವಿನ್ನೇಕೆ ಎಂದು ಕೈ ಬಿಟ್ಟಿರಬೇಕು. ಅಂತೂ ಪರಮ ಕವೀಂದ್ರರ ಕಾವ್ಯಗಳು ಪಾಪ, ಪುಣ್ಯ, ಸ್ವರ್ಗ, ನರಕ, ಹಿತ, ಅಹಿತ, ಸುಖ ದುಃಖ ಇತ್ಯಾದಿಗಳನ್ನು ತಿಳಿಸಿ ಹೇಳುವ ಸಂಹಿತೆಗಳಾಗಿದ್ದವು.

**ದಂತಕಥೆ**

ಹರಿಹರ ರಾಘವಾಂಕರ ನಡುವೆ ಸಂಭವಿಸಿದ ಅನ್ವರ್ಥ ರೂಪದ ದಂತಕಥೆಯೊಂದಿದೆ. ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯವನ್ನು ಬರೆದು ಗುರುಗಳಾದ ಹರಿಹರನಿಗೆ ಅರ್ಪಿಸಲು ಅದು ಭೂರಮಣನ ಕಥೆಯೆಂದು ಆತ ಒಪ್ಪಿಕೊಳ್ಳದೆ ತಿರಸ್ಕರಿಸುವನು. ಏಕೆಂದು ಶಿಷ್ಯ ಕೇಳಲು, ಹರಿಶ್ಚಂದ್ರನಿಗೆ ದೇವರು ಕರುಣಿಸಿದಾಗ ಕೈವಲ್ಯವನ್ನು ಪಡೆಯದೆ ತಿರುಗಿ ಸಾಮ್ರಾಜ್ಯವನ್ನು ಪಡೆದನಲ್ಲ ಆದ್ದರಿಂದ ಆತ ಭಕ್ತನಲ್ಲ ಎನ್ನುವನು. ಆದರೆ ಶಿಷ್ಯ ಸುಮ್ಮನಿರದೆ ಆತ ಸತ್ಯಕ್ಕಾಗಿ ತನ್ನ ಸತಿಸುತರನ್ನಲ್ಲದೆ ತನ್ನನ್ನೂ ಮಾರುಗೊಂಡನಲ್ಲ ಆದ್ದರಿಂದ ಹರಿಶ್ಚಂದ್ರ ದೊಡ್ಡವನುಎಂದು ಮುಂತಾಗಿ ವಾದಿಸುವನು. ಇದರಿಂದ ಕುಪಿತನಾದ ಹರಿಹರ ತನ್ನ "ಪಾವುಗೆ" (ಮೆಟ್ಟು)ಗಳಿಂದ ರಾಘವಾಂಕನ ಮುಸುಡಿಗೆ ಅಪ್ಪಳಿಸಲು ಅವನ ಹಲ್ಲುಗಳು ಧರೆಗುಳಿದವು (ಮರದ ಪಾವುಗೆಗಳಿರಬಹುದು) ಅನಂತರ ಕವಿ ಸಿದ್ಧ ರಾಮಚಾರಿತ್ರ, ಸೋಮನಾಥ ಚಾರಿತ್ರ ಮುಂತಾದ ಕಾವ್ಯಗಳನ್ನು ಬರೆದು ಗುರು ಕಾರುಣ್ಯಕ್ಕೆ ಒಳಗಾಗಿ ಮತ್ತೆ ಹಲ್ಲುಗಳನ್ನು ಪಡೆದನೆಂದು ಚಿಕ್ಕನಂಜೇಶನು ಬರೆದ ರಾಘವಾಂಕ ಚರಿತೆಯಿಂದ ತಿಳಿದು ಬರುತ್ತವೆ. ಆದರೆ ರಸಸಿದ್ಧಿಯ ದೃಷ್ಟಿಯಿಂದ ಸಹೃದಯ ಪ್ರಿಯವಾದುದು ಹರಿಶ್ಚಂದ್ರ ಕಾವ್ಯವೇ ಹೊರತು ಅವನ ಮಿಕ್ಕ ಕಾವ್ಯಗಳಲ್ಲ ಎಂಬುದನ್ನು ರಸಿಕ ಲೋಕ ಬಲ್ಲುದು.

ಹರಿಹರನ ಬಗ್ಗೆ ಇರುವ ಇನ್ನೊಂದು ಐತಿಹ್ಯವನ್ನೂ ಇಲ್ಲಿಯೇ ಹೇಳಬಹುದು. ಕವಿ ಬೇಲೂರಿನಲ್ಲಿ ಕರಣಿಕನಾಗಿದ್ದಾಗ ಹಂಪೆಯಲ್ಲಿ ವಿರೂಪಾಕ್ಷನ ದೇವಾಲಯದ ತೆರೆಗೆ ಉರಿ ಮುಟ್ಟಿದಂತೆಯೂ ಅದನ್ನು ಕೈಗಳಿಂದ ಒರಸಿ ಅವನು ಆರಿಸಿದಂತೆಯೂ ಸಿದ್ಧನಂಜೇಶನ ಹೇಳಿಕೆ ಇದೆ. ಇಂಥ ವಿಚಾರಗಳು ಜನಪದರಲ್ಲಿ ಸದಾ



ಹಸುರಾಗಿಯೆ ಇರುತ್ತವೆ. ಈ ಹಿನ್ನೆಲೆಯಲ್ಲಿ ಅವರ ಶ್ರದ್ಧಾ ಭಕ್ತಿಗಳನ್ನು ಗುರ್ತಿಸಬಹುದು.

**ರಾಘವಾಂಕನ ಕಾವ್ಯಗಳಲ್ಲಿ ಗಾದೆಗಳ ಪ್ರಯೋಗ**

ಸಿಡಿಲು ಹೊಡೆವಡೆ ಹಿಡಿದ ಕೊಡೆ ಕಾವುದೇ? (೨-೩೧) ಹರಿಶ್ಚಂದ್ರ ಕಾವ್ಯ

ರಾಜ್ಯಸಿರಿ ತೊಲಗಿದರೆ ಪೂರ್ವಗುಣವಳಿವುದೆ? (೧೧-೩೩) ಅದೇ

ಹೇರನೊಪ್ಪಿಸಿದವಂಗೆಲ್ಲಿಯದು ಸುಂಕ? (೧-೫೪) ಅದೇ

ರವಿ ಕಾಣದುದ ಕವಿ ಕಂಡ (೩-೩೫) ಅದೇ.......

ಹೊಲಗೆರೆಯ ಜಲದ ನಡುವೆ ಬಿಂಬಿಸುವ ರವಿಹೊಲಯನೆ (೮-೨೯) ಅದೇ......

ಮೆಣಸು ಹುಳಿತಡೆ ಜೋಳದಿಂ ಕುಂದೆ? (೧೧-೧೯) ಅದೇ.....

ಕುಲವನಾಲಗೆಯರುಹಿತು (೩-೨೨) ಅದೇ......

ಕೋಣನೆರಡುಂ ಹೋರೆಗಿಡುವಿಂಗೆ ಮೃತ್ಯು (೨-೧೨) ಅದೇ.....

ಕುಲದ ಬೇರ್ಗಕಟ ಕುಡುಗೋಲ್ವಿಡಿದೆಯಾ? (೨-೯೧) - ಸೋಮನಾಥ ಚರಿತೆ

ಸುಗ್ಗಿಯ ಕೊಟಾರದೊಳು ಮಳೆ ಬಂದಂತೆ (೨೮-೩೫) ಅದೇ.......

ಕಣ್ಣರಿಯದಿರ್ದಡಂ ಕರುಳರಿಯದೇ? (೧೦-೩೧) ಅದೇ......

ಕಾಣುವಾಗೆ ಬಾಯಂ ತೆರೆದು ಕಡಿವಾಣವಾದೊಡೆ ಆನೊಲ್ಲೆನ್ ಎನಬಹುದೆ? (೨-೮೮) ಅದೇ

ಕಾಣೆಗಾಡಿ ಕಡವ ಬಿಡುವರೆ? (೧-೩೧) ಅದೇ.......

ಕಣ್‌ಗುರುಡನೇಗೈದುವುಂ ಕಾಣದಿರೆ ಮುಕುರ ಕೆಡುವುದೇ? (೧-೩೦) ಅದೇ......

ಗೆಳೆಗೊಂಡ ಪಗೆಯಂತೆ (೨-೯೯) ಅದೇ......

ಬೆಂದ ಕಣ್ಣು ಕಂಬಿಯಲಿ ಕೀಸಲೇಕೆ? (೪-೪೦) ಅದೇ......

ನಡೆವರೆಡಹದೆ ಬರುಬರೆಡಹುವರೆ? (೧-೧೮) ಅದೇ.......

ಪೊಡಮಡಲು ದೇಗುಲಂ ಬಿರ್ದುದು (೧-೨೩) ಸಿದ್ಧರಾಮ ಚಾರಿತ್ರ

ಮುನ್ನಮಾಡದೆ ಬಂದು ಬಯಸಲೆಲ್ಲಿಹುದು? (೮-೨೩) ಅದೇ

ಅರುವತ್ತು ತುಂಬಿದೊಡೆ ಮರುಮಾತುಬೇಡ (೧-೪೫) ಅದೇ......

ಲೋಹಸಂಗದಿಂ ಕಿಚ್ಚು ಬಡಿಹಡೆದುದು (೯-೪೧) ಅದೇ......

ನೆರೆಯವರಿಗತ್ತು ಕಣ್ಣು ಹೋಹಂದ (೯-೪೧) ಅದೇ.......

ಬೇರ ಬಲ್ಲವರಿಗೆ ಎಲೆದೋರಲೇಕೆ? (೨-೧೦) ಹರಿಶ್ಚಂದ್ರ ಕಾವ್ಯ

ಸೀಗೆಯೊಳಗಣ ಬಾಳೆಯಂತೆ (೧೨-೧೩) ಅದೇ......

ಹೆತ್ತ ತಾಯಂ ಮಾರಿ ತೊತ್ತಕೊಂಬರೆ? (೮-೭೬) ಅದೇ.......

ಮೂಗನಿತ್ತು ಕನ್ನಡಿಯ ನೋಡುವರೆ? ಅದೇ......

ಕತ್ತುರಿಯ ಸುಟ್ಟು ಅರಳ ಕುರುಕಲನುಗೆಯ್ವರೆ? ಅದೇ.......

ಕೀಲಿಂಗೆ ದೇಗುಲವನಳಿವ ದರ್ಪ (೩-೧೦) ಅದೇ........

ನಡೆವರೆಡಹದೆ ಕುಳಿತರೆಡಹುವರೆ? (೧-೨೩) ಅದೇ......

ಪಶುಕರುವ ಮೆಟ್ಟಿದೊಡೆ ಗೂಳಿಯಂ ಸದೆವವನ ಕಥೆ (೨-೨೬) ಅದೇ

ಕೊಡವಾಲ ಕೆಡಿಸುವೊಡಾಮ್ಲವೆನಿತಾಗಬೇಕು? (೭-೨೨) ಅದೇ.......

ಮರೆದುರೆ ಮೆಟ್ಟಿದೊಡೆ ಮುಳ್ಳುನೆಡದಿಹುದೇ? (೬-೪೭) ಅದೇ........

ರೋಗಿಹಳಿದೊಡೆ ಹಾಲು ಹುಳಿಯಪ್ಪುದೆ? (೧-೨೮) ಅದೇ......

ಹೊಟ್ಟೆ ನೊಂದಡೆ ತುರುಬ ಕೊಯ್ವಂತೆ (೨-೨೬) ಅದೇ.......

ಕರ್ಪುರವನುರುಹಿ ಕಿಚ್ಚಂ ಕಾಯ್ವಂತೆ (೩-೧೦) ಅದೇ.......

ಕದಳಿವನದೊಳು ಸೂನಿಗೆಯ ಬಂಡಿಯೋಡಿದಂತೆ (೬-೨೫) ಅದೇ........

ನಾಯ್ಗೆ ಹಾಲುಳ್ಳಡಾವನೂಟಕ್ಕೆ ಯೋಗ್ಯಂ (೭-೧೮) ಅದೇ......

ಹಸಿದ ಹುಲಿಯ ಮೀಸೆಯನು ಹಿಡಿದಲುಗಿ ನೋಡಿದೆ (೮-೧೨) ಅದೇ....

ತುಂಬಿರ್ದ ಬಂಡಿಗೆ ಮೊರಂದಿಮ್ಮಿತ್ರೇ? (೮-೨೬) ಅದೇ.......

ಹೊಲಗೆಟ್ಟ ಕರು ತಾಯನರಸುವಂತೆ (೮-೭೧) ಅದೇ........

ಹಗಲೊಗೆದ ಚಂದ್ರಕಳೆಯಂತೆ (೮-೭೨) ಅದೇ.......



ಕುಡಿದೌಷಧಂ ಬಾಯ್ಗೆನಿಗ್ರಹಂ ಮಾಡಿ ತಾಳ್ದೊಡಲಿಂಗೆ ಸುಖವನೀವಂತೆ (೧೪-೩) ಅದೇ.......

### ಕೆಲವು ದೇಸಿ ನುಡಿಗಟ್ಟುಗಳು

ಕೆಡಹಿ ಹುಡುಕುನೀರದ್ದುವೆನ್ (೮-೧೫) ಹರಿಶ್ಚಂದ್ರ ಕಾವ್ಯ

ಕೇರಿ ತೂರಿ ನೋಡುವೆನು (೮-೩೮) ಅದೇ.......

ಕಲೆ ಮೊಳೆವಂತೆ (೮-೪೨) ಅದೇ.......

ಸೀಗೆಯೊಳಗಣ ಬಾಳೆ (೧೨-೧೩) ಅದೇ.....

ಬೂದಿಯೊಳು ಬೀಳ್ವಂತೆ - ಸಿದ್ಧರಾಮ ಚಾರಿತ್ರ

### ಜಗಳದ ನಾಟು ನುಡಿ

ವಸಿಷ್ಠ : ಎಂದು ಭೂವರನಂ ಪರೀಕ್ಷಿಸುವೆಯ್?

ವಿಶ್ವಾಮಿತ್ರ : ಎನ್ನ ಮನ ಬಂದ ದಿನಮ್.

ವಸಿಷ್ಠ : ಎನಿತುಸೂಳ್?

ವಿಶ್ವಾಮಿತ್ರ : ಆತನೀ ಧರೆಯೊಳಿಪ್ಪಂದುತನಕ.

ವಸಿಷ್ಠ : ಆವ ಪರಿಯೊಳು?

ವಿಶ್ವಾಮಿತ್ರ : ಸಹಸ್ರವಿಧದೊಳು.

ವಸಿಷ್ಠ : ದಿಟವೆ?

ವಿಶ್ವಾಮಿತ್ರ : ದಿಟವು.

### ಹಂದಿ ಬೇಟೆಯ ದೇಸಿ ನುಡಿ

ರಾಜ : ಪಡೆಯೆಯ್ದೆ ಮಡಿಯಿತ್ತೆ?

ಶಬರ : ಮಡಿಯಿತ್ತು.

ರಾಜ : ನಾಯ್‌ಕೂಡೆ ಕೆಡದವೇ?

ಶಬರ : ಕೆಡೆದವು.

ರಾಜ : ಹಂದಿಯಿರ್ದಪುದೆ?

ಇಂಥ ಔಚಿತ್ಯ ಪ್ರಜ್ಞೆ ಹರಿಹರನಲ್ಲಿದೆ, ಆದರೆ ರಾಘವಾಂಕನಿಗೆ ಅದು ಆಗಾಗ ಕೈಕೊಟ್ಟಿದೆ. ಇಷ್ಟು ಹೇಳಿ "ಜಾನಪದ ಮತ್ತು ಹರಿಹರ - ರಾಘವಾಂಕ" ಎಂಬ ಈ ಬರವಣಿಗೆಯನ್ನು ಇಲ್ಲಿಗೆ ನಿಲ್ಲಿಸಲಾಗಿದೆ.

ಸಾವಿರಾರು ವರ್ಷಗಳ ಕನ್ನಡ ಸಾಹಿತ್ಯವನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಇದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿಯನ್ನು ಒದಗಿಸಿರುವುದನ್ನು ಗುರುತಿಸಬಹುದಾಗಿದೆ. ಪಂಪ, ರನ್ನ, ನಾಗವರ್ಮ, ನಯಸೇನ, ಬಂಧುವರ್ಮ, ಶಿವಕೋಟ್ಯಾಚಾರ್ಯ, ಬ್ರಹ್ಮಶಿವ, ಮುಂತಾದ ಎಲ್ಲಾ ಪ್ರಾಚೀನ ಕವಿಗಳಲ್ಲಿ, ವಚನ ಕೀರ್ತನೆ ರಗಳೆಗಳಲ್ಲಿ; ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ; ಆಧುನಿಕ ಕತೆ, ಕಾದಂಬರಿ, ನಾಟಕ, ಕವಿತೆಗಳಲ್ಲಿ ಒಂದಲ್ಲ ಒಂದು ಪ್ರಮಾಣದಲ್ಲಿ ಈ ಜಾನಪದ ಅಂಶಗಳು ಜೀವಸತ್ವಗಳಾಗಿರುವುದನ್ನು ಸೂಕ್ಷ್ಮ ಪರಿಶೀಲನೆಯಿಂದ ಗುರುತಿಸಬಹುದಾಗಿದೆ.

ಸಾಹಿತ್ಯ ಹಿಡಿ ಮಂದಿಗಲ್ಲ, ಬಹುಮಂದಿಗೆ ಮತ್ತು ಬಹುಮಂದಿಯ ಜೀವನ ಸಾಕ್ಷಾತ್ಕಾರಕ್ಕೆ ಎಂಬ ಪ್ರಧಾನ ಕಾಳಜಿಯನ್ನು ವಚನಕಾರರು ಅನನ್ಯವಾಗಿ ತಮ್ಮ ವಚನಗಳಲ್ಲಿ ಪುನರವತಾರ ಮಾಡಿಸಿದ ಕಾರಣದಿಂದಾಗಿ ಸಹಜವಾಗಿ ವಚನ ಸಾಹಿತ್ಯ ಮತ್ತು ಅದರ ಜಾಡನ್ನೇ ಹಿಡಿದ ರಗಳೆ, ತ್ರಿಪದಿ ಸಾಹಿತ್ಯಗಳು ತಮ್ಮ ಸಾಹಿತ್ಯದ ಕೇಂದ್ರ ನೆಲೆಗಳನ್ನಾಗಿ ಜನರ ಭಾಷೆ, ಅನುಭವ ಮತ್ತು ಆಶಯಗಳನ್ನು ಆಶ್ರಯಿಸಿದವು. ಹಾಗೆಯೇ ರಾಜರನ್ನು ರಾಜಾಸ್ಥಾನವನ್ನು ಧಿಕ್ಕರಿಸಿ ಉದ್ದೇಶಪೂರ್ವಕವಾಗಿ ಜನದೆಡೆ ಕಣ್ಣು ತೆರೆದ ಕವಿಗಳು ಪುರಾಣ ಲೋಕಕ್ಕಿಂತ ವಿಶಿಷ್ಟವಾದ ಭಿನ್ನವಾದ ಮತ್ತು ಜೀವಂತವಾದ ಹೊಸ ಅನುಭವ ಲೋಕವನ್ನು ತಮ್ಮದನ್ನಾಗಿ ಮಾಡಿಕೊಂಡರು. ಹೀಗಾಗಿ ಸಾಹಿತ್ಯದ ವಸ್ತುವಿನಲ್ಲಿ, ಭಾಷೆಯಲ್ಲಿ, ಛಂದಸ್ಸಿನಲ್ಲಿ, ಪಾತ್ರ ಸೃಷ್ಟಿಯಲ್ಲಿ, ಆವರಣ ನಿರ್ಮಾಣದಲ್ಲಿ ಹಾಗೂ ನಿರೂಪಣೆಯಲ್ಲಿ ಜಾನಪದ ಆಶಯಗಳನ್ನು ಸಹಜವಾಗಿ ತುಂಬಿಕೊಂಡು ಈ ಸಾಹಿತ್ಯವನ್ನು ಜಡ್ಡು ಕಟ್ಟಿದ ರಾಜಾಸ್ಥಾನ ಸಾಹಿತ್ಯದ ಸಂಕೋಲೆಗಳಿಂದ ಹೊರಗೆಳೆದು ಜನರ ನಡುವೆ ತಂದವು.

ನಮ್ಮ ಸಾವಿರ ವರ್ಷಕ್ಕೂ ಹೆಚ್ಚುಕಾಲ ಬೆಳೆದು ಬಂದಿರುವ ಕನ್ನಡದ ಶಿಷ್ಟ ಸಾಹಿತ್ಯ ಎಷ್ಟು ಮತ್ತು ಹೇಗೆ ಜಾನಪದ ಸಂವೇದನೆಯನ್ನು ಕಲಾಪೂರ್ಣವಾಗಿ ಪ್ರಕಟಿಸಿದೆ ಎಂಬುದನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಅತ್ಯಂತ ಫಲಪ್ರದವೆಂದು ಭಾವಿಸಲಾಗಿದೆ. ಆದ್ದರಿಂದ ಅಕಾಡೆಮಿ 'ಶಿಷ್ಟ ಸಾಹಿತ್ಯ ಮತ್ತು ಜಾನಪದ ಸಂವೇದನೆ' ಎಂಬ ವಿಶಿಷ್ಟ ಮಾಲಿಕೆಯನ್ನು ಆರಂಭಿಸಿ ಪ್ರಾಚೀನ ಸಾಹಿತ್ಯದಿಂದ ಹಿಡಿದು ಇತ್ತೀಚಿನ ಸಾಹಿತ್ಯವನ್ನು ಜಾನಪದೀಯ ದೃಷ್ಟಿಯಿಂದ ತೌಲನಿಕವಾಗಿ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವೊಂದನ್ನು ಮಾಡುತ್ತಿದೆ. ಅದರ ಫಲವೇ ಈಗ ಬೆಳಕು ಕಾಣುತ್ತಿರುವ ಹನ್ನೆರಡು ಪುಸ್ತಕಗಳು.

ಡಾ. ಎಚ್. ಜೆ. ಲಕ್ಕಪ್ಪಗೌಡ